ಭಾರತ ಕಮ್ಯುನಿಸ್ಟ್ ಪಕ್ಷ
(ಮಾರ್ಕ್ಸ್‌ವಾದಿ)

# 21ನೇ ಮಹಾಧಿವೇಶನದ
# ಕರಡು ರಾಜಕೀಯ ನಿರ್ಣಯ

(ಜನವರಿ 19–21, 2015 ರಲ್ಲಿ
ಹೈದರಾಬಾದ್‌ನಲ್ಲಿ ನಡೆದ
ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ್ದು)

# ಭಾರತ ಕಮ್ಯುನಿಸ್ಟ್ ಪಕ್ಷ
# (ಮಾರ್ಕ್ಸ್‌ವಾದಿ)

# 21ನೇ ಮಹಾಧಿವೇಶನದ
# ಕರಡು ರಾಜಕೀಯ ನಿರ್ಣಯ

**(ಹೈದರಾಬಾದ್‌ನಲ್ಲಿ ಜನವರಿ 19–21, 2015 ರಲ್ಲಿ ನಡೆದ**
**ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ್ದು)**

# ಅಂತರ್ರಾಷ್ಟ್ರೀಯ ಸನ್ನಿವೇಶ

1.1 ದೇಶದಲ್ಲಿ ಒಂದು ದೊಡ್ಡ ರಾಜಕೀಯ ಬದಲಾವಣೆ ಆಗಿದೆ. ಮೋದಿ ಸರಕಾರದ ಆಗಮನ ಭಾರತೀಯ ರಾಜಕಾರಣದಲ್ಲಿ ಬಲಪಂಥದತ್ತ ಪಲ್ಲಟದ ಕ್ರೋಢೀಕರಣವನ್ನು ಪ್ರತಿನಿಧಿಸುತ್ತದೆ. ಇದು ಒಂದು ಸಾಮ್ರಾಜ್ಯಶಾಹಿ–ಪರ ನೆಲೆಯೊಂದಿಗೆ ನವ–ಉದಾರವಾದಿ ಒತ್ತು ಮತ್ತು ಹಿಂದುತ್ವ ಓಟವನ್ನು ಒಟ್ಟಿಗೆ ಬೆಸೆದಿದೆ. ಅದಾಗಲೇ ನಗ್ನವಾದ ದೊಡ್ಡ ವ್ಯಾಪಾರಸ್ಥರ ಪರವಾದ ಧೋರಣೆಗಳ ಪ್ರಭಾವವನ್ನು ಕಾಣಬಹುದಾಗಿದೆ. ಇವು ಸಾಮಾಜಿಕ ಅಸಮಾನತೆಗಳನ್ನು ಇನ್ನಷ್ಟು ಆಳಗೊಳಿಸುತ್ತವೆ ಮತ್ತು ದುಡಿಯುವ ಜನರ ಶೋಷಣೆಯನ್ನು ತೀವ್ರಗೊಳಿಸುತ್ತವೆ. ಇದು ಹಿಂದುತ್ವ ಶಕ್ತಿಗಳ ದಾಳಿಗಳೊಂದಿಗೆ ಸೇರಿಕೊಂಡು, ವರ್ಗಶಕ್ತಿಗಳ ಬಲಾಬಲವನ್ನು ದುಡಿಯುವ ಜನತೆಯ ಪರವಾಗಿ ಬದಲಿಸುವ ನಮ್ಮ ಉದ್ದೇಶಕ್ಕೆ ಹೊಸ ಮತ್ತು ಗಂಭೀರ ಸವಾಲುಗಳನ್ನು ಎಸೆದಿದೆ. ಸನ್ನಿವೇಶವನ್ನು ಸರಿಯಾಗಿ ಗ್ರಹಿಸಲು ರಾಷ್ಟ್ರೀಯ ಸನ್ನಿವೇಶದ ಮೇಲೆ ಒಂದು ನೇರ ಸಂಬಂಧವಿರುವ ಅಂತರ್ರಾಷ್ಟ್ರೀಯ ಸನ್ನಿವೇಶವನ್ನು ಮೊದಲು ವಿಶ್ಲೇಷಿಸುವುದು ಅಗತ್ಯವಾಗಿದೆ.

1.2 20ನೇ ಮಹಾಧಿವೇಶನದ ನಂತರದ ಅಂತರ್ರಾಷ್ಟ್ರೀಯ ಸನ್ನಿವೇಶದ ಚಿತ್ರಣ ಹೀಗಿದೆ:

(i) 2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನಿಂದ ಒಂದು ಅನಿಶ್ಚಿತ ಮತ್ತು ಸತ್ವಹೀನ ಚೇತರಿಕೆ

(ii) ಅಮೆರಿಕ ಸಂಯುಕ್ತ ಸಂಸ್ಥಾನ ಮಿಲಿಟರಿ ಹಸ್ತಕ್ಷೇಪಗಳು ಮತ್ತು ಹಣಕಾಸು ಹಾಗು ಬ್ಯಾಂಕಿಂಗ್ ವ್ಯವಸ್ಥೆಗಳಲ್ಲಿ ತನ್ನ ನಿಯಂತ್ರಣ, ಮೀಸಲು ಕರೆನ್ಸಿಯಾಗಿ ಡಾಲರ್ ಮತ್ತು ಅತಿ ಮುಖ್ಯ ತಂತ್ರಜ್ಞಾನದ ಮೂಲಕ ವಿಶ್ವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತನ್ನ ಪ್ರಾಬಲ್ಯದ ಪಾತ್ರದ ಮೂಲಕ ತನ್ನ ಆಧಿಪತ್ಯದ ಪಾತ್ರವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮುಂದುವರೆಸುತ್ತಿರುವುದು.

(iii) ಪಶ್ಚಿಮ ಏಶ್ಯಾದ ಇರಾಕ್, ಲಿಬ್ಯ ಮತ್ತು ಸಿರಿಯಾದಲ್ಲಿ ಅಮೆರಿಕಾ ನೇತೃತ್ವದ ಹಸ್ತಕ್ಷೇಪಗಳ ವಿಧ್ವಂಸಕಾರಿ ಪರಿಣಾಮಗಳು, ಅದರಿಂದಾಗಿ ವ್ಯಾಪಕವಾದ ಮಾನವ ಅನಾಹುತಗಳು ಮತ್ತು ಉದಯಗೊಳ್ಳುತ್ತಿರುವ ಇಸ್ಲಾಮೀಯ ಉಗ್ರವಾದ.

(iv) ಅಮೆರಿಕ ಮತ್ತು ನಾಟೋ ಪಡೆಗಳು ಪೂರ್ವದತ್ತ, ಹೆಚ್ಚು ನಿರ್ದಿಷ್ಟವಾಗಿ ಉಕ್ರೇನಿನತ್ತ ವಿಸ್ತರಿಸಿದ್ದರಿಂದ ರಶ್ಯದೊಂದಿಗೆ ಹೊಸದೊಂದು ಸುತ್ತಿನ ಮುಖಾಮುಖಿ.

(v) ಏಶ್ಯಾದ ಮೇಲೆ ಅಮೆರಿಕದ ಗಮನ ಕೇಂದ್ರೀಕರಣ ಮತ್ತು ಅದರಿಂದಾಗಿ ಚೀನಾದ ಬೆಳೆಯುತ್ತಿರುವ ಶಕ್ತಿ ಮತ್ತು ಪ್ರಭಾವವನ್ನು ತಡೆದಿಡುವ ಉದ್ದೇಶದ

ವ್ಯೂಹಾತ್ಮಕ ಮತ್ತು ಮಿಲಿಟರಿ ಕಸರತ್ತುಗಳು.

(vi) ರಶ್ಯ ಮತ್ತು ಚೀನಾದ ನಡುವೆ ಬೆಳೆಯುತ್ತಿರುವ ವ್ಯೂಹಾತ್ಮಕ ಸಹಕಾರ; 'ಬ್ರಿಕ್ಸ್' ದೇಶಗಳ ನಡುವೆ ಪರಸ್ಪರ ಸಹಕಾರವನ್ನು ಬಲಪಡಿಸುವ ಕ್ರಮಗಳು:ಲ್ಯಾಟಿನ್ ಮತ್ತು ದಕ್ಷಿಣ ಅಮೆರಿಕದಲ್ಲಿ ಪ್ರಾದೇಶಿಕ ಸಹಕಾರ; ಇವೆಲ್ಲದರ ಫಲಿತಾಂಶವಾಗಿ ಬಹುಧ್ರುವೀಯತೆಯ ಪ್ರವೃತ್ತಿ ಬಲಗೊಂಡಿರುವುದು.

(vii) ಯುರೋಪಿನಲ್ಲಿ ಕಾರ್ಮಿಕ ವರ್ಗದ ಹೋರಾಟಗಳು ಮತ್ತು ಮಿತವ್ಯಯದ ಕ್ರಮಗಳ ವಿರುದ್ಧ ಜನಪ್ರಿಯ ಆಂದೋಲನಗಳು ಹಾಗೂ ಹೊಸ ಎಡಪಂಥೀಯ ಮತ್ತು ಜನಪ್ರಿಯ ಪಕ್ಷಗಳು ಮತ್ತು ಆಂದೋಲನಗಳು ಮೂಡಿ ಬಂದಿರುವುದು.

(viii) ವೆನೆಝುವೆಲದಲ್ಲಿರುವಂತೆ ಸಾಮ್ರಾಜ್ಯಶಾಹಿ ಬೆಂಬಲಿತ ದಮನಕ್ಕೆ ಎದುರಾಗಿ ಹೋರಾಟವನ್ನು ಮುಂದುವರೆಸಿರುವ ಎಡ–ನೇತೃತ್ವದ ಸರಕಾರಗಳು. ಅವು, ಬೊಲಿವಿಯ, ಉರುಗ್ವೆ ಮತ್ತು ಇಕ್ವೆಡೊರ್‌ನಲ್ಲಿ ಇರುವಂತೆ ಒಂದು ಪರ್ಯಾಯ ಪಥಕ್ಕೆ ತಮ್ಮ ಬೆಂಬಲವನ್ನು ಕಾಪಾಡಿಕೊಂಡಿವೆ.

## ಜಾಗತಿಕ ಆರ್ಥಿಕತೆ

1.3 ಈಗ ಚಾಲ್ತಿಯಲ್ಲಿರುವ ಬಿಕ್ಕಟ್ಟು ಒಂದು ಅಪರೂಪದ ವಿದ್ಯಮಾನವಲ್ಲ. ಅದೊಂದು ವ್ಯವಸ್ಥಾಗತವಾದ, ಬಂಡವಾಳಶಾಹಿ ವ್ಯವಸ್ಥೆಯಲ್ಲೇ ಅಡಕವಾದ ನಿಯಮಗಳಲ್ಲೇ ಆಳವಾಗಿ ಬೇರು ಹೊಂದಿರುವ ಬಿಕ್ಕಟ್ಟು. ಈ ಹಣಕಾಸು ಬಿಕ್ಕಟ್ಟು 2007–08ರಲ್ಲಿ ಭುಗಿಲೆದ್ದದ್ದು ಲಂಗುಲಗಾಮಿಲ್ಲದ ಸಾಲನೀಡಿಕೆ ಮತ್ತು ಸಟ್ಟಾಕೋರತನದಿಂದಾಗಿ, ಮತ್ತು ಅದರ ಫಲಿತಾಂಶವಾಗಿ ಕಾರ್ಪೊರೇಟ್ ದೀವಾಳಿಗಳಿಗೆ ದಾರಿ ಮಾಡಿಕೊಟ್ಟ ಸಬ್–ಪ್ರೈಮ್(ಅಪಾತ್ರ ಸಾಲ) ಬಿಕ್ಕಟ್ಟು ಸಂಭವಿಸಿತು. ಪ್ರಭುತ್ವದಿಂದ ಬ್ಯಾಂಕುಗಳನ್ನು ಮತ್ತು ಹಣಕಾಸು ಕಾರ್ಪೊರೇಷನ್‌ಗಳನ್ನು ಪಾರು ಮಾಡುವ ಬೃಹತ್ ಪ್ರಮಾಣದ ಕ್ರಮಗಳು ಮುಂದಿನ ಘಟ್ಟವಾಗಿತ್ತು. ಬಿಕ್ಕಟ್ಟಿನ ಒಂದೊಂದು ಘಟ್ಟವನ್ನು ಮೀರಿ ನಿಲ್ಲಲು ಆಳುವ ವರ್ಗಗಳು ಕೈಗೊಂಡ ಕ್ರಮಗಳ ಅರ್ಥವೆಂದರೆ ಹೆಚ್ಚೆಚ್ಚು ತೀವ್ರಗೊಂಡ ದುಡಿಯುವ ಜನಗಳ ಶೋಷಣೆ ಮತ್ತು ಅವರ ಜೀವನಾಧಾರಗಳು ಮತ್ತು ಸಾಮಾಜಿಕ ಕಲ್ಯಾಣದ ಮೇಲೆ ದಾಳಿಗಳು.

1.4 ಬಿಕ್ಕಟ್ಟಿನ ಪ್ರಸಕ್ತ ಘಟ್ಟ, ಸರಕಾರಗಳು ಖರ್ಚುಗಳನ್ನು ತೀವ್ರ ಪ್ರಮಾಣದಲ್ಲಿ ಕಡಿತ ಮಾಡುವುದು ಮತ್ತು 'ಕಠಿಣ ಕ್ರಮ'ಗಳನ್ನು ಹೇರುವುದರೊಂದಿಗೆ ಅನಾವರಣಗೊಳ್ಳುತ್ತಿದೆ. ಇದು ದುಡಿಯುವ ಜನಗಳು ಕಷ್ಟಪಟ್ಟು ಗಳಿಸಿದ ಹಕ್ಕುಗಳ ಮೇಲೆ ನಡೆಯುತ್ತಿರುವ ನಗ್ನ ದಾಳಿ. ಅವರ ಆರ್ಥಿಕ ಹಕ್ಕುಗಳ ಮೇಲೆ ದಾಳಿಗಳೊಂದಿಗೆ ಅವರ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳ ಮೇಲೆ

ದಾಳಿ ನಡೆಯುತ್ತವೆ. ಇದು ಒಂದು ಭವಿಷ್ಯದ ಬಿಕ್ಕಟ್ಟಿನ ಬೀಜ ಬಿತ್ತುತ್ತದೆ, ಅದರಿಂದಾಗಿ ಜನತೆಯ ಖರೀದಿ ಶಕ್ತಿಯಲ್ಲಿ ಆಗುವ ಇಳಿಕೆ ಈ ಪ್ರಸಕ್ತ ಬಿಕ್ಕಟ್ಟನ್ನು ತೀವ್ರಗೊಳಿಸುತ್ತದೆ.

1.5 ಈ ಹಿನ್ನೆಲೆಯಲ್ಲಿ, ಆರ್ಥಿಕ ಚೇತರಿಕೆ ಎಂಬುದೇನಾದರೂ ಇದ್ದರೆ ಅದು ಒಂದು ಸೀಮಿತ ಭೌಗೋಳಿಕ ಪ್ರದೇಶದಲ್ಲಿ(ಪ್ರಧಾನವಾಗಿ ಅಮೆರಿಕಾದಲ್ಲಿ) ಮಾತ್ರ ಕಾಣಬರುತ್ತಿದೆ, ಮತ್ತು ಅಲ್ಲಿ ಕೂಡ ಅದು ಇನ್ನೂ ದುರ್ಬಲವಾಗಿದೆ, ಮತ್ತು ಉದ್ಯೋಗದ ಪ್ರವೃತ್ತಿಗಳಿಗಿಂತ ಹೆಚ್ಚಾಗಿ ಜಿಡಿಪಿ ಬೆಳವಣಿಗೆಯ ಸಂಖ್ಯೆಗಳಲ್ಲಿಯಷ್ಟೇ ಕಾಣುತ್ತದೆ. ಇನ್ನೊಂದೆಡೆ, ಯುರೋಪ್ ಇನ್ನೂ ಆರ್ಥಿಕ ಹಿಂಜರಿಕೆಯ ನಡುವೆಯೇ ಇದೆ, ಜಪಾನಿನ ದೀರ್ಘಕಾಲೀನ ಬೆಳವಣಿಗೆಯ ನಿಕೃಷ್ಟ ದಾಖಲೆ ಮತ್ತಷ್ಟು ಹದಗೆಡುತ್ತಿರುವುದು ಕಾಣಿಸುತ್ತಿದೆ. ಎಲ್ಲಕ್ಕೂ ಮಿಗಿಲಾಗಿ 'ಮೂಡುತ್ತಿರುವ ಮಾರುಕಟ್ಟೆಗಳು' ಎನ್ನಲಾಗುವವುಗಳು, ವಿಶೇಷವಾಗಿ ಚೀನಾ ಮತ್ತು ಭಾರತ, ಬೇರೆಡೆಗಳಲ್ಲಿನ ಕೆಳಮಟ್ಟದ ಬೆಳವಣಿಗೆಯನ್ನು ಸರಿಹೊಂದಿಸುವಂತವು ಎಂಬ ನಿರೀಕ್ಷೆ ಇದ್ದವುಗಳು, ಇತ್ತೀಚಿನ ಸಮಯದಲ್ಲಿ ಬೆಳವಣಿಗೆಯ ವೇಗದಲ್ಲಿ ಇಳಿಕೆಯನ್ನು ಅನುಭವಿಸುತ್ತಿವೆ.

1.6 2009ರಿಂದೀಚೆಗೆ ಜಾಗತಿಕ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಹಿಂಜರಿತದ ಮೊದಲು ಸಾಧಿಸಿದ ದರದ ಸರಾಸರಿ 40ಶೇ.ದಷ್ಟು ಮಾತ್ರ ಮತ್ತು ದೀರ್ಘಾವಧಿ ಸರಾಸರಿಯ 60ಶೇ. ಮಾತ್ರ. ಜಾಗತಿಕ ಬಂಡವಾಳಶಾಹಿಯ ಉತ್ಪಾದಕ ವಲಯಗಳು ಬಹಳ ನಿಧಾನವಾಗಿ ಬೆಳೆಯುತ್ತಿವೆ. ಅಂಕ್ಟಾಡ್(ವಿಶ್ವ ಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ)ದ 2014 ರ ವರದಿಯ ಪ್ರಕಾರ ವಿಶ್ವ ಆರ್ಥಿಕ 2012ರಲ್ಲಿಯೂ, 2013ರಲ್ಲಿಯೂ 2.3 ಶೇ.ದಷ್ಟು ಮಾತ್ರ ಬೆಳೆಯಿತು. 2014ರಲ್ಲಿ ಇದಕ್ಕಿಂತ ಉತ್ತಮಗೊಳ್ಳುವ ನಿರೀಕ್ಷೆ ಇಲ್ಲ. ಚೀನಾ ಮಾತ್ರವೇ 2014 ಮತ್ತು 2015ರಲ್ಲಿ 7ಶೇ. ದರದಲ್ಲಿ ಬೆಳೆಯುವ ನಿರೀಕ್ಷೆಯಿದೆ.

1.7 ಚೇತರಿಕೆಯನ್ನು ಇತರ ಹಲವಾರು ಅಂಶಗಳು ಇನ್ನಷ್ಟು ದುರ್ಬಲಗೊಳಿಸಿವೆ. ಅಮೆರಿಕಾದಲ್ಲಿ ಪ್ರಮಾಣಾತ್ಮಕ ಸುಗಮತೆಯ(ಡಾಲರ್ ಸಾಲವನ್ನು ಸುಗಮಗೊಳಿಸುವುದರ) ಪ್ರಮಾಣವನ್ನು ಇಳಿಸುವುದು "ಮೂಡುತ್ತಿರುವ" ಆರ್ಥಿಕಗಳಲ್ಲಿ ಬೆಳವಣಿಗೆ ಮತ್ತು ಪಾವತಿ ಬಾಕಿ ಪರಿಸ್ಥಿತಿಯನ್ನು ಪ್ರತಿಕೂಲವಾಗಿ ತಟ್ಟುತ್ತದೆ. ಅಂತರ್ರಾಷ್ಟ್ರೀಯ ತೈಲ ಬೆಲೆಗಳಲ್ಲಿ ತೀಕ್ಷ್ಣವಾದ ಇಳಿಕೆ ಹಲವು ಅಂಶಗಳು ಜೊತೆಗೂಡಿದ್ದರ ಫಲಿತಾಂಶ. ಆರ್ಥಿಕ ನಿಧಾನಗತಿಯಿಂದಾಗಿ ಜಾಗತಿಕ ಬೇಡಿಕೆಯಲ್ಲಿ ಇಳಿಕೆ, ಅಮೆರಿಕಾದಲ್ಲಿ ಷೇಲ್ ಗ್ಯಾಸ್(ಪದರಗಲ್ಲಿನಿಂದ ಅನಿಲ) ಶೋಧನೆಯಿಂದಾಗಿ ಹೆಚ್ಚಿದ ತೈಲ ಉತ್ಪಾದನೆ ಮತ್ತು ಇವಕ್ಕೆ ಪ್ರತಿಯಾಗಿ ತೈಲ ಉತ್ಪಾದನೆಯನ್ನು ಕಡಿತಗೊಳಿಸಲು ಸೌದಿ ಅರೇಬಿಯಾದ ಹಿಂಜರಿಕೆ. ತೈಲ ಬೆಲೆಗಳಲ್ಲಿ ಜಾರಿಕೆ ಈಗಾಗಲೇ ರಶ್ಯ, ಇರಾನ್ ಮತ್ತು ವೆನೆಝುವೆಲಗಳನ್ನು ತಟ್ಟಿದೆ. ತೈಲ ಬೆಲೆಗಳು ಬಿದ್ದಿರುವುದು ಜಾಗತಿಕ ಚೇತರಿಕೆಯ ಅನಿಶ್ಚಿತತೆಗಳಿಗೆ ತನ್ನ ಕೊಡುಗೆಯನ್ನು

ನೀಡಿದೆ. ಉಕ್ರೇನಿನಿಂದ ಪಶ್ಚಿಮ ಏಶ್ಯದ ವರೆಗೆ ಜಗತ್ತಿನೆಲ್ಲೆಡೆ ಏರುತ್ತಿರುವ ರಾಜಕೀಯ ಉದ್ವಿಗ್ನತೆಯೊಂದಿಗೆ 2015ರಲ್ಲಿ ವಿಶ್ವ ಬಂಡವಾಳಶಾಹಿ ಆರ್ಥಿಕದ ಬೆಳವಣಿಗೆಯ ನಿರೀಕ್ಷೆ ವಿಭಿನ್ನ ಪ್ರದೇಶಗಳಲ್ಲಿ ವಿಭಿನ್ನವಾಗಿದ್ದರೂ ಬಹಳ ಕಡಿಮೆ.

1.8 ನವ-ಉದಾರವಾದಿ ಬಂಡವಾಳಶಾಹಿ ಅತ್ಯಂತ ನಿಕೃಷ್ಟ ಅಸಮಾನತೆಗಳನ್ನು ಸೃಷ್ಟಿಸಿದೆ. ಜಾಗತಿಕ ಸಂಪತ್ತು ಕುರಿತ ಆಕ್ಸ್‌ಫಾಮ್ ವರದಿಯ ಪ್ರಕಾರ ವಿಶ್ವದ ಜನಸಂಖ್ಯೆಯಲ್ಲಿ ಕೇವಲ ಒಂದು ಶೇಕಡಾದಷ್ಟು ಮಂದಿ ವಿಶ್ವದ ಸಂಪತ್ತಿನ ಸುಮಾರು ಅರ್ಧದಷ್ಟರ ಒಡೆತನ ಹೊಂದಿದ್ದಾರೆ. ಜಗತ್ತಿನ ಒಂದು ಶೇಕಡಾ ಅತ್ಯಂತ ಶ್ರೀಮಂತರ ಸಂಪತ್ತಿನ ಮೊತ್ತ 110 ಟ್ರಿಲಿಯನ್(ಶತಕೋಟಿ) ಡಾಲರುಗಳು. ಅಂದರೆ ವಿಶ್ವದ ಜನಸಂಖ್ಯೆಯ ಕೆಳಗಣ ಅರ್ಧದಷ್ಟು ಜನಗಳ ಒಟ್ಟು ಸಂಪತ್ತಿನ 65 ಪಟ್ಟು. 'ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ'(ಒಇಸಿಡಿ)ಯ ವರದಿಯ ಪ್ರಕಾರ 10 ಶೇಕಡಾ ಅತ್ಯಂತ ಶ್ರೀಮಂತರ ಸರಾಸರಿ ಆದಾಯ 10 ಶೇಕಡಾ ಅತ್ಯಂತ ಬಡಜನರ ಆದಾಯದ 16 ಪಟ್ಟಿನಷ್ಟು ಹೆಚ್ಚಾಗಿದೆ. ಹೆಚ್ಚಿನ ಒಇಸಿಡಿ ದೇಶಗಳಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಕಳೆದ 30ವರ್ಷಗಳಲ್ಲೇ ಅತ್ಯುನ್ನತ ಮಟ್ಟದಲ್ಲಿದೆ.

1.9 ಬಿಕ್ಕಟ್ಟು ಮತ್ತು ಹಿಂಜರಿತಕ್ಕೆ ಆಳುವ ವರ್ಗದ ಸ್ಪಂದನೆಯೆಂದರೆ ಶ್ರಮದ ಶೋಷಣೆಯನ್ನು ತೀವ್ರಗೊಳಿಸುವುದು ಮತ್ತು ಸಾರ್ವಜನಿಕ ವೆಚ್ಚಗಳನ್ನು ಕಡಿತಗೊಳಿಸುವುದು. ಶ್ರಮದ ಶೋಷಣೆ ಎಷ್ಟು ತೀವ್ರವಾಗಿದೆಯೆಂಬುದನ್ನು 1999ರಿಂದ 2013ರ ನಡುವೆ ಜಾಗತಿಕವಾಗಿ ನಿಜಕೂಲಿಯ ಹೆಚ್ಚಳ ಶ್ರಮದ ಉತ್ಪಾದಕತೆಯ ಹೆಚ್ಚಳಕ್ಕಿಂತ ಹಿಂದೆ ಬಿದ್ದಿದೆ ಎಂಬ ಸಂಗತಿ ಸೂಚಿಸುತ್ತದೆ. ಜಾಗತಿಕವಾಗಿ ನಿಜಕೂಲಿಗಳ ಹೆಚ್ಚಳದಲ್ಲಿ ದೊಡ್ಡ ಪಾಲು ಹೊಂದಿರುವ ಚೀನಾವನ್ನು ಹೊರತುಪಡಿಸಿದರೆ, ನಿಜಕೂಲಿ ಹೆಚ್ಚಳ 2012ರಲ್ಲಿ ಕೇವಲ 1.3 ಶೇ. ಮತ್ತು 2013ರಲ್ಲಿ 1ಶೇ.(ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ ಐಎಲ್‌ಒದ 2014-15ರ ಜಾಗತಿಕ ಕೂಲಿ ವರದಿ).

1.10 ಅಭಿವೃದ್ಧಿ ಹೊಂದಿರುವ ಬಂಡವಾಳಶಾಹಿ ದೇಶಗಳಲ್ಲಿ ನಿರುದ್ಯೋಗ , ವಿಶ್ವಸಂಸ್ಥೆಯ ಜಾಗತಿಕ ಆರ್ಥಿಕ ಅಧ್ಯಯನಗಳು ಮತ್ತು ಭವಿಷ್ಯದ ನಿರೀಕ್ಷೆಗಳು 2014 ಎಂಬ ವರದಿಯ ಪ್ರಕಾರ, 8.4ಶೇ.ದ ಮಟ್ಟದಲ್ಲೇ ಮುಂದುವರೆಯುತ್ತಿದೆ. ಯುರೋಪಿಯನ್ ಒಕ್ಕೂಟದ ದೇಶಗಳಲ್ಲಿ ನಿರುದ್ಯೋಗ ಇನ್ನೂ ಹೆಚ್ಚಿನ 11ಶೇ. ಮಟ್ಟದಲ್ಲಿದೆ. ಈ ಅಧಿಕೃತ ಅಂಕಿ-ಅಂಶಗಳು ನಿಜಸ್ಥಿತಿಯ ಅತ್ಯಂತ ಕೆಳಮಟ್ಟದ ಅಂದಾಜುಗಳು. ಐಎಲ್‌ಒ ಪ್ರಕಾರ ಯುವ ನಿರುದ್ಯೋಗ ಒಟ್ಟಾರೆ ನಿರುದ್ಯೋಗದ ಎರಡು ಪಟ್ಟು ಇದೆ. 20ನೇ ಮಹಾಧಿವೇಶನದ ನಂತರದ ಮೂರು ವರ್ಷಗಳಲ್ಲಿ ನಿರುದ್ಯೋಗ ಹೆಚ್ಚಿನ ಮಟ್ಟದಲ್ಲೇ ಉಳಿದುಕೊಂಡಿರುವುದು ಕಾಣಬಂದಿದೆ. ಸಮಸ್ತ ಬಂಡವಾಳಶಾಹಿ ಜಗತ್ತಿನಲ್ಲಿ ನಿರುದ್ಯೋಗ ಮತ್ತು ನಿಕೃಷ್ಟ ಆದಾಯಗಳ ಸರಾಸರಿ ದೀರ್ಘ ಅವಧಿ ಇದು.

## ಆಧಿಪತ್ಯವನ್ನು ಉಳಿಸಿಕೊಳ್ಳುವ ಪ್ರಯತ್ನಗಳು

1.11 ಸಾಮ್ರಾಜ್ಯಶಾಹಿ ಬಣದ ಮುಖಂಡನಾಗಿರುವ ಅಮೆರಿಕಾ ಸಂಯುಕ್ತ ಸಂಸ್ಥಾನದ ಆರ್ಥಿಕ ಶಕ್ತಿ ದೀರ್ಘಕಾಲದಿಂದ ಅವನತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ, ಅದರಲ್ಲೂ ವಿಶೇಷವಾಗಿ 2008ರ ಹಣಕಾಸು ಬಿಕ್ಕಟ್ಟಿನ ಬೆಳಕಿನಲ್ಲಿ, ಅದು ಹೊಸ ಸವಾಲುಗಳನ್ನು ಮತ್ತು ತೊಂದರೆಗಳನ್ನು ಎದುರಿಸಬೇಕಾಗಿ ಬಂದಿದೆ. ಪಶ್ಚಿಮ ಏಶ್ಯಾದಲ್ಲಿ ಇರಾಕಿನಿಂದ ಆರಂಭವಾದ ಅದರ ಮಿಲಿಟರಿ ಹಸ್ತಕ್ಷೇಪಗಳು ಆ ಪ್ರದೇಶವನ್ನು ತನ್ನ ಹತೋಟಿಯಲ್ಲಿ ಸ್ಥಿರಗೊಳಿಸುವ ಅದರ ಸಾಮರಿಕ ಗುರಿಯನ್ನು ಈಡೇರಿಸುವಲ್ಲಿ ವಿಫಲವಾಗಿವೆ; ರಶ್ಯವು ಪೂರ್ವದತ್ತ ಅಮೆರಿಕಾ–ನಾಟೋ ಮುನ್ನಡೆಯ ಎದುರು ಈಗಲೂ ಪಟ್ಟು ಹಿಡಿದು ನಿಂತಿದೆ; ಚೀನಾ ಎರಡನೇ ಅತಿ ದೊಡ್ಡ ಆರ್ಥಿಕವಾಗಿ ಮತ್ತು ಒಂದು ಪ್ರಧಾನ ಶಕ್ತಿಯಾಗಿ ಮೂಡಿರುವುದು ಏಶ್ಯ–ಶಾಂತಸಾಗರ ಪ್ರದೇಶದಲ್ಲಿ ಅಮೆರಿಕಾದ ಆಧಿಪತ್ಯಕ್ಕೆ ಬೆದರಿಕೆಯೊಡ್ಡಿದೆ. ಡಬ್ಲ್ಯುಟಿಒದಂತಹ ಬಹುಪಕ್ಷೀಯ ಸಂಘಟನೆಗಳಲ್ಲೂ ತನ್ನ ಆದೇಶಗಳನ್ನು ಅಂಗೀಕಾರವಾಗುವಂತೆ ಮಾಡುವುದು ಅದಕ್ಕೆ ಸುಲಭವೇನೂ ಆಗಿರಲಿಲ್ಲ.

1.12 ಅಮೆರಿಕಾ ಸಂಯುಕ್ತ ಸಂಸ್ಥಾನ ಏಶ್ಯಾದಲ್ಲಿನ ವ್ಯೂಹದಲ್ಲಿ ಆಧಾರಗೂಟದಂತಿರುವ ಪಶ್ಚಿಮ ಏಶ್ಯದಲ್ಲಿ ಮಿಲಿಟರಿ ಹಸ್ತಕ್ಷೇಪಗಳನ್ನು ಮುಂದುವರೆಸಿ, ಮತ್ತು ಉಕ್ರೇನಿನಂತಹ ಹಿಂದಿನ ಸೋವಿಯೆತ್ ಒಕ್ಕೂಟದ ಗಣತಂತ್ರಗಳಲ್ಲಿ ಪಾಶ್ಚಿಮಾತ್ಯ ಪ್ರಭಾವವನ್ನು ವಿಸ್ತರಿಸುವಲ್ಲಿ ರಶ್ಯಾದೊಂದಿಗೆ ಮುಖಾಮುಖಿಯನ್ನು ಹೆಚ್ಚಿಸಿ ತನ್ನ ಆಧಿಪತ್ಯವನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಿದೆ. ವಿಶ್ವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತನ್ನ ಪ್ರಾಬಲ್ಯವನ್ನು ಉಳಸಿಕೊಳ್ಳಲು ಅದು ಪ್ರಯತ್ನಿಸುತ್ತಿದೆ. ಚೀನಾದ ಹೆಚ್ಚುತ್ತಿರುವ ಆರ್ಥಿಕ ಕಾರ್ಯಶಕ್ತಿಯನ್ನು, ಮತ್ತು ಇತರ ಆರ್ಥಿಕಗಳೊಳಗೆ ಅದರ ಹರವನ್ನು ವಿಸ್ತರಿಸುವುದನ್ನು ತಡೆದು ನಿಲ್ಲಿಸುವ ಗುರಿಯಿಂದ ಅಮೆರಿಕಾ ಸಂಯುಕ್ತ ಸಂಸ್ಥಾನ ವಿಶ್ವ ಆರ್ಥಿಕದ ಮೂರನೇ ಎರಡು ಭಾಗವನ್ನು ಆವರಿಸುವ ಎರಡು ಪ್ರಧಾನ ವ್ಯಾಪಾರ ಸಂಧಿಗಳಿಗೆ–ಏಶ್ಯ ಶಾಂತಸಾಗರ ಪ್ರದೇಶದಲ್ಲಿ ಮತ್ತು ಯುರೋಪಿಯನ್ ಒಕ್ಕೂಟದೊಂದಿಗೆ– ಚಾಲನೆ ನೀಡಿದೆ.

1.13 ಈ ಅವಧಿ, ಅಫಘಾನಿಸ್ತಾನ, ಇರಾಕ್, ಲಿಬ್ಯ ಮತ್ತು ಸಿರಿಯದಲ್ಲಿ ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಮಾಡಿಕೊಂಡು ಬಂದಿರುವ ಅಮೆರಿಕ–ನಾಟೊ ಮಿಲಿಟರಿ ಹಸ್ತಕ್ಷೇಪದ ವಿನಾಶಕಾರಿ ಪರಿಣಾಮವನ್ನು ಕಂಡಿದೆ. ಇರಾಕ್ ಮತ್ತು ಲಿಬ್ಯದ ಸರ್ವಾಧಿಕಾರಶಾಹಿಯಾದರೂ ಧರ್ಮಾತೀತವಾದ ಸರಕಾರಗಳನ್ನು ಬಲಪ್ರಯೋಗದಿಂದ ಕಿತ್ತೊಗೆದುದರ ಫಲಿತಾಂಶವೆಂದರೆ ರಾಷ್ಟ್ರೀಯ ಸಆರ್ವಭೌಮತೆಯ ನಷ್, ವ್ಯಾಪಕ ಪ್ರಮಾಣದ ಹಿಂಸಾಚಾರ ಮತ್ತು ಇಸ್ಲಾಮೀಯ ಉಗ್ರಗಾಮಿ ಶಕ್ತಿಗಳ ಉದಯ. ಸಿರಿಯದಲ್ಲಿ ಅಮೆರಿಕ ಮತ್ತು ಅದರ ಮಿತ್ರ ಹಸ್ತಕ್ಷೇಪ ಅಂತರ್ಯುದ್ಧದ ಮೂಲಕ ವ್ಯಾಪಕ ವಿನಾಶವನ್ನು ತರುವುದರೊಂದಿಗೆ

ವಿರೋಧಿ ಶಕ್ತಿಗಳಲ್ಲಿ ಇಸ್ಲಾಮೀಯ ಉಗ್ರಗಾಮಿ ಶಕ್ತಿಗಳ ಕೈಮೇಲಾಗುವಂತಾಯಿತು. ಅಮೆರಿಕನ್ ಸಾಮ್ರಾಜ್ಯಶಾಹಿ ಇರಾಕಿನ ಅತಿಕ್ರಮಣ, ಲಬ್ಯದಲ್ಲಿ ಗದ್ದಾಫಿಯ ವಿರುದ್ಧ ಇಸ್ಲಾಮೀಯ ಸಶಸ್ತ್ರಪಡೆಗಳಿಗೆ ಬೆಂಬಲ ಮತ್ತು ಸಿರಿಯದಲ್ಲಿ ಇಸ್ಲಾಮೀಯ ಉಗ್ರಗಾಮಿ ಶಕ್ತಿಗಳಿಗೆ(ತನ್ನ ಮಿತ್ರರಾದ ಸೌದಿ ಅರೇಬಿಯ, ಟರ್ಕಿ ಮತ್ತು ಕತಾರ್‌ನೊಂದಿಗೆ) ಬೆಂಬಲ ನೀಡಿ ಐಎಸ್‌ಐಎಸ್ ಮುಂತಾದ ಶಕ್ತಿಗಳ ಉದಯಕ್ಕೆ ಅನುಕೂಲವಾದ ಪರಿಸ್ಥಿತಿಗಳನ್ನು ಸೃಷ್ಟಿಸಿತು. ಅಮೆರಿಕಾದ ಅರಬ್ ಮಿತ್ರ ಸಿರಿಯಾದಲ್ಲಿ ನೆಲದಲ್ಲಿ ಇಸ್ಲಾಮೀಯ ಶಕ್ತಿಗಳನ್ನು ಬೆಂಬಲಿಸುತ್ತಿರುವಾಗ ಇರಾಕ್ ಮತ್ತು ಸಿರಿಯದಲ್ಲಿ ಅಮೆರಿಕ ಐಎಸ್‌ಐಎಸ್ ಗುರಿಗಳ ಮೇಲೆ ಬಾಂಬುಗಳನ್ನು ಸುರಿಯುತ್ತಿರುವ ಅದರ ಧೋರಣೆಯ ವೈರುಧ್ಯಮಯ ಅಂಶಗಳು ಕಣ್ಣಿಗೆ ಕಟ್ಟುವಂತಿವೆ.

1.14 ಅಮೆರಿಕದ ಹಸ್ತಕ್ಷೇಪದ ಗುರಿ ಟ್ಯುನೀಸಿಯ ಮತ್ತು ಇಜಿಪ್ಟ್‌ನಲ್ಲಿ ಆರಂಭವಾದ ಜನಪ್ರಿಯ ಬಂಡಾಯಗಳ ಅಲೆಯನ್ನು ದಮನ ಮಾಡಿ ಬೇರೆಡೆಗೆ ತಿರುಗಿಸುವುದು ಕೂಡ ಆಗಿತ್ತು. ಅಮೆರಿಕ ಮತ್ತು ಸೌದಿ ಅರೇಬಿಯ ಮತ್ತು ಕತಾರ್‌ನಂತಹ ಅದರ ಮಿತ್ರದೇಶಗಳ ಹಸ್ತಕ್ಷೇಪ ಮೂಲಭೂತವಾದಿ ಶಕ್ತಿಗಳನ್ನು ಛೂಬಿಡುವತ್ತ ಒಯ್ದಿತು. ಒಂದು ಜನಪ್ರಿಯ ಬಂಡಾಯ ಮುಬಾರಕ್ ಆಳ್ವಿಕೆಯನ್ನು ಪದಚ್ಯುತಗೊಳಿಸಿದ ಇಜಿಪ್ಟಿನಲ್ಲಿ ಮುಸ್ಲಿಂ ಬ್ರದರ್‌ಹುಡ್ ಸರಕಾರವನ್ನು ತೆಗೆದು ಹಾಕಿದ ನಂತರ ಮಿಲಿಟರಿ ಸರ್ವಾಧಿಕಾರಶಾಹಿ ಆಳ್ವಿಕೆ ಮರಳಿ ಬಂದಿದೆ.

1.15 ಅಫಘಾನಿಸ್ತಾನದಲ್ಲಿ, ಅಧ್ಯಕ್ಷ ಒಬಾಮ 2014ರ ಅಂತ್ಯದೊಳಗೆ ಅಮೆರಿಕನ್ ಪಡೆಗಳನ್ನು ವಾಪಾಸು ಕರೆಸಿಕೊಳ್ಳುವುದಾಗಿ ಘೋಷಿಸಿದ್ದರೂ, ನಂತರ ತನ್ನ ಮಿಲಿಟರಿಯನ್ನು ಅಲ್ಲಿ ಮುಂದುವರೆಸಲು ನಿರ್ಧರಿಸಿತು. 13,000 ಅಮೆರಿಕ-ನಾಟೊ ಪಡೆಗಳನ್ನು ಆ ದೇಶದ ಮಿಲಿಟರಿ ನೆಲೆಗಳಲ್ಲಿ ಇಡುವ ಬಗ್ಗೆ ಹೊಸ ಅಫಘಾನ್ ಸರಕಾರದೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಲಾಯಿತು.

1.16 ಅಮೆರಿಕ ತನ್ನ ಪೂರ್ಣ ಬೆಂಬಲವನ್ನು ಇಸ್ರೇಲಿಗೆ ಒದಗಿಸುತ್ತದೆ. ಬಲಪಂಥೀಯ ಇಸ್ರೇಲಿ ಸರಕಾರ ಅರಬ್ ಪ್ರಭುತ್ವಗಳಲ್ಲಿನ ಅಲ್ಲೋಲಕಲ್ಲೋಲವನ್ನು ಬಳಸಿಕೊಂಡು ಗಾಝಾದ ಮೇಲೆ ಒಂದಾದ ಮೇಲೊಂದರಂತೆ ಎರಡು ಸುತ್ತಿನ ಅಮಾನುಷ ಆಕ್ರಮಣವನ್ನು ನಡೆಸಿತು, ಇದರಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ಜನರನ್ನು ಕೊಲ್ಲಲಾಯಿತು, ದೊಡ್ಡ ಪ್ರಮಾಣದಲ್ಲಿ ನಾಗರಿಕ ಆಸ್ತಿ-ಪಾಸ್ತಿಗಳ ಧ್ವಂಸವಾಯಿತು. ಪಶ್ಚಿಮ ತಟದಲ್ಲಿ ವಸತಿಗಳನ್ನು ವಿಸ್ತರಿಸಲಾಗುತ್ತಿದೆ. ಒಂದು ಯೆಹೂದಿ ಪ್ರಭುತ್ವವನ್ನು ಘೋಷಿಸುವ ಯತ್ನವನ್ನು ಆರಂಭಿಸಲಾಗಿದೆ.

1.17 ಅಮೆರಿಕ ದೇಶಗಳು, ಸರಕಾರಗಳು, ಸಂಘಟನೆಗಳು ಮತ್ತು ವ್ಯಕ್ತಿಗಳ ಮೇಲೆ ಬೇಹುಗಾರಿಕೆ ನಡೆಸಲು ಅಂತರ್ಜಾಲ ಮತ್ತು ದೂರಸಂಪರ್ಕಗಳನ್ನು ಕದ್ದು ನೋಡುವ, ಕೇಳುವ ಒಂದು ಜಾಗತಿಕ ಬೇಹುಗಾರಿಕೆ ವ್ಯವಸ್ಥೆಯನ್ನು ರಚಿಸಿದೆ.

ಅಮೆರಿಕ, ಬ್ರಿಟನ್ನಿನ ನೆರವಿನೊಂದಿಗೆ ಇದನ್ನು ರಾಷ್ಟ್ರೀಯ ಭದ್ರತೆ ಮತ್ತು ಭಯೋತ್ಪಾದನೆಯ ವಿರುದ್ಧ ಹೋರಾಟದ ಹೆಸರಿನಲ್ಲಿ ಭಂಡತನದಿಂದ ಮಾಡುತ್ತಿದೆ. ಇದು ದೇಶಗಳ ರಾಷ್ಟ್ರೀಯ ಸಾರ್ವಭೌಮತೆಗೆ ಒಂದು ನೇರ ಬೆದರಿಕೆ ಮತ್ತು ವ್ಯಕ್ತಿಗಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ.

## ಉಕ್ರೇನ್

1.18 ನಾಟೊದ ಪೂರ್ವದತ್ತ ವಿಸ್ತರಣೆಯ ಭಾಗವಾಗಿ ಉಕ್ರೇನಿನ ಮೇಲೆ ಗುರಿಯಿಡಲಾಗಿದೆ. ಉಕ್ರೇನ್ ಪಾಶ್ಚಿಮಾತ್ಯ ಪ್ರಭಾವ ವಲಯದೊಳಕ್ಕೆ ಬರುವಂತೆ ಅನುಕೂಲ ಮಾಡಿಕೊಳ್ಳಲು ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟ ಚುನಾಯಿತ ಸರಕಾರವನ್ನು ಪದಚ್ಯುತಗೊಳಿಸುವ ಚಳುವಳಿಯನ್ನು ಬೆಂಬಲಿಸಿದವು. ಅವರು ನವ–ನಾಝಿ ಸಶಸ್ತ್ರ ಪಡೆಗಳಿಗೆ ಪರೋಕ್ಷ ಮಾನ್ಯೆ ನೀಡಿದರು. ಇದು ಪೂರ್ವ ಉಕ್ರೇನಿನ ರಶ್ಯನ್ ಭಾಷಿಕ ಪ್ರದೇಶಗಳಲ್ಲಿ ಬಂಡಾಯಕ್ಕೆ ಎಡೆಮಾಡಿಕೊಟ್ಟಿತು. ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟ ರಶ್ಯನ್ ಸಂಸ್ಥೆಗಳು ಮತ್ತು ಪ್ರಮುಖ ವ್ಯಾಪಾರಿ ಹಾಗೂ ರಾಜಕೀಯ ವ್ಯಕ್ತಿಗಳ ಮೇಲೆ ನಿರ್ಬಂಧಗಳನ್ನು ಹೇರಿದವು. ರಶ್ಯ ಇದಕ್ಕೆ ಪ್ರತಿಯಾಗಿ ಯುರೋಪ್ ಮತ್ತು ಅಮೆರಿಕಾದಿಂದ ಆಹಾರ ಆಮದುಗಳನ್ನು ನಿಷೇಧಿಸಿತು. ದೊನೆಟ್ಸ್ಕ್ ಮತ್ತು ಲುಗನ್ಸ್ಕ್ ಸರಕಾರಗಳನ್ನು ಪದಚ್ಯುತಗೊಳಿಸುವಲ್ಲಿ ವಿಫಲವಾದ ನಂತರ ಒಂದು ಸಮರವಿರಾಮಕ್ಕೆ ಒಪ್ಪಲಾಗಿದೆ. ಆದರೆ, ಅಮೆರಿಕ ಮತ್ತು ನಾಟೊ ಶಕ್ತಿಗಳು ರಶ್ಯದೊಂದಿಗೆ ಮುಖಾಮುಖಿಯನ್ನು ಹೆಚ್ಚಿಸುತ್ತಿವೆ. ಉಕ್ರೇನ್ ಘರ್ಷಣೆ ಯುರೋಪಿನ ಪ್ರಮುಖ ಶಕ್ತಿಗಳ ನಡುವಿನ, ಒಂದೆಡೆ ಅಮೆರಿಕ–ಯುರೋಪಿಯನ್ ಒಕ್ಕೂಟ, ಇನ್ನೊಂದೆಡೆ ರಶ್ಯದ ನಡುವಿನವೈರುಧ್ಯಗಳನ್ನು ಬಿಂಬಿಸುತ್ತದೆ.

## ಏಶ್ಯಾಕ್ಕೆ ಆಧಾರಗೂಟ

1.19 ಒಬಾಮ ಆಡಳಿತ ಏಶ್ಯ ಶಾಂತಸಾಗರ ಪ್ರದೇಶಕ್ಕೆ ಗಮನ ಕೇಂದ್ರೀಕರಿಸಲು ಒಂದು ವ್ಯೂಹಾತ್ಮಕ ಪಲ್ಲಟವನ್ನು ಪ್ರಕಟಿಸಿತು. ಏಶ್ಯಾಕ್ಕೆ ಈ ಆಧಾರಗೂಟವನ್ನು ಅದರ ನಿಕಟ ಮಿತ್ರರೊಂದಿಗೆ ಸಂಬಂಧಗಳನ್ನು ಬಲಗೊಳಿಸಿ ಮತ್ತು ಶಾಂತಸಾಗರದಲ್ಲಿ ತನ್ನ ಬಹುಪಾಲು ನಾವಿಕ ಪಡೆಗಳನ್ನು ನಿಲ್ಲಿಸಿ ಅದು ಅನುಸರಿಸುತ್ತಿದೆ. ಭಾರತದೊಂದಿಗೆ ತನ್ನ ಮಿಲಿಟರಿ ಸಂಬಂಧಗಳನ್ನು ಬಲಪಡಿಸುವ ಮತ್ತು ಚೀನಾಕ್ಕೆ ಒಂದು ಪಡಿತೂಕವಾಗಿ ಜಪಾನಿನ ಮರು–ಮಿಲಿಟರೀಕರಣವನನು ಉತ್ತೇಜಿಸುವ ಆಶಯವನ್ನು ಅಮೆರಿಕ ಹೊಂದಿದೆ.

## ವ್ಯಾಪಾರ ಒಪ್ಪಂದಗಳು

1.20 ಬಹುಪಕ್ಷೀಯ ಒಪ್ಪಂದಗಳ ಮೇಲೆ ಅವಲಂಬಿಸುವ ಬದಲು ಅಮರಿಕ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಮತ್ತು ಚೀನಾವನ್ನು ತಡೆದಿಡಲು ದ್ವಿಪಕ್ಷೀಯ ಮತ್ತು ಪ್ರಾದೇಶಿಕ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ.

1.21 ಅಮೆರಿಕ ಮತ್ತು ಅದರ ಏಶ್ಯ ಶಾಂತಸಾಗರ ಮಿತ್ರರ ಆರ್ಥಿಕ ಸಮಗ್ರೀಕರಣವನ್ನು ಆಳಗೊಳಿಸುವ ಮತ್ತು ಅದೇ ವೇಳೆಗೆ ಚೀನಾವನ್ನು ಹೊರಗಿಟ್ಟು ಅದರ ಆರ್ಥಿಕ ಪ್ರಭಾವವನ್ನು ತಡೆದಿಡುವ ಅತ್ಯಂತ ವ್ಯಾಪಕ ಮುಕ್ತ ವ್ಯಾಪಾರ ಪ್ರದೇಶವನ್ನು ನಿರ್ಮಿಸಲು ಅಮೆರಿಕ 'ಶಾಂತಸಾಗರ ಪ್ರದೇಶದಾಚೆಗಿನ ಭಾಗೀದಾರಿಕೆ'(ಟಿಪಿಪಿ)ಯನ್ನು ಆರಂಭಿಸಿದೆ. ಔಷಧಿಗಳ ಬೆಲೆಗಳನ್ನು ಹೆಚ್ಚಿಸಲು ಸುಂಕತಡೆಗಳನ್ನು ತೆಗೆದು ಹಾಕುವುದು, ಬೌದ್ಧಿಕ ಆಸ್ತಿ ಹಕ್ಕುಗಳನ್ನು ಬದಲಿಸುವುದು ಮತ್ತು ಹಣಕಾಸು ಸಂಸ್ಥೆಗಳ ಅಧಿಕಾರವನ್ನು ಬಲಪಡಿಸುವುದು ಈ ಒಪ್ಪಂದದ ಗುರಿ.

1.22 ಅದೇ ವೇಳೆಯಲ್ಲಿ, ಒಂದು 'ಅಟ್ಲಾಂಟಿಕದಾಚೆಗಿನ ವ್ಯಾಪಾರ ಮತ್ತು ಹೂಡಿಕೆ ಭಾಗೀದಾರಿಕೆ'(ಟಿಟಿಐಪಿ)ಗಾಗಿ ಮಾತುಕತೆಗಳು ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕಾದ ನಡುವೆ ನಡೆಯುತ್ತಿವೆ. ಅಮೆರಿಕ ಇದನ್ನು ಟಿಪಿಪಿ ಜತೆಗಿನ ಸಹಚರ ಒಪ್ಪಂದ ಎಂದು ಪರಿಗಣಿಸುತ್ತಿದೆ. ಮಾತುಕತೆಗಳು ಪೂರ್ಣಗೊಂಡಾಗ ಈ ಯುರೋಪಿಯನ್ ಒಕ್ಕೂಟ–ಅಮೆರಿಕ ಒಪ್ಪಂದ ಇದುವರೆಗಿನ ಅತ್ಯಂತ ದೊಡ್ಡ ದ್ವಿಪಕ್ಷೀಯ ವ್ಯಾಪಾರ ವ್ಯವಹಾರವನ್ನು ಸ್ಥಾಪಿಸುತ್ತದೆ. ಈ ಒಪ್ಪಂದ ಕಾರ್ಪೊರೇಟ್ ಶಕ್ತಿಯನ್ನು ಹೆಚ್ಚಿಸಿ ಸರಕಾರಗಳು ಮಾರುಕಟ್ಟೆಗಳನ್ನು ನಿಯಂತ್ರಿಸುವುದನ್ನು ಮತ್ತಷ್ಟು ಕಷ್ಟಕರಗೊಳಿಸುತ್ತದೆ.

**ಜಪಾನ್**

1.23 ಶಿಂಝೊ ಅಬೆ ಸರಕಾರ ಸಂವಿಧಾನದಲ್ಲಿ ಸಶಸ್ತ್ರ ಪಡೆಗಳ ಪಾತ್ರದ ವ್ಯಾಖ್ಯಾನವನ್ನು ಬದಲಿಸಿ ಅವುಗಳ ಪಾತ್ರವನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಂಡಿದೆ. ಅಮೆರಿಕಾದ ಬೆಂಬಲದೊಂದಿಗೆ ಅಬೆ ಜಪಾನಿನ ರಕ್ಷಣಾ ಸಾಧ್ಯತೆಯನ್ನು ಮತ್ತು ಶಸ್ತ್ರಾಸ್ತ್ರ ಉತ್ಪಾದನೆಯನ್ನು ಹೆಚ್ಚಿಸುತ್ತಿದ್ದಾರೆ. ಪೂರ್ವ ಚೀನಾ ಸಮುದ್ರದಲ್ಲಿ ಕೆಲವು ದ್ವೀಪಗಳನ್ನು ಕುರಿತಾದ ಚೀನಾದೊಂದಿಗಿನ ವಿವಾದದಲ್ಲಿ ಜಪಾನ್ ಒಂದು ಹೆಚ್ಚು ಆಕ್ರಾಮಕವಾದ ನಿಲುವನ್ನು ತಳೆಯುತ್ತಿದೆ. ಅಬೆ ಸಂಸದೀಯ ಚುನಾವಣೆಗಳನ್ನು ಗೆಲ್ಲುವುದರೊಂದಿಗೆ ಆಸ್ಟ್ರೇಲಿಯ ಮತ್ತು ಭಾರತದೊಂದಿಗೆ ಇನ್ನೂ ನಿಕಟವಾದ ಭದ್ರತಾ ಮೈತ್ರಿಗೆ ಕ್ರಮಗಳನ್ನು ಅಮೆರಿಕ–ಜಪಾನ್– ಆಸ್ಟ್ರೇಲಿಯ–ಭಾರತ ನಡುವಿನ ಒಂದು ಚತುಷ್ಕೋಣ ಮೈತ್ರಿಕೂಟವನ್ನು ಬೆಸೆಯುವ ಗುರಿಯಿಂದ ಕೈಗೊಳ್ಳಲಾಗುವುದು.

1.24 ಇದರೊಂದಿಗೆ, ಅಮೆರಿಕ ದಕ್ಷಿಣ ಕೊರಿಯದೊಂದಿಗೆ ತನ್ನ ವ್ಯೂಹಾತ್ಮಕ ಸಂಬಂಧಗಳನ್ನು ಬಲಪಡಿಸಿದೆ ಮತ್ತು ಜಂಟಿ ಮಿಲಿಟರಿ ಕಸರತ್ತುಗಳನ್ನು ಪ್ರಾರಂಭಿಸಿದೆ, ಇದು ಕೊರಿಯ ಪ್ರಾಯದ್ವೀಪದಲ್ಲಿ ವಾತಾವರಣವನ್ನು ಇನ್ನಷ್ಟು ಉದ್ವಿಗ್ನಗೊಳಿಸಿದೆ. ದಕ್ಷಿಣ ಕೊರಿಯದ ಅಧ್ಯಕ್ಷ ಪದವಿ ಸಂಪ್ರದಾಯಶರಣ ಪಕ್ಷಕ್ಕೆ ಹೋಗುವುದರೊಂದಿಗೆ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಮತ್ತು ಉತ್ತರ ಕೊರಿಯದೊಂದಿಗೆ ಮಾತುಕತೆಗಳನ್ನು ಪುನರಾರಂಭಿಸುವ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ.

## ಹೆಚ್ಚುತ್ತಿರುವ ಬಹುಧ್ರುವೀಯತೆ

1.25 'ಬ್ರಿಕ್ಸ್' ದೇಶಗಳು–ಬ್ರೆಝಿಲ್, ರಶ್ಯ, ಭಾರತ, ಚೀನ ಮತ್ತು ದಕ್ಷಿಣ ಆಫ್ರಿಕ–ತಮ್ಮ ಸಹಕಾರಕ್ಕೆ ಸಾಂಸ್ಥಿಕ ರೀತಿಯಲ್ಲಿ ಒಂದು ಮೂರ್ತ ಸ್ವರೂಪ ಕೊಡಲು ಮುಂದಿನ ಕ್ರಮಗಳನ್ನು ಕೈಗೊಂಡರು. ಬ್ರೆಝಿಲ್‌ನಲ್ಲಿ ನಡೆದ 6ನೇ ಶೃಂಗ 'ಹೊಸ ಅಭಿವೃದ್ಧಿ ಬ್ಯಾಂಕ'(ಎನ್‌ಡಿಬಿ)ನ್ನು ಮತ್ತು ಒಂದು 'ಆನುಷಂಗಿಕ ಮೀಸಲು ವ್ಯವಸ್ಥೆ'ಯನ್ನು ರಚಿಸಿದೆ. ಎನ್‌ಡಿಬಿಯನ್ನು ವಿಶ್ವ ಬ್ಯಾಂಕ್ ಮಾದರಿಯಲ್ಲಿ ನಡೆಸದಿದ್ದರೆ ಅದು ಒಂದು ಸಕಾರಾತ್ಮಕ ಸಾಮರ್ಥ್ಯವನ್ನು ಹೊಂದಿದೆ. ರಾಜಕೀಯ ರಂಗದಲ್ಲಿ ಸಿರಿಯ, ಇರಾನ್ ಮುಂತಾದ ಪ್ರಮುಖ ಪ್ರಶ್ನೆಗಳ ಮೇಲೆ 'ಬ್ರಿಕ್ಸ್' ಅಮೆರಿಕದ ನಿಲುವುಗಳನ್ನು ಒಪ್ಪಿಲ್ಲ, ಮಿಲಿಟರಿ ಹಸ್ತಕ್ಷೇಪವನ್ನು ವಿರೋಧಿಸಿದೆ. ಅದರ ಮಿತಿಗಳೇನೇ ಇದ್ದರೂ, ಈ ಹೆಚ್ಚಿನ ದೇಶಗಳ ಸರಕಾರಗಳ ಸ್ವರೂಪದ ಹಿನ್ನೆಲೆಯಲ್ಲಿ ;ಬ್ರಿಕ್ಸ್' ವೇದಿಕೆಯ ಕ್ರೋಡೀಕರಣ ಬಹುಧ್ರುವೀಯತೆಯ ಹೆಚ್ಚುತ್ತಿರುವ ಪ್ರವೃತ್ತಿಯ ಸಂದರ್ಭದಲ್ಲಿ ಗಮನಾರ್ಹವಾದದ್ದು.

1.26 ಶಾಂಘಾಯ್ ಸಹಕಾರ ಸಂಘಟನೆ(ಎಸ್‌ಸಿಒ), ಲ್ಯಾಟಿನ್ ಅಮೆರಿಕನ್ ಮತ್ತು ಕೆರಿಬಿಯನ್ ಪ್ರಭುತ್ವಗಳ ಸಮುದಾಯ(ಸಿಇಎಲ್‌ಎಸಿ), ನಮ್ಮ ಅಮೆರಿಕದ ಜನತೆಗಳ ಬೊಲಿವೇರಿಯನ್ ಮೈತ್ರಿಕೂಟ(ಅಲ್ಬ) ಮತ್ತು ದಕ್ಷಣ ಅಮೆರಿಕನ್ ರಾಷ್ಟ್ರಗಳ ಸಂಘ(ಯುನಸುರ್) ಮುಂತಾದ ಈಗಾಗಲೇ ಇರುವ ಪ್ರಾದೇಶಿಕ ವೇದಿಕೆಗಳು ತಮ್ಮ ಸಹಕಾರದ ಕ್ಷೇತ್ರಗಳನ್ನು ಮತ್ತಷ್ಟು ಬೆಳೆಸಿವೆ. 'ಬ್ರಿಕ್ಸ್' ಜೊತೆಗೆ ಭಾರತವೂ ಸೇರಿದಂತೆ 21 ಏಶ್ಯನ್ ದೇಶಗಳು ಸದಸ್ಯರಾಗಿರುವ, ಚೀನಾದ ಮುತುವರ್ಜಿಯಿಂದ ಆರಂಭವಾದ ಏಶ್ಯನ್ ಮೂಲರಚನೆ ಹೂಡಿಕೆ ಬ್ಯಾಂಕ್'(ಎಐಐಬಿ) ಮುಂತಾದ ಇತರ ಪ್ರಾದೇಶಿಕ ಬಹುಪಕ್ಷೀಯ ಸಂಸ್ಥೆಗಳನ್ನು ರಚಿಸಲಾಗುತ್ತಿದೆ. ಈ ಎಲ್ಲ ಪ್ರಾದೇಶಿಕ ವೇದಿಕೆಗಳು ಮತ್ತು ಸಂಸ್ಥೆಗಳು ಬಹುಧ್ರುವೀಯತೆಯ ಪ್ರವೃತ್ತಿಯನ್ನು ಬಲಪಡಿಸುತ್ತವೆ.

### 'ಮಿತವ್ಯಯ ಕ್ರಮ'ಗಳ ವಿರುದ್ಧ ಜನಪ್ರಿಯ ಹೋರಾಟಗಳು

1.27 ಜಾಗತಿಕ ಹಣಕಾಸು ಬಿಕ್ಕಟ್ಟಿನ ನಂತರದಲ್ಲಿ ವಿವಿಧ ಹೋರಾಟಗಳು ಮತ್ತು ಪ್ರತಿಭಟನಾ ಆಂದೋಲನಗಳು ಬೆಳೆದಿವೆ. 'ಒಕ್ಯುಪೈ ವಾಲ್ ಸ್ಟ್ರೀಟ್'(ವಾಲ್ ಸ್ಟ್ರೀಟ್ ಆಕ್ರಮಿಸಿಕೊಳ್ಳಿ) ಆಂದೋಲನದ ನಂತರ 'ಮಿತವ್ಯಯ ಕ್ರಮಗಳ' ವಿರುದ್ಧ ಪ್ರತಿಭಟನೆಗಳು ಹಲವು ದೇಶಗಳಲ್ಲಿ ಮುಂದುವರೆದವು. ಗ್ರೀಸಿನಲ್ಲಿ ಕಾರ್ಮಿಕ ಸಂಘಗಳ ಮಹಾಒಕ್ಕೂಟ 'ಪಾಮೆ'(ಪಿಎಎಂಇ) ನೇತೃತ್ವದಲ್ಲಿ ದೊಡ್ಡ ಕಾರ್ಮಿಕ ಕಾರ್ಯಾಚರಣೆಗಳನ್ನು ನಡೆಸಲಾಯಿತು. ಈ ಮಿತವ್ಯಯ ಕ್ರಮಗಳು ಮತ್ತು ಯುರೋಪಿಯನ್ ಒಕ್ಕೂಟದ ಪಾರು ಯೋಜನೆಗಳ ವಿರುದ್ಧ ಒಂದು ಹೊಸ ಎಡ ಸಂಘಟನೆ 'ಸಿರಿಝ' ರಚನೆಗೊಂಡಿದೆ. ಅದು ಜನವರಿ 2015ರ ಸಂಸದೀಯ ಚುನಾವಣೆಗಳಲ್ಲಿ 300 ಸ್ಥಾನಗಳಲ್ಲಿ 149 ಗೆದ್ದಿದೆ ಮತ್ತು 36ಶೇ. ಮತಗಳನ್ನು

ಗಳಿಸಿದೆ. ಇದೊಂದು ಮಹತ್ವದ ರಾಜಕೀಯ ಬೆಳವಣಿಗೆ. ಸ್ಪೇನಿನಲ್ಲಿ ಇಂಡಿಗ್ನಡೊಸ್ ಆಂದೋಲನ( ಅಂದರೆ ಆಕ್ರೋಶಗೊಂಡವರ ಆಂದೋಲನ) ಮುಂದುವರೆದಿದೆ ಮತ್ತು ಮುಖ್ಯಧಾರೆಯ ಪಕ್ಷಗಳಿಗೆ ಸವಾಲು ಹಾಕಿದ ಪೊಡೆಮೊಸ್ ಎಂಬ ಒಂದು ರಾಜಕೀಯ ಶಕ್ತಿ ಮೂಡಿದೆ. ಪೋರ್ಚುಗಾಲ್ ಕೂಡ ದೊಡ್ಡ ಕಾರ್ಮಿಕ ವರ್ಗದ ಕಾರ್ಯಾಚರಣೆಗಳನ್ನು ಮತ್ತು ಪ್ರತಿಭಟನಾ ಮತಪ್ರದರ್ಶನಗಳನ್ನು ಕಂಡಿದೆ. ಅದೇ ರೀತಿ ಬ್ರಿಟನ್, ಫ್ರಾನ್ಸ್ , ಇಟೆಲಿ, ಐಸ್ಲ್ಯಾಂಡ್ ಮತ್ತು ಬೆಲ್ಜಿಯಂನಲ್ಲೂ ಜನತೆಯ ಮೇಲೆ ತಂತಮ್ಮ ಸರಕಾರಗಳ ದಾಳಿಗಳ ವಿರುದ್ಧ ವ್ಯಾಪಕ ಪ್ರಮಾಣದ ಕಾರ್ಮಿಕ ವರ್ಗದ ಪ್ರತಿಭಟನಾ ಕಾರ್ಯಾಚರಣೆಗಳು ನಡೆದಿವೆ. ಕಾರ್ಮಿಕರು ಸಮರಶೀಲ ಮುಷ್ಕರಗಳು ಮತ್ತು ಕಾರ್ಯಾಚರಣೆಗಳನ್ನು ನಡೆಸುತ್ತಿರುವ ಇನ್ನೊಂದು ಪ್ರದೇಶವೆಂದರೆ ದಕ್ಷಿಣ ಆಫ್ರಿಕ, ನಿರ್ದಿಷ್ಟವಾಗಿ ಪ್ಲಾಟಿನಂ ಮತ್ತು ಗಣಿ ಕಾರ್ಮಿಕರು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಒಬ್ಬ ಕರಿಯುವಕನನ್ನು ಗುಂಡಿಟ್ಟು ಕೊಂದ ಜನಾಂಗದ್ವೇಷಿ ಫರ್ಗ್ಯುಸನ್ ಘಟನೆಯ ನಂತರ ವಿವಿಧ ನಗರಗಳಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆದಿವೆ.

1.28 ಮಿತವ್ಯಯ ಕ್ರಮಗಳ ವಿರುದ್ಧ ಜನತೆಯ ಅಸಂತೃಪ್ತಿ ಬೆಳೆದಿದೆ, ಮತ್ತು ಇದು ಯುರೋಪಿಯನ್ ಒಕ್ಕೂಟದ ಸಂಸತ್ತಿನ ಚುನಾವಣೆಗಳಲ್ಲಿ ಎಲ್ಲೆಲ್ಲಿ ಪ್ರತಿಭಟನೆಗಳು ಈ ಕ್ರಮಗಳನ್ನು ಅನುಸರಿಸುತ್ತಿರುವ ರಾಷ್ಟ್ರೀಯ ಸರಕಾರಗಳ ವಿರುದ್ಧ ನಡೆದಿವೆಯೋ ಅಲ್ಲೆಲ್ಲ ಬಿಂಬಿತವಾಗಿದೆ. ಅದೇ ವೇಳೆಗೆ, ಉಗ್ರ ಬಲಪಂಥೀಯ ಪಕ್ಷಗಳು ಸಕ್ರಿಯವಾಗಿವೆ, ಮತ್ತು ಅವು ತಮ್ಮ ಅನ್ಯದ್ವೇಷದ, ವಲಸೆಗಾರ–ವಿರೋಧಿ ವೇದಿಕೆ ಮತ್ತು ಯುರೋಪಿಯನ್ ಒಕ್ಕೂಟದ ವಿರುದ್ಧ ವಾಗ್ಬಾಣಗಳಿಂದ ಗಳಿಕೆ ಮಾಡಿಕೊಂಡಿವೆ. ಗ್ರೀಸ್, ಇಟೆಲಿ, ನೆದರ್ಲೆಂಡ್ಸ್ ಮತ್ತು ಫ್ರಾನ್ಸ್‌ನಲ್ಲಿ ಇಂತಹ ಶಕ್ತಿಗಳು ಬೆಳೆದಿವೆ.

## ಪ್ರತಿಗಾಮಿ ಆಂದೋಲನಗಳ ಉದಯ

1.29 ಮೂಲಭೂತವಾದ, ಅನ್ಯದ್ವೇಷ ಮತ್ತು ಪಂಥವಾದಿ ಸಂಕುಚಿತವಾದದ ವಿಷಕಾರೀ ಸ್ವರೂಪಗಳು ಜಗತ್ತಿನಾದ್ಯಂತ ಬೆಳೆದಿವೆ. ಇತ್ತೀಚಿನ ಅವಧಿ ಪಶ್ಚಿಮ ಏಶ್ಯದಲ್ಲಿ ಐಎಸ್‌ಐಎಸ್ ಮತ್ತು ಇತರ ಉಗ್ರಗಾಮಿ ಶಕ್ತಿಗಳು, ನೈಜೀರಿಯದಲ್ಲಿ ಬೊಕೊ ಹರಂ, ಸೊಮಾಲಿಯ ಮತ್ತು ಉತ್ತರ ಆಫ್ರಿಕದಲ್ಲಿ ಇಸ್ಲಾಮೀ ಮೂಲಭೂತವಾದಿಗಳು, ಶ್ರೀಲಂಕ ಮತ್ತು ಮ್ಯಾನ್ಮಾರ್‌ನಲ್ಲಿ ಬೌದ್ಧ ಸಂಕುಚಿತವಾದಿ ಗುಂಪುಗಳು ಹಾಗೂ ಯುರೋಪಿನಲ್ಲಿ ಉಗ್ರ ಬಲಪಂಥೀಯ ನವ–ನಾಝೀ ಪಕ್ಷಗಳು ತಲೆಯೆತ್ತಿರುವುದನ್ನು ಕಾಣುತ್ತಿದೆ. ಇವು ಸಾಮ್ರಾಜ್ಯಶಾಹಿ ಹಸ್ತಕ್ಷೇಪಗಳ ಒಂದು ಉತ್ಪನ್ನವೂ ಆಗಿದೆ, ಮತ್ತು ಸಮಾಜವಾದಕ್ಕೆ ಆದ ಹಿನ್ನಡೆಗಳಿಂದಾಗಿ ಸಾರ್ವತ್ರಿಕ ಪ್ರಗತಿಶೀಲ ಮೌಲ್ಯಗಳಿಂದ ಹಿಂದೆ ಸರಿದಿರುವುದರ ಫಲಿತಾಂಶವೂ ಆಗಿದೆ.

## ಹವಾಮಾನ ಬದಲಾವಣೆ

1.30 ಲಿಮಾದಲ್ಲಿ ಅಮೆರಿಕಾ ನೇತೃತ್ವದ ಅಭಿವೃದ್ಧಿ ಹೊಂದಿರುವ ದೇಶಗಳು ಉದ್ದೇಶಪೂರ್ವಕವಾಗಿ ಚತುರತೆಯಿಂದ ರೂಪಿಸಿದ ಉಪಾಂತ 'ಹವಾಮಾನ ಶೃಂಗ'ದ ಒಂದು ದುರ್ಬಲ ನಿರ್ಣಯದ ನಂತರ ಡಿಸೆಂಬರ್ 2015ರ 'ಪ್ಯಾರಿಸ್ ಶೃಂಗ'ದಲ್ಲಿ ಕ್ಯೋಟೊ ಸೂತ್ರಗಳ ಸ್ಥಾನದಲ್ಲಿ ಹೊಸದೊಂದು ಜಾಗತಿಕ ಒಪ್ಪಂದವನ್ನು ಅಂತಿಮಗೊಳಿಸುವುದಕ್ಕೆ ರಂಗ ಸಿದ್ಧವಾಗಿದೆ. ಅಮೆರಿಕ ಮತ್ತು ಇತರ ಮುಂದುವರೆದ ಬಂಡವಾಳಶಾಹಿ ದೇಶಗಳು ಅಂತಿಮವಾಗಿ ವಾತಾವರಣಕ್ಕೆ ಸಂಬಂಧಿಸಿದ ಸರ್ವರ ಸೊತ್ತಿನಲ್ಲಿ ಬಹುಪಾಲನ್ನು ಬಾಚಿಕೊಂಡು, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಬೆಳವಣಿಗೆಗೆ ಮತ್ತು ತಮ್ಮ ಜನಗಳ ಜೀವನ ಮಟ್ಟವನ್ನು ಎತ್ತರಿಸಲಿಕ್ಕೆ ಅತ್ಯಲ್ಪ ಅವಕಾಶಗಳನ್ನಷ್ಟೇ ಬಿಡುತ್ತವೆ ಎಂಬುದೀಗ ಸ್ಪಷ್ಟವಾಗಿದೆ. "ಸಮಾನ ಆದರೆ ಭಿನ್ನೀಕರಿಸಿದ ಹೊಣೆಗಾರಿಕೆ"(ಸಿಬಿಡಿಆರ್) ಎಂಬುದನ್ನು ಗಮನಾರ್ಹವಾಗಿ ಪೇಲವಗೊಳಿಸಿ ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಸಮತ್ವದ ಸೂತ್ರವನ್ನು ಒರಟಾಗಿ ಎಸೆದು ಬಿಡಲಾಗಿದೆ. ಅಮೆರಿಕ ಮುಂದೊತ್ತಿದಂತಹ ಸ್ವಯಂಪ್ರೇರಿತ ಪ್ರತಿಜ್ಞೆಗಳನ್ನು ಆಧರಿಸಿದ ಒಂದು ಮಾಲಿನ್ಯ ಹತೋಟಿ ವಿನ್ಯಾಸ 2020ರ ನಂತರದ ಪ್ಯಾರಿಸ್ ಒಪ್ಪಂದದ ಭಾಗವಾಗುವ ಸಾಧ್ಯತೆಯೇ ಈಗ ಬಹಳ ಹೆಚ್ಚಾಗಿದೆ. ಜಾಗತಿಕ ಬಿಸಿಯೇರಿಕೆಯನ್ನು 2 ಡಿಗ್ರಿ ಸೆಲ್ಶಿಯಸ್‌ಗೆ ಸೀಮಿತಗೊಳಿಸಬೇಕು ಎಂಬ ಎಲ್ಲರೂ ಒಪ್ಪಿದ ಗುರಿಗೆ ಹೋಲಿಸಿದರೆ ಈಗ ಅಮೆರಿಕ ಮತ್ತು ಇತರ ಅಭಿವೃದ್ಧಿ ಹೊಂದಿರುವ ದೇಶಗಳ ಕೆಳಮಟ್ಟದ ಪ್ರತಿಜ್ಞೆಗಳು ನಮ್ಮ ಗ್ರಹದ ತಾಪಮಾನವನ್ನು 3–4 ಡಿಗ್ರಿ ಸೆಲ್ಶಿಯಸ್‌ನಷ್ಟು ಏರಿಸುವ ಸಾಧ್ಯತೆಯಿದ್ದು, ಇದು ವಿಶೇಷವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ, ಮತ್ತು ಜಗತ್ತಿನಾದ್ಯಂತ ಎಲ್ಲ ಬಡಜನರಿಗೆ ವಿಧ್ವಂಸಕಾರಿ ಪರಿಣಾಮಗಳನ್ನು ಬೀರಲಿದೆ.

## ಲ್ಯಾಟಿನ್ ಅಮೆರಿಕ: ಎಡಪಂಥದ ಮುನ್ನಡೆ

1.31 ಅಧ್ಯಕ್ಷ ಹ್ಯುಗೊ ಚವೇಝ್ ಸಾವಿನಿಂದ ಹಿನ್ನಡೆ ಅನುಭವಿಸಬೇಕಾಗಿ ಬಂದರೂ ವೆನೆಝುವೆಲ ಮತ್ತು ಲ್ಯಾಟಿನ್ ಅಮೆರಿಕಾದ ಎಡ ಸರಕಾರಗಳು ನವ–ಉದಾರವಾದ ಮತ್ತುಸಾಮ್ರಾಜ್ಯಶಾಹಿಗೆ ಸವಾಲೊಡ್ಡುವ ಪರ್ಯಾಯ ದಾರಿಯಲ್ಲಿ ಮುನ್ನಡೆಯಲು ಹೋರಾಟ ನಡೆಸಿವೆ. ವೆನೆಝುವೆಲ ಆರ್ಥಿಕವಾಗಿಯೂ ಮತ್ತು ಅಮೆರಿಕಾ ಬೆಂಬಲಿತ ವಿಷಮಯ ಬಲಪಂಥೀಯ ವಿರೋಧದಿಂದಾಗಿ ಕಷ್ಟದ ಸವಾಲುಗಳನ್ನು ಎದುರಿಸಿದೆ. ಆದಾಗ್ಯೂ, ವೆನೆಝುವೆಲ ಸಬ್ಸಿಡಿಯ ಆಹಾರ ಅಂಗಡಿಗಳು, ಪುಕ್ಕಟೆ ಆಹಾರ ಅಡುಗೆಮನೆಗಳು, ಸಮುದಾಯಗಳಲ್ಲಿ ಪುಕ್ಕಟೆ ಆರೋಗ್ಯ ಕೇಂದ್ರಗಳ ಜಾಲದ ರಚನೆ ಮತ್ತು ಪುಕ್ಕಟೆ ಶಿಕ್ಷಣವನ್ನು, ವಿದ್ಯುತ್ ಮತ್ತು ಕುಡಿಯುವ ನೀರಿನಂತಹ ಮೂಲ ಸೇವೆಗಳನ್ನು ಹೆಚ್ಚೆಚ್ಚು ಲಭ್ಯಗೊಳಿಸುವ ಧೋರಣೆಗಳನ್ನು ಅನುಸರಿಸಿದೆ.

1.32 ಬೊಲಿವಿಯಯದಲ್ಲಿ ಮೊರಲೆಸ್ ಸರಕಾರ ತೈಲ ಮತ್ತು ಅನಿಲ ವಲಯವನ್ನು ರಾಷ್ಟ್ರೀಕರಿಸಿದ್ದರಿಂದ ಅನಿಲದಿಂದ ಸರಕಾರಕ್ಕೆ ಬರುವ ಅವರ ಆದಾಯದಲ್ಲಿ ತೀಕ್ಷ್ಣ ಹೆಚ್ಚಳವಾಗುವಂತಾಗಿದೆ, ಅಂದರೆ 82ಶೇ. ದೂರಸಂಪರ್ಕ ಮತ್ತು ವಿದ್ಯುತ್ತನ್ನು ಕೂಡ ಪ್ರಭುತ್ವದ ವಲಯದೊಳಕ್ಕೆ ವಹಿಸಿ ಕೊಳ್ಳಲಾಗಿದೆ. ಲ್ಯಾಟಿನ್ ಅಮೆರಿಕದಲ್ಲೇ ಬೊಲಿವಿಯ ಅತಿ ಹೆಚ್ಚು ಬಡತನ ಇಳಿಕೆಯ ದರವನ್ನು ಸಾಧಿಸಿದೆ, ಬಡತನದಲ್ಲಿ 2012ರಿಂದ 32.2ಶೇ. ಇಳಿಕೆಯಾಗಿದೆ. ಇಕ್ವೆಡೋರ್‌ನಲ್ಲಿ ಶಿಕ್ಷಣದ ಮೇಲೆ ವೆಚ್ಚ ಜಿಡಿಪಿಯ 2.6ಶೇ.ದಿಂದ 5.2ಶೇ.ಕ್ಕೆ ದ್ವಿಗುಣಗೊಂಡಿದೆ. ಕಳೆದ ಐದು ವರ್ಷಗಳಲ್ಲಿ ಕನಿಷ್ಟ ಕೂಲಿ ನಿಜ ಮೌಲ್ಯದಲ್ಲಿ 40ಶೇ. ಏರಿದೆ. 2009ರ ನಂತರ ಕಳೆದ ಐದು ವರ್ಷಗಳಲ್ಲಿ ಬಡತನ ತೀವ್ರವಾಗಿ ಕಾಲು ಭಾಗದಷ್ಟು ಇಳಿದಿದೆ.

1.33 ಕಳೆದ ಮೂರು ವರ್ಷಗಳಲ್ಲಿ ನಡೆದ ಚುನಾವಣೆಗಳಲ್ಲಿ ಎಡ ಸರಕಾರಗಳು ನವೀಕರಿಸಿದ ಆದೇಶದೊಂದಿಗೆ ಅಧಿಕಾರಕ್ಕೆ ಮರಳಿವೆ. ಬೊಲಿವಿಯದಲ್ಲಿ ಇವೊ ಮೊರಲೆಸ್ 61.6ಶೇ. ಮತಗಳಿಂದ ಮರು ಆಯ್ಕೆಗೊಂಡಿದ್ದಾರೆ. ಇಕ್ವೆಡೋರ್, ಉರುಗ್ವೆ ಮತ್ತಿ ನಿಕರಗುವದಲ್ಲಿ ಎಡ ಸರಕಾರಗಳು ಪುನರಾಯ್ಕೆಗೊಂಡಿವೆ. ದಕ್ಷಿಣ ಅಮೆರಿಕಾದ ಅತಿ ದೊಡ್ಡ ದೇಶ ಬ್ರೆಝಿಲ್‌ನಲ್ಲಿ ದಿಲ್ಮ ರೌಸೆಫ್ ಬಲಪಂಥಿಯ ಶಕ್ತಿಗಳಿಂದ ಎಡೆಬಿಡದ ಸವಾಲುಗಳನ್ನು ಬದಿಗೊತ್ತಿ ಅಧ್ಯಕ್ಷರಾಗಿ ಪುನರಾಯ್ಕೆಗೊಂಡಿದ್ದಾರೆ.

1.34 ಒಟ್ಟಾರೆಯಾಗಿ, ಲ್ಯಾಟಿನ್ ಅಮೆರಿಕಾದಲ್ಲಿ ಎಡ ಮುನ್ನಡೆ ಉಳಿದುಕೊಂಡಿದೆ. ಕ್ಯೂಬ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ನಡುವೆ ಸಂಬಂಧಗಳನ್ನು ಸಾಮಾನ್ಯಗೊಳಿಸುವ ಕ್ರಮಗಳ ಪ್ರಕಟಣೆಯನ್ನು ಕ್ಯೂಬಾವನ್ನು ಏಕಾಂಗಿಯಾಗಿಸ ಬಾರದು ಎಂಬ ದಕ್ಷಿಣ ಅಮೆರಿಕಾದಲ್ಲಿನ ದೇಶಗಳ ಒಮ್ಮತದ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಅಮೆರಿಕಕ್ಕೆ ಇದನ್ನು ಉಪೇಕ್ಷಿಸಲಾಗಲಿಲ್ಲ.

## ಸಮಾಜವಾದಿ ದೇಶಗಳು

1.35 ಕಳೆದ ಪಕ್ಷದ ಮಹಾಧಿವೇಶನದ ವೇಳೆಗೆ ಚೀನಾ ವಿಶ್ವದ ಎರಡನೇ ಅತಿ ದೊಡ್ಡ ಆರ್ಥಿಕವಾಗಿ ಮೂಡಿ ಬಂದಿತ್ತು. ಅದರ ಪ್ರಗತಿ ಮುಂದುವರೆದಿದೆ. 2012ರಿಂದ ಅಂಗೀಕರಿಸಿದ ದಾರಿ ಜಿಡಿಪಿ ಬೆಳವಣಿಗೆಯ ಬದಲಾಗಿ ತಾಳಿಕೆಯ ಅಭಿವೃದ್ಧಿ ಮತ್ತು ಗುಣಮಟ್ಟದ ಬೆಳವಣಿಗೆಯ ಮೇಲೆ ಒತ್ತು ನೀಡುತ್ತದೆ. ಅಲ್ಲಿ ನಡೆಯುತ್ತಿರುವ ಆರ್ಥಿಕ ಮತ್ತು ಸಾಮಜಿಕ ಪುನರ್ರಚನೆಯನ್ನು ನೋಡಿದಾಗ 2014ರಲ್ಲಿ ಚೀನಾದ 7.4ಶೇ. ಬೆಳವಣಿಗೆ ಮಹತ್ವದ್ದಾಗಿದೆ. ವಿಯೆಟ್ನಾಂ ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ದಾಖಲಿಸಿದೆ, ರಫ್ತುಗಳಲ್ಲಿ ಗಮನಾರ್ಹ ಹೆಚ್ಚಳವಾಗಿದೆ. ಬಡತನ ಇಳಿಸುವಲ್ಲಿ ಯಶಸ್ಸು ಸಾಕಷ್ಟು ಪ್ರಮಾಣದಲ್ಲಿದೆ. ಅಸಮಾನತೆ ಈಗಲೂ ಹೆಚ್ಚುತ್ತಿದ್ದರೂ, ರಾಷ್ಟ್ರೀಯ ಬಡತನ ದರ 2005ರಲ್ಲಿ 22ಶೇ.ಇದ್ದದ್ದು 2013ರಲ್ಲಿ

7.8ಶೇ.ಕ್ಕೆ ಇಳಿದಿದೆ. ಕೊರಿಯ ಪ್ರಜಾಸತ್ತಾತ್ಮಕ ಜನತಾ ಗಣತಂತ್ರ ಅದರ ಮೇಲೆ ಹೇರಿದ ನಿರ್ಬಂಧಗಳನ್ನು ಸಹಿಸಿಕೊಂಡು ನಿಂತಿದೆ ಮತ್ತು ಅಮೆರಿಕ ಹಾಗೂ ದಕ್ಷಿಣ ಕೊರಿಯ ಸರಕಾರಗಳ ಪ್ರಚೋದನೆಗಳನ್ನು ಯಶಸ್ವಿಯಾಗಿ ಎದುರಿಸಿದೆ. ಕ್ಯೂಬ 2011ರಿಂದ ತನ್ನ ಆರ್ಥಿಕ ವ್ಯವಸ್ಥೆಯನ್ನು ಸಮಕಾಲಿಕಗೊಳಿಸುತ್ತಿದೆ ಮತ್ತು ಸುಧಾರಣೆಗಳನ್ನು ಜಾರಿ ಮಾಡುತ್ತಿದೆ. ಐವರು ಕ್ಯೂಬನ್ನರ ಬಿಡುಗಡೆ ಮತ್ತು ಕ್ಯೂಬ ಮತ್ತು ಅಮೆರಿಕ ನಡುವೆ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ ನಿರ್ಧಾರದ ಮೂಲಕ ಕ್ಯೂಬ ಒಂದು ದೊಡ್ಡ ವಿಜಯವನ್ನು ಸಾಧಿಸಿದೆ. ಅಧ್ಯಕ್ಷ ಒಬಾಮ ಕಳೆದ ಐದು ದಶಕಗಳಿಂದ ಕ್ಯೂಬವನ್ನು ಏಕಾಂಗಿಯಾಗಿಸುವ ಧೋರಣೆ ವಿಫಲವಾಗಿದೆ ಎಂದು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.

## ದಕ್ಷಿಣ ಏಶ್ಯ

1.36 ದಕ್ಷಿಣ ಏಶ್ಯದಲ್ಲಿನ ಸನ್ನಿವೇಶದ ಮುಖ್ಯ ಲಕ್ಷಣವೆಂದರೆ ವಿವಿಧ ದೇಶಗಳ ಸರಕಾರಗಳು ಅನುಸರಿಸುತ್ತಿರುವ ನವ–ಉದಾರವಾದಿ ಧೋರಣೆಗಳಿಮದಾಗಿ ದುಡಿಯುವ ಜನಗಳ ಬದುಕಿನ ಮಟ್ಟಗಳು ಹದಗೆಡುತ್ತಿವೆ. ಪಾಕಿಸ್ತಾನದಲ್ಲಿ 2012ರಲ್ಲಿ ಸಂಸದೀಯ ಚುನಾವಣೆಗಳ ನಂತರ ನವಾಝ್ ಶರೀಫ್ ಸರಕಾರ ರಚನೆಯಾಗಿದೆ. ಈ ಅವಧಿಯಲ್ಲಿ ಮೂಲಭೂತವಾದಿ ಮತ್ತು ಉಗ್ರಗಾಮಿ ಶಕ್ತಿಗಳ ಬೆದರಿಕೆ ಮುಂದುವರಿಯುತ್ತಿರುವುದು ಕಂಡು ಬಂದಿದೆ. ಪೇಶಾವರ್‌ನಲ್ಲಿ ಶಾಲಾಮಕ್ಕಳ ಭೀಕರ ಹತ್ಯಾಕಾಂಡ ಇದಕ್ಕೊಂದು ಉದಾಹರಣೆ. ನೇಪಾಳದಲ್ಲಿ 2013 ರಲ್ಲಿ ಎರಡನೇ ಸಂವಿಧಾನ ಸಭೆಯನ್ನು ರಚಿಸಿದ ನಂತರವೂ ಒಂದು ಹೊಸ ಸಂವಿಧಾನವನ್ನು ರೂಪಿಸುವ ಪ್ರಯತ್ನಗಳು ಫಲಕಾರಿಯಾಗಿಲ್ಲ. ಜನವರಿ 2015ರೊಳಗೆ ಕರಡು ಸಂವಿಧಾನವನ್ನು ಅಂಗೀಕರಿಸಬೇಕೆಂಬ ಸಮಯಮಿತಿ ದಾಟಿ ಹೋಗಿದೆ. ಬಾಂಗ್ಲಾದೇಶದಲ್ಲಿ ಜಮಾತ್–ಎ–ಇಸ್ಲಾಮಿ ಮತ್ತು ಮೂಲಭೂತವಾದಿ ಶಕ್ತಿಗಳು ಯುದ್ಧಾಪರಾಧ ನ್ಯಾಯಮಂಡಳಿಗಳು ಅವರ ಕೆಲವು ಉನ್ನತ ಮುಖಂಡರಿಗೆ ಶಿಕ್ಷೆ ಬವಿಧಿಸಿದ ನಂತರ ಹಿಂಸಾತ್ಮಕ ಪ್ರತಿಭಟನೆಗಳನ್ನು ನಡೆಸುತ್ತಿವೆ. ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಬಲಪಂಥೀಯ ಮೂಲಭೂತವಾದಿ ಶಕ್ತಿಗಳ ವಿರುದ್ಧ ಅಣಿನೆರಿಕೆ ನಡೆಸಿದ್ದಾರೆ. ಶಾಹಬಾಗ್ ಆಂದೋಲನದಲ್ಲಿ ಇದನ್ನು ಕಾಣಬಹುದು. ಶ್ರೀಲಂಕಾದಲ್ಲಿ ರಾಜಪಕ್ಷೆ ಅಧ್ಯಕ್ಷಾವಧಿ ಜನವರಿ 2015ರ ಅಧ್ಯಕ್ಷೀಯ ಚುನಾವಣೆಗಳಲ್ಲಿ ಅವರ ಅನಿರೀಕ್ಷಿತ ಸೋಲಿನೊಂದಿಗೆ ಅಂತ್ಯವಾಗಿದೆ. ಮೈತ್ರಿಪಾಲೆ ಸಿರಿಸೇನ, ಎಲ್ಲ ವಿರೋಧ ಪಕ್ಷಗಳ ಅಭ್ಯರ್ಥಿ ಕಾರ್ಯಕಾರಿ ಅಧ್ಯಕ್ಷ ವ್ಯವಸ್ಥೆಯನ್ನು ಕೊನೆಗಾಣಿಸುವ ಒಂದು ಪ್ರತಿಜ್ಞೆಯೊಂದಿಗೆ ಅಧಿಕಾರ ಸ್ವೀಕರಿಸಿದ್ದಾರೆ. ಅಂತರ್ಯುದ್ಧ ಅಂತ್ಯಗೊಂಡ ನಂತರ ಕಳೆದ ಆರು ವರ್ಷಗಳಿಂದ ಪರಿಹಾರ ಕಾಣದೆ ಉಳಿದಿರುವ ತಮಿಳು ಪ್ರಶ್ನೆಯ ಒಂದು ರಾಜಕೀಯ ಇತ್ಯರ್ಥದ ನಿರೀಕ್ಷೆಗಳು ಒಂದು ಹೊಸ ಸರಕಾರದ

ಆಗಮನದೊಂದಿಗೆ ಜಾಗೃತಗೊಂಡಿವೆ.

1.37 ಸಾರ್ಕ್, ಆರ್ಥಿಕ ಸಹಕಾರ ಮತ್ತು ವ್ಯಾಪಾರದ ತನ್ನ ಸಾಧ್ಯತೆಗಳನ್ನು ಈಡೇರಿಸಿಕೊಳ್ಳುವಲ್ಲಿ, ಭಾರತ–ಪಾಕಿಸ್ತಾನ ಜಗಳದಿಂದಾಗಿ ವಿಫಲಗೊಂಡಿದೆ. ನವಂಬರ್ 2014ರಲ್ಲಿ ಕಾಠ್ಮಂಡುವಿನಲ್ಲಿ ನಡೆದ ಸಾರ್ಕ್ ಶೃಂಗದಲ್ಲಿ ಇದು ಕಾಣಬಂತು.

## ಸಾಮ್ರಾಜ್ಯಶಾಹಿ–ವಿರೋಧಿ ಸೌಹಾರ್ದತೆ

1.38 ಸಿಪಿಐ(ಎಂ) ದಕ್ಷಿಣ ಏಶ್ಯದಲ್ಲಿ ಅಮೆರಿಕ ತನ್ನ ಪ್ರಭಾವವನ್ನು ಮತ್ತು ವ್ಯೂಹಾತ್ಮಕ ಸಂಬಂಧಗಳನ್ನು ಗಟ್ಟಿಗೊಳಿಸಲು ನಡೆಸುವ ಕಸರತ್ತುಗಳನ್ನು ಬಲವಾಗಿ ವಿರೋಧಿಸುತ್ತದೆ. ಪಕ್ಷ ದಕ್ಷಿಣ ಏಶ್ಯದಲ್ಲಿ ಎಲ್ಲ ಎಡ, ಪ್ರಗತಿಶೀಲ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳೊಂದಿಗೆ ಸಹಕರಿಸುತ್ತದೆ ಮತ್ತು ತನ್ನ ಸಂಬಂಧಗಳನ್ನು ಬಲಪಡಿಸುತ್ತದೆ.

1.39 ಪಕ್ಷ ಪ್ಯಾಲೆಸ್ತೀನೀ ಜನತೆ ಇಸ್ರೇಲಿ ಆತಿಕ್ರಮಣದ ವಿರುದ್ಧ ಮತ್ತು ಒಂದು ಸ್ವತಂತ್ರ ಪ್ರಭುತ್ವಕ್ಕಾಗಿ ನಡೆಸುತ್ತಿರುವ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ. ಇಸ್ರೇಲಿನೊಂದಿಗೆ ಭಾರತೀಯ ಸರಕಾರದ ಭದ್ರತೆ ಮತ್ತು ಮಿಲಿಟರಿ ಶಾಮೀಲನ್ನು ಪಕ್ಷ ವಿರೋಧಿಸುತ್ತದೆ.

1.40 ಪಕ್ಷ ಚೀನ, ವಿಯೆಟ್ನಾಂ, ಕ್ಯೂಬ, ಕೊರಿಯ ಜನತಾ ಗಣತಂತ್ರ ಮತ್ತು ಲಾವೋಸ್ ಸಮಾಜವಾದಿ ದೇಶಗಳೊಮದಿಗೆ ತನ್ನ ಸೌಹಾರ್ದತೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಅಮೆರಿಕಾದ ನಿರ್ಬಂಧವನ್ನು ಅಂತ್ಯಗೊಳಿಸಲು ಕ್ಯೂಬದ ಸರಕಾರ ಮತ್ತು ಜನತೆ ಯ ಹೋರಾಟವನ್ನು ಪೂರ್ಣವಾಗಿ ಬೆಂಬಲಿಸುತ್ತದೆ.

1.41 ಪಕ್ಷ ಲ್ಯಾಟಿನ್ ಅಮೆರಿಕಾದ ಎಡ ಮತ್ತು ಕ್ರಾಂತಿಕಾರಿ ಶಕ್ತಿಗಲೋಡನೆ, ನಿರ್ದಿಷ್ಟವಾಗಿ ಕಸಾಮ್ರಾಜ್ಯಶಾಹಿ ಬೆಂಬಲಿತ ಬಲಪಂಥೀಯ ವಿರೋಧಿ ಪಕ್ಷಕ್ಕೆ ಎದುರಾಗಿ ಸೆಣಸುತ್ತಿರುವ ವೆನೆಝುವೆಲದ ್ರಾಂತಿಕಾರಿ ಶಕ್ತಿಗಳೊಂದಿಗೆ ಸೌಹಾರ್ದವನ್ನು ಕಟ್ಟಲು ಸಕ್ರಿಯವಾಗಿ ಕೆಲಸ ಮಾಡುತ್ತದೆ.

1.42 ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧ ಹೋರಾಟಗಳು, ಸಾಮ್ರಾಜ್ಯಶಾಹಿ ಜಾಗತೀಕರಣ ಹೇರುತ್ತಿರುವ ನವ–ಉದಾರವಾದಿ ವ್ಯವಸ್ಥೆಯ ವಿರುದ್ಧ ನಡೆಯುತ್ತಿರುವ ಬಹುವಿಧ ಹೋರಾಟಗಳು ಮತ್ತು ಪರಿಸರ ರಕ್ಷಣೆಯ ಹಾಗೂ ಹವಾಮಾನ ನ್ಯಾಯದ ಆಂದೋಲನ ಇವೆಲ್ಲವುಗಳು ಒಂದಾಗಿ ಬೆಸೆದು ಒಂದು ಶಕ್ತಿಶಾಲಿ ಸಾಮ್ರಾಜ್ಯಶಾಹಿ–ವಿರೋಧಿ ಆಂದೋಲನ ರಚನೆಗೊಳ್ಳಬೇಕು.

# ರಾಷ್ಟ್ರೀಯ ಸನ್ನಿವೇಶ

2.1 ಮೇ 2014 ರ ಲೋಕಸಭಾ ಚುನಾವಣೆಯು ರಾಜಕೀಯ ಸನ್ನಿವೇಶದಲ್ಲಿ ಭಾರಿ ಬದಲಾವಣೆಯನ್ನು ತಂದಿದೆ. ಮೊಟ್ಟಮೊದಲ ಬಾರಿಗೆ, ಭಾರತೀಯ ಜನತಾ ಪಕ್ಷವು ಕೇವಲ 31% ಮತ ಗಳಿಸಿ, ಸ್ಪಷ್ಟ ಬಹುಮತ ಪಡೆಯಿತು. ನವ ಉದಾರವಾದಿ ನೀತಿಗಳನ್ನು ಆಕ್ರಮಣಕಾರಿಯಾಗಿ ಮುಂದುವರಿಸುವ ಮತ್ತು ಆರ್.ಎಸ್.ಎಸ್. ನೇತೃತ್ವದ ಹಿಂದುತ್ವ ಶಕ್ತಿಗಳಿಗೆ ಸಂಪೂರ್ಣ ಪ್ರಮಾಣದಲ್ಲಿ ತಮ್ಮ ಕೋಮುವಾದಿ ಕಾರ್ಯಸೂಚಿಯನ್ನು ಮುಂತರುವ ಈ ಎರಡನ್ನೂ ಒಳಗೊಂಡ ಒಂದು ಬಲಪಂಥೀಯ ದಾಳಿಗೆ ಭೂಮಿಕೆ ಸಿದ್ಧವಾಗಿದೆ. ಇಂತಹ ಒಂದು ಪರಿಸ್ಥಿತಿಯು ಬೆಳೆಯುತ್ತಿರುವ ಸರ್ವಾಧಿಕಾರಶಾಹಿತ್ವಕ್ಕೆ ಮುನ್ಸೂಚನೆಯಾಗಿದೆ.

2.2 ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ತನ್ನ ಎರಡನೇ ಅವಧಿಯಲ್ಲಿ ನವ ಉದಾರವಾದಿ ಕಾರ್ಯಸೂಚಿಯನ್ನು ಇನ್ನೂ ಮುಂದುವರಿಸುತ್ತಿದೆ ಎಂದು ಏಪ್ರಿಲ್ 2012ರಲ್ಲಿ ನಡೆದ 20ನೇ ಮಹಾಧಿವೇಶನವು ಗಮನಿಸಿದೆ. ಬಯಲಾದ ಮಿತಿಮೀರಿದ ಭ್ರಷ್ಟಾಚಾರ, ನಿರ್ದಯ ಬೆಲೆಏರಿಕೆ ಮತ್ತು ಬೆಳೆಯುತ್ತಿರುವ ನಿರುದ್ಯೋಗ ದೊಡ್ಡ ವಿಭಾಗದ ಜನರನ್ನು ಅದರಲ್ಲೂ ಮಧ್ಯಮವರ್ಗ ಹಾಗೂ ಯುವಜನರನ್ನು ದೂರ ಮಾಡಿದೆ. ಆರ್.ಎಸ್.ಎಸ್ ಮತ್ತದರ ರಾಜಕೀಯ ಅಂಗವಾದ ಬಿಜೆಪಿಯು ತಮ್ಮ ಕೋಮುವಾದಿ ಕಾರ್ಯಸೂಚಿಯನ್ನು ಮುಂದೆ ಕೊಂಡೊಯ್ಯುವ ಅವಕಾಶಕ್ಕಾಗಿ ಕಾಯುತ್ತಿರುವುದರಿಂದ ಕೋಮುವಾದಿ ರಾಜಕೀಯ ಒಡ್ಡುವ ಅಪಾಯ ಮುಂದುವರಿದೇ ಇದೆ ಎಂದು ಆ ರಾಜಕೀಯ ನಿರ್ಣಯವು ಟಿಪ್ಪಣಿ ಮಾಡಿತ್ತು. ಆದ್ದರಿಂದ ಆ ನಿರ್ಣಯವು ಕಾಂಗ್ರೆಸ್ ಹಾಗೂ ಬಿಜೆಪಿ ಎರಡರ ವಿರುದ್ಧವೂ ಹೋರಾಡಲು ಕರೆ ಕೊಟ್ಟಿತ್ತು. ಎಲ್ಲಾ ಮಟ್ಟದಲ್ಲೂ ಅಮೆರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಬಲಪಡಿಸಲು ಯುಪಿಎ ಸರ್ಕಾರ ಹವಣಿಸುತ್ತಿದೆ ಎಂದು ಆ ನಿರ್ಣಯವು ಎತ್ತಿ ಹೇಳಿತ್ತು. ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ತೀವ್ರ ದಾಳಿ ಎದುರಿಸುತ್ತಿದೆ ಮತ್ತು ಒಟ್ಟಾರೆಯಾಗಿ ಎಡಪಂಥೀಯರನ್ನು ಮೂಲೆಗುಂಪು ಮಾಡುವ ಯತ್ನಗಳಾಗುತ್ತಿವೆ. ಪಕ್ಷದ ಸ್ವತಂತ್ರ ಬಲವನ್ನು ವಿಸ್ತರಿಸಲು, ಎಡ ಐಕ್ಯತೆಯನ್ನು ಬಲಗೊಳಿಸಲು ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ವೇದಿಕೆಯ ಆಧಾರದಲ್ಲಿ ಕಾರ್ಮಿಕ ವರ್ಗ, ರೈತಾಪಿ ಜನ ಹಾಗೂ ಇತರೆ ಜನವಿಭಾಗಗಳನ್ನು ಅಣಿನೆರೆಸಲು 20ನೇ ಮಹಾಧಿವೇಶನವು ಪಕ್ಷಕ್ಕೆ ಕರೆ ಕೊಟ್ಟಿತ್ತು.

2.3 ಪಕ್ಷದ ಕಳೆದ ಮಹಾಧಿವೇಶನದ ನಂತರದ ಪ್ರಮುಖ ಬೆಳವಣಿಗೆಗಳು ಮತ್ತು ಲಕ್ಷಣಗಳು ಈ ಕೆಳಗಿನಂತಿವೆ:

**ಒಟ್ಟಾರೆ ಲಕ್ಷಣಗಳು**

(i) ಯುಪಿಎ–2 ಸರ್ಕಾರವು ಭಾರಿ ಭ್ರಷ್ಟಾಚಾರ, ಹಿಂದೆಂದೂ ಕಂಡುಕೇಳರಿಯದಂತಹ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಮುಂತಾದ ತಲೆತಗ್ಗಿಸುವಂತಹ ದಾಖಲೆಗಳೊಂದಿಗೆ ತನ್ನ ಅಧಿಕಾರದ ಅವಧಿಯನ್ನು ಪೂರ್ಣಗೊಳಿಸಿತು. ಮನಮೋಹನ್ ಸಿಂಗ್ ಸರ್ಕಾರವು ಹೊಸ ರಂಗಗಳನ್ನು ವಿದೇಶಿ ನೇರ ಬಂಡವಾಳಕ್ಕೆ ತೆರೆಯುವುದು ಮತ್ತು ಹೆಚ್ಚಿನ ಖಾಸಗೀಕರಣದೊಂದಿಗೆ ನವ ಉದಾರವಾದಿ ನೀತಿಗಳಿಗೆ ಪ್ರೋತ್ಸಾಹದ ಮುಂದುವರಿಕೆಯನ್ನು ಆ ಅವಧಿ ಕಂಡಿತು.

(ii) ಹಿಂದಿನ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲನ್ನು ಕಂಡಿದ್ದ ಬಿಜೆಪಿಯು ಈ ಸನ್ನಿವೇಶದ ಪೂರ್ಣ ಪ್ರಯೋಜನ ಪಡೆಯಲು ಯಶಸ್ವಿಯಾಯಿತು. ದೊಡ್ಡ ಬಂಡವಾಳಶಾಹಿಗಳ ಬೆಂಬಲ ಪಡೆದು ಮತ್ತು ಆರ್.ಎಸ್.ಎಸ್.ನ ಪೂರ್ಣ ಶಕ್ತಿಯೊಂದಿಗೆ, ಕಾರ್ಪೊರೇಟ್ ಮಾಧ್ಯಮದ ಸಹಾಯದೊಂದಿಗೆ ನರೇಂದ್ರ ಮೋದಿಯವರನ್ನು ಉತ್ತಮ ಆಡಳಿತಗಾರ ಹಾಗೂ ಕೆಲಸ ಮಾಡಬಲ್ಲ ನೇತಾರ ಎಂದು ಪರಿಣಾಮಕಾರಿಯಾಗಿ ಬಿಂಬಿಸಲಾಯಿತು.

(iii) ಅದೇ ಸಮಯದಲ್ಲಿ, ಆರ್.ಎಸ್.ಎಸ್. ಮತ್ತದರ ಅಂಗಗಳು ಚುನಾವಣೆಗೆ ಒಂದು ವರ್ಷ ಮುಂಚೆಯೇ ಕೋಮು ಉದ್ವಿಗ್ನತೆ ಸೃಷ್ಟಿಮಾಡಲು ಮತ್ತು ಕೋಮು ಧೃವೀಕರಣದ ಮೂಲಕ ಬೆಂಬಲ ಗಳಿಸಲು ಕಾರ್ಯಾಚರಣೆಗೆ ಇಳಿದವು. ದೇಶ ಕೋಮುವಾದಿ ಘಟನೆಗಳಲ್ಲಿ ಗಮನಾರ್ಹ ಹೆಚ್ಚಳವನ್ನು ಕಂಡಿತು, ಉತ್ತರಪ್ರದೇಶದಲ್ಲಿ ಭುಗಿಲೆದ್ದ ಕೋಮು ಹಿಂಸಾಚಾರ ಇದಕ್ಕೊಂದು ಎದ್ದುಕಾಣುವ ಒಂದು ಉದಾಹರಣೆ.

(iv) ಬಿಜೆಪಿಯ ಗೆಲುವು ಮತ್ತು ಮೋದಿ ಸರ್ಕಾರದ ಆಗಮನವು ಬಲಪಂಥೀಯ ದಾಳಿಯನ್ನು ಹರಿಬಿಟ್ಟಿದೆ. ಈ ಕಾರ್ಪೊರೇಟ್ ಶಕ್ತಿ ಹಾಗೂ ಹಿಂದುತ್ವ ಜೋಡಿ–ಜವಳಿ ಬಲಪಂಥೀಯ ಪಲ್ಲಟಕ್ಕೆ ಇಂಧನಗಳಾಗುತ್ತಿವೆ.

(v) ಆರ್ಥಿಕತೆಯ ಎಲ್ಲಾ ರಂಗಗಳಲ್ಲಿ ವಿದೇಶಿ ಬಂಡವಾಳವನ್ನು ಹೆಚ್ಚು ಮಾಡುವ, ಖಾಸಗೀಕರಣ ತೀವ್ರಗೊಳಿಸುವ, ಕಾರ್ಮಿಕ ಕಾನೂನುಗಳು ಹಾಗೂ ಭೂಸ್ವಾಧೀನ ಕಾನೂನುಗಳನ್ನು ದುರ್ಬಲಗೊಳಿಸುವ ಧೋರಣೆಗೆ ಒತ್ತುಕೊಡುವುದರ ಮೂಲಕ ಒಂಭತ್ತು ತಿಂಗಳ ಮೋದಿ ಸರ್ಕಾರವು ನವ ಉದಾರವಾದಿ ನೀತಿಗಳ ಆಕ್ರಮಣಕಾರಿಯಾಗಿ ಅನುಸರಿಸುತ್ತಿರುವುದನ್ನು ವ್ಯಕ್ತಪಡಿಸುತ್ತಿದೆ. ಹಿಂದುತ್ವ ಕಾರ್ಯಸೂಚಿಯನ್ನು ಸಾರಾಸಗಟಾಗಿ ಜಾರಿ ಮಾಡುವ ಮೂಲಕ ಗಣತಂತ್ರದ ಜಾತ್ಯತೀತ–ಪ್ರಜಾಸತ್ತಾತ್ಮಕ ಅಡಿಪಾಯಕ್ಕೇ ಧಕ್ಕೆ ಬರುತ್ತಿದೆ.

(vi) ಯುಪಿಎ 2 ಸರ್ಕಾರದ ವಿದೇಶಾಂಗ ಧೋರಣೆಯ ದಿಕ್ಕು ಅಮೆರಿಕಾದೊಂದಿಗೆ ವ್ಯೂಹಾತ್ಮಕ ಸಂಬಂಧ ಗಟ್ಟಿಗೊಳಿಸುವುದನ್ನು ಮುಂದುವರಿಸಿತು, ಮತ್ತು ಅದರಿಂದ ಒಂದು ಸ್ವತಂತ್ರ ವಿದೇಶಾಂಗ ಧೋರಣೆಗೆ ಕೇಡು ತರುವಂತಾಯಿತು. ಮೋದಿ ಸರ್ಕಾರ ತಿಈ ಧೋರಣೆಯನ್ನು ತೀವ್ರಗೊಳಿಸುತ್ತಿದೆ.

(vii) ಭ್ರಷ್ಟಾಚಾರದ ಹಗರಣಗಳ ಸರಮಾಲೆಯಲ್ಲಿ ಸಿಲುಕಿಕೊಂಡ ಯುಪಿಎ ಸರ್ಕಾರ ಉನ್ನತ ಸ್ಥಾನದಲ್ಲಿನ ಭ್ರಷ್ಟಾಚಾರವನ್ನು ಮುನ್ನೆಲೆಗೆ ತಂದಿತು. ನವ ಉದಾರವಾದಿ ಆಳ್ವಿಕೆ ಮತ್ತು ದೊಡ್ಡ ಬಂಡವಾಳ–ಆಳುವ ರಾಜಕಾರಣಿಗಳು–ಅಧಿಕಾರಶಾಹಿಗಳ ನಡುವಣ ಸಂಬಂಧ ಇವುಗಳಿಂದಾಗಿ ಉಂಟಾದ ವ್ಯವಸ್ಥಾಗತ ಫಲಿತಾಂಶವೇ ಈ ಭ್ರಷ್ಟಾಚಾರ.

(viii) ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಇನ್ನೂ ವೇ ಪಡೆದುಕೊಂಡವು. ಕಾರ್ಮಿಕ ವರ್ಗ ಮತ್ತು ಬಡ ರೈತಾಪಿಗಳ ಶೋಷಣೆ ತೀವ್ರಗೊಂಡಿದೆ. ಇದರಿಂದೆ ಹೆಚ್ಚು ನರಳುವವರಲ್ಲಿ ಕೂಡ ಮುಖ್ಯರಾದವರು ಅದಾಗಲೇ ದಮನಕ್ಕೊಳಗಾಗಿರುವ ಮತ್ತು ವಂಚಿತರಾಗಿರುವ ಆದಿವಾಸಿಗಳು, ದಲಿತರು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರೇ.

(ix) ಬಂಗಾಳಿ ಮಾತನಾಡುವ ಮುಸ್ಲಿಮರ ಮೇಲೆ ಬೋಡೋ ಉಗ್ರವಾದಿ ಸಂಘಟನೆಗಳು ಅಸ್ಸಾಮಿನ ಬಿಟಿಎಡಿ ಮತ್ತು ಬಿಟಿಎಡಿಯೇತರ ಪ್ರದೇಶಗಳಲ್ಲಿ ನಡೆಸಿದ ವ್ಯಾಪಕ ಹಲ್ಲೆಗಳು ಮತ್ತು ಆನಂತರ ಆದಿವಾಸಿಗಳ ಮೇಲಿನ ದಾಳಿಗಳಂತಹ ಒಡಕನ್ನುಂಟುಮಾಡುವ ಶಕ್ತಿಗಳ ವಿಚ್ಛಿದ್ರಕಾರಿ ಚಟುವಟಿಕೆಗಳು ಕೂಡ ಕಾಣಿಸಿಕೊಂಡವು. ದೇಶದ ವಿವಿಧೆಡೆಗಳಲ್ಲಿ ಈಶಾನ್ಯ ಭಾಗದ ಜನರ ಮೇಲೆ ಹಲ್ಲೆಗಳು ನಡೆದಿವೆ.

(x) ಮಹಿಳೆಯರ ಮೇಲಿನ ದೌರ್ಜನ್ಯಗಳಲ್ಲಿನ ಪ್ರಮಾಣ ಹಾಗೂ ಸ್ವರೂಪ ಆತಂಕಕಾರಿಯಾಗಿ ಹೆಚಾಗಿದೆ. ಮಹಿಳೆಯರು, ಯುವತಿಯರು ಮತ್ತು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ವಿಪರೀತವಾಗಿ ಬೆಳೆದಿದೆ. ಪಿತೃಪ್ರಧಾನ ಹಾಗೂ ಮಾರುಕಟ್ಟೆ ಮೌಲ್ಯಗಳ ಫಲಿತಾಂಶವಾಗಿ ಮಹಿಳೆಯರ ಮೇಲೆ ವ್ಯಾಪಕ ಹಿಂಸಾಚಾರ ನಡೆಯುತ್ತಿದೆ.

(xi) ಈ ಅವಧಿಯಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ಐಕ್ಯ ಕಾರ್ಯಾಚರಣೆಗಳು ಹೆಚ್ಚಾದವು ಹಾಗೂ ಅದು 2013ರ ಫೆಬ್ರವರಿಯಲ್ಲಿ ಎರಡು ದಿನಗಳ ಐತಿಹಾಸಿಕ ಮುಷ್ಕರದಲ್ಲಿ ಪರ್ಯವಸಾನವಾಯಿತು. ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವುದರ ವಿರುದ್ಧ ಕಾರ್ಮಿಕ ಸಂಘಗಳ ಐಕ್ಯಹೋರಾಟ ಮುಂದುವರಿದಿದೆ.

(xii) ಈ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲಿನ ಟಿ.ಎಂ.ಸಿ ಹಾಗೂ ರಾಜ್ಯ ಸರ್ಕಾರದ ಹಲ್ಲೆಗಳು ಮುಂದುವರಿದಿವೆ. ಲೋಕಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳು ತೀವ್ರತರದ ಹಿನ್ನಡೆ ಅನುಭವಿಸಿದವು, ಇದು ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಆದ್ಯತೆಯ ಆಧಾರದ ಮೇಲೆ ಬಲಗೊಳಿಸುವ ಅಗತ್ಯತೆಗೆ ಒತ್ತು ನೀಡಿದೆ.

## ಆರ್ಥಿಕ ಪರಿಸ್ಥಿತಿ

2.4 ನವ ಉದಾರವಾದಿ ಬೆಳವಣಿಗೆಯ ಹಾದಿಯು ತೀವ್ರತರದ ಬಿಕ್ಕಟ್ಟಿನ ಹಂತ ತಲುಪಿದೆ ಎನ್ನುವುದನ್ನು ಕಳೆದ ಎರಡು ವರ್ಷಗಳ ಅವಧಿ ದೃಢಪಡಿಸಿದೆ ಮತ್ತು ಭಾರತದಂತಹ ದೇಶಗಳು ಜಾಗತಿಕ ಬಂಡವಾಳಶಾಹಿಯ ಸುದೀರ್ಘವಾದ ಬಿಕ್ಕಟ್ಟಿನಿಂದ ಪಾರಾಗಬಹುದು ಎಂಬ ಆರಂಭದ ನಿರೀಕ್ಷೆಗಳು ಸುಳ್ಳಾಗಿವೆ.

2.5 ಈ ಬಿಕ್ಕಟ್ಟಿನ ಬಹು ಮುಖ್ಯ ಸೂಚಕವೆಂದರೆ ಸುಮಾರು ಒಂದು ದಶಕದವರೆಗೆ, ಜಾಗತಿಕ ಬಿಕ್ಕಟ್ಟಿನ ನಂತರದ ತಕ್ಷಣದ ಅವಧಿಯನ್ನು ಹೊರತುಪಡಿಸಿದರೆ, ಅತ್ಯಂತ ಉನ್ನತ ಮಟ್ಟದಲ್ಲಿ ಕಾಪಾಡಿಕೊಂಡು ಬಂದಿದ್ದ ಬೆಳವಣಿಗೆಯು ನಿಧಾನಗೊಂಡದ್ದು. 2011–12ರ ಅವಧಿಯ ಉತ್ತರಾರ್ಧದಲ್ಲೇ ಈ ನಿಧಾನಗತಿಯ ಸೂಚನೆಗಳು ಕಾಣಲಾರಂಭಿಸಿದವು. 2012–13 ಮತ್ತು 2013–14ರಲ್ಲಿನ ಜಿಡಿಪಿಯ ವಾರ್ಷಿಕ ಬೆಳವಣಿಗೆಯ ದರವು ಶೇಕಡಾ 5ಕ್ಕಿಂತ ಕಡಿಮೆ ಇತ್ತು ಮತ್ತು 2014–15ರ ಮೊದಲ ಎರಡು ತ್ರೈಮಾಸಿಕಗಳ ಅಂಕಿ ಅಂಶಗಳು ಈ ವರ್ಷದಲ್ಲಿ ಅತ್ಯಲ್ಪ ಬೆಳವಣಿಗೆ ಮಾತ್ರ ಆಗಬಹುದೆಂದು ಹೇಳುತ್ತವೆ. ಈ ಬೆಳವಣಿಗೆಯ ಇಳಿತವು ಹಲವಾರು ಸೇವಾ ಮತ್ತು ನಿರ್ಮಾಣ ಕ್ಷೇತ್ರವನ್ನೂ ಕೂಡ ಒಳಗೊಂಡಂತೆ ಬಹುತೇಕ ಎಲ್ಲಾ ವಲಯಗಳಲ್ಲೂ ಇದ್ದಿತಾದರೂ ಅದು ಔದ್ಯೋಗಿಕ ಕ್ಷೇತ್ರದಲ್ಲಿ ವಿಪರೀತ ಕೆಟ್ಟ ಸ್ಥಿತಿ ತಲುಪಿದೆ. ಜುಲೈ 2011ರಿಂದ 40 ತಿಂಗಳಿಗಿಂತಲೂ ಹೆಚ್ಚು ಕಾಲ ಕೈಗಾರಿಕಾ ಬೆಳವಣಿಗೆ ಸೊನ್ನೆಗೆ ಹತ್ತಿರದಲ್ಲಿತ್ತು.

2.6 ಈ ಪರಿಸ್ಥಿತಿಯನ್ನು ನಿಭಾಯಿಸಲು ಯುಪಿಎ ಸರ್ಕಾರವು ವಿದೇಶಿ ಬಂಡವಾಳದ ಹಿತಾಸಕ್ತಿಗೆ ಅನುಕೂಲವಾಗುವಂತೆ ಮತ್ತು ಭಾರತೀಯ ದೊಡ್ಡ ಬಂಡವಳಿಗರನ್ನು ತುಷ್ಟೀಕರಿಸುವ ಸಲುವಾಗಿ ಭಾರಿ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಯಿತು. ಮುಂದುವರಿದ ತೆರಿಗೆ ವಿನಾಯಿತಿ ಮತ್ತು ತೆರಿಗೆ ನಿಯಮಗಳನ್ನು ಸಡಿಲಗೊಳಿಸುವುದರೊಂದಿಗೆ ವಿದೇಶಿ ಕಂಪನಿಗಳಿಗೆ ಹಾಗೂ ಭಾರತೀಯ ದೊಡ್ಡ ಬಂಡವಳಿಗರಿಗೆ ಅನುಕೂಲ ಮಾಡಿತು. ವಿದೇಶಿ ನೇರ ಬಂಡವಾಳದ ಹರಿವನ್ನು ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ 51%ಗೆ ಏರಿಸಲು; ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ಕಾಯಿದೆಯ ಮೂಲಕ ವಿದೇಶಿ ಬ್ಯಾಂಕ್‌ಗಳಿಗೆ ಅವುಗಳು ಭಾರತೀಯ ಬ್ಯಾಂಕ್‌ಗಳಲ್ಲಿ ಹೊಂದಿರುವ ಪಾಲಿನ(ಶೇರುಗಳ) ಆಧಾರದಲ್ಲಿ ಮುಂಚೆ ಇದ್ದಿದ್ದ

10% ಮತದಾನದ ಹಕ್ಕುಗಳ ಮಿತಿಯ ಬದಲಿಗೆ 26% ಹೊಂದಲು ಹಾಗೂ ಉದ್ದಿಮೆ ಮನೆತನಗಳು ಖಾಸಗಿ ಬ್ಯಾಂಕ್‌ಗಳನ್ನು ನಡೆಸಲು ಹಾದಿಯನ್ನು ತೆರೆಯಲು; ನಿವೃತ್ತಿವೇತನ ನಿಧಿ(ಪೆನ್ಶನ್ ಫಂಡ್)ಯನ್ನು ಖಾಸಗೀಕರಿಸಿ 26% ವಿದೇಶಿ ನೇರ ಬಂಡವಾಳ ಹೂಡಲು ಅವಕಾಶ ಒದಗಿಸುವ ಪೆನ್ಶನ್ ಮಸೂದೆ ಅಂಗೀಕಾರ; ಮುಂತಾದ ತೀರ್ಮಾನಗಳನ್ನು ಸರ್ಕಾರ ಮಾಡಿತು. ಔಷಧಿಗಳ ಬೆಲೆನಿಗದಿ ರಾಷ್ಟ್ರೀಯ ನೀತಿ(ದಿ ನ್ಯಾಷನಲ್ ಫಾರ್ಮಸ್ಯುಟಿಕಲ್ ಪ್ರೈಸಿಂಗ್ ಪಾಲಿಸಿ) ಬಹುರಾಷ್ಟ್ರೀಯ ಕಂಪನಿಗಳನ್ನೂ ಒಳಗೊಂಡಂತೆ ಭಾರಿ ಔಷಧ ಕಂಪನಿಗಳು ವಿಪುಲ ಲಾಭ ಮಾಡಿಕೊಳ್ಳಲು ಸಹಾಯ ಮಾಡುವ ಔಷಧಿಗಳ ಬೆಲೆ ನಿಯಂತ್ರಣ ವ್ಯವಸ್ಥೆಯನ್ನು ಪ್ರಕಟಿಸಿತು.

2.7 ಯುಪಿಎ ಅಡಿಯಲ್ಲಿ ವೆಚ್ಚ ನಿಯಂತ್ರಣ ಕಾರ್ಯನೀತಿಯ ಹೊರೆಯನ್ನು ಬಂಡವಾಳ ವೆಚ್ಚಗಳ ಜೊತೆಗೆ, ಸಾಮಾನ್ಯ ಜನರ ಬದುಕಿನ ಮೇಲೆ ಮಹತ್ವದ ಪರಿಣಾಮ ಬೀರುವಂತಹ –ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ; ರಸಗೊಬ್ಬರ ಮತ್ತು ಆಹಾರ ಸಬ್ಸಿಡಿ; ಮತ್ತು ಸಾಮಾಜಿಕ ವಲಯದ–ವೆಚ್ಚಗಳೇ ಹೊರಬೇಕಾಯಿತು. ವಾಸ್ತವದಲ್ಲಿ ಯುಪಿಎ 2ರ ಐದು ವರ್ಷಗಳ ಆಳ್ವಿಕೆಯಲ್ಲಿ ಈ ಬಾಬತ್ತುಗಳ ವಾರ್ಷಿಕ ವೆಚ್ಚವು ಯುಪಿಎ 1ರ ಕೊನೆಯ ವರ್ಷದಲ್ಲಿ ಇದ್ದಿದ್ದಕಿಂತ ಕಡಿಮೆ ಇತ್ತು. ಮೋದಿ ಸರ್ಕಾರದ ಕ್ರಮಗಳು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ (ಎಂ.ಎನ್.ಆರ್.ಇ.ಜಿ.ಎ)ಕಾರ್ಯಕ್ರಮ, ಆರೋಗ್ಯ ಆಯವ್ಯಯ ಮತ್ತಿತರ ಕಲ್ಯಾಣ ವೆಚ್ಚಗಳನ್ನು ಕಡಿತಗೊಳಿಸುವ ಅಥವಾ ಶೇರು ಹೂಡಿಕೆಗಳನ್ನು ಹಿಂತೆಗೆದುಕೊಳ್ಳುವ ಕಾರ್ಯಕ್ರಮ ಸ್ಪಷ್ಟವಾಗಿ ಮುಂದಿನ ದಿನಗಳಲ್ಲೂ ಇಂತಹದೇ ನೀತಿಗಳು ಬರಲಿವೆ ಎಂಬುದನ್ನು ತೋರಿಸುತ್ತಿವೆ.

2.8 ಮೋದಿ ಸರ್ಕಾರವು ನವ ಉದಾರವಾದಿ ನೀತಿಗಳನ್ನು ಆಕ್ರಮಣಕಾರಿಯಾಗಿ ಅನುಸರಿಸುತ್ತಿದೆ. ಬಿಜೆಪಿ ಸರಕಾರ ರೈಲ್ವೇಯಲ್ಲಿ ಎಫ್.ಡಿ.ಐ; ರಕ್ಷಣಾ ಉತ್ಪಾದನೆಯಲ್ಲಿ ಹೆಚ್ಚಿನ ಎಫ್.ಡಿ.ಐ ಮಿತಿಯನ್ನು ಪ್ರಕಟಿಸಿದೆ. ಘೋಷಿಸಿದೆ. ಸುಗ್ರೀವಾಜ್ಞೆಯ ಮೂಲಕ ವಿಮೆಯಲ್ಲಿ ಎಫ್.ಡಿ.ಐ ಮಿತಿಯನ್ನು 49% ಗೆ ಅದು ಹೆಚ್ಚಿಸಿದೆ, ಮತ್ತು ರಿಯಲ್ ಎಸ್ಟೇಟಿನಲ್ಲಿ ಎಫ್.ಡಿ.ಐ ಹೂಡಿಕೆಯ ನಿಯಮಗಳನ್ನು ಸಡಿಲಗೊಳಿಸಿದೆ. ಯೋಜನಾ ಆಯೋಗದ ಜಾಗದಲ್ಲಿ ನೀತಿ ಆಯೋಗವನ್ನು ತರಲಾಗಿದೆ; ಇದು ಪ್ರಧಾನ ಮಂತ್ರಿಗಳ ಅಡಿಯಲ್ಲಿರುವ ಒಂದು ಸಂಸ್ಥೆಯಾಗಿದ್ದು ರಾಜ್ಯಗಳಿಗೆ ಹಣಕಾಸು ಹಂಚಿಕೆ ಹೆಚ್ಚು ಕೇಂದ್ರೀಕೃತಗೊಳ್ಳಲಿದೆ.

2.9 ಸಾರ್ವಜನಿಕ ಉದ್ದಿಮೆಗಳ 43425 ಕೋಟಿ ರೂಪಾಯಿ ಮೌಲ್ಯದ ಶೇರುಗಳನ್ನು ಮಾರಾಟವನ್ನು 2014–15ರ ಕೇಂದ್ರ ಆಯವ್ಯಯದಲ್ಲಿ ಕಲ್ಪಿಸಲಾಗಿದೆ. ಸರ್ಕಾರವು ಒಂದು ಸುಗ್ರೀವಾಜ್ಞೆಯನ್ನು ತಂದು ಕಲ್ಲಿದ್ದಲು ಗಣಿಗಳನ್ನು ಹರಾಜು ಹಾಕುವ ಮತ್ತು ಖಾಸಗಿ ವಾಣಿಜ್ಯ ಗಣಿಗಾರಿಕೆಗೆ ಅನುವು ಮಾಡಿಕೊಡುವಂತಹ

ತಿದ್ದುಪಡಿಗಳನ್ನು ಕಲ್ಲಿದ್ದಲು ರಾಷ್ಟ್ರೀಕರಣ ಕಾಯಿದೆಗೆ ತರುವುದರ ಮೂಲಕ ಕಲ್ಲಿದ್ದಲು ಉದ್ದಿಮೆಯ ರಾಷ್ಟ್ರೀಕರಣವನ್ನು ರದ್ದುಮಾಡುವತ್ತ ಕೊಂಡೊಯ್ದಿದೆ. ಸರ್ಕಾರವು ಡೀಸೆಲ್ ಬೆಲೆ ನಿಗದಿ ನಿಯಂತ್ರಣವನ್ನು ತೆಗೆದುಹಾಕಿದೆ. ಅರಣ್ಯ ಪ್ರದೇಶಗಳಲ್ಲಿ ಬಹಳ ಸಂಖ್ಯೆಯ ಗಣಿಗಾರಿಕೆ ಮತ್ತು ವಿದ್ಯುತ್ ಯೋಜನೆಗಳಿಗೆ ಪರಿಸರ ಅನುಮತಿಯನ್ನು ನೀಡಿದೆ. ಅದು ಬಹಳ ದೊಡ್ಡ ರೀತಿಯಲ್ಲಿ ಬುಡಕಟ್ಟು ಜನಗಳ ಹಕ್ಕುಗಳನ್ನು ಹಾಗೂ ಪರಿಸರವನ್ನು ಪ್ರತಿಕೂಲವಾಗಿ ತಟ್ಟಿದೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆರ್ಥಿಕತೆ ಈಗಲೂ ನಿಧಾನವಾಗಿಯೇ ಬೆಳೆಯುತ್ತಿದೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ 2.5% ಗಿಂತ ಹೆಚ್ಚಾಗುವ ನಿರೀಕ್ಷೆ ಇಲ್ಲ. ಎಂದಿನ ಮಳೆ ಇಲ್ಲದೆ ಕೃಷಿ ಉತ್ಪಾದನೆ 2014–15ರಲ್ಲಿ ಕಡಿಮೆಯಾಗುವ ನಿರೀಕ್ಷೆಯಿದೆ.

2.10 ಹಣದುಬ್ಬರ ಪ್ರಕ್ರಿಯೆಯು ಆಹಾರ ಪದಾರ್ಥಗಳಲ್ಲಿ ಹೆಚ್ಚು ಕೇಂದ್ರೀಕರಿಸಿದೆ. ಸರಿಸುಮಾರು ಒಂದು ದಶಕದ ಕಾಲ ಆಹಾರ ಪದಾರ್ಥಗಳ ತೀವ್ರ ಬೆಲೆ ಏರಿಕೆಯ ಪ್ರವೃತ್ತಿಯೇ ಪ್ರಬಲವಾಗಿತ್ತು. ಇದರ ಫಲಿತಾಂಶವಾಗಿ ಆ ಅವಧಿಯಲ್ಲಿ ಬಹುಪಾಲು ಆಹಾರ ಪದಾರ್ಥಗಳ ಮೇಲಿನ ಬೆಲೆ ಎರಡು ಪಟ್ಟಿಗಿಂತಲೂ ಹೆಚ್ಚಾಗುವಂತೆ ಮಾಡಿದೆ. ಆರ್ಥಿಕ ಬೆಳವಣಿಗೆ ಸಾಧಾರಣವಾಗಿದ್ದರೂ ಹಣದುಬ್ಬರ ದರವು ಸಾಮಾನ್ಯ ಜನರಿಗೆ ತೀರ ಮೇಲ್ಮಟ್ಟದಲ್ಲೇ ವಿವರಣೆಗೆ ದಕ್ಕದ ರೀತಿಯಲ್ಲಿ ಮುಂದುವರಿಯಿತು. ಸಗಟು ಬೆಲೆ ಸೂಚ್ಯಂಕ ಕಡಿಮೆಯಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದ್ದರೂ, ಆಹಾರ ಪದಾರ್ಥಗಳ ಹಣದುಬ್ಬರ ದರ 2014–15ರಲ್ಲಿ ಮೇಲೇ ಅಂದರೆ 8.63% ಇತ್ತು. ಕಚ್ಚಾ ತೈಲದ ಆಮದು ಬೆಲೆಗಳು ಗಮನಾರ್ಹವಾಗಿ ಇಳಿಯುತ್ತಿದ್ದು ಅದು ಇಂಧನ ಬೆಲೆಗಳ ಇಳಿಕೆಯಲ್ಲಿ ಮತ್ತು ಹಣದುಬ್ಬರ ದರ ಇಳಿಕೆಯಲ್ಲಿ ಕಾಣಬೇಕಾಗಿತ್ತಾದರೂ ಅದು ಹಾಗಾಗಲಿಲ್ಲ. ಜೂನ್ 2014ರಿಂದ ಅಂತರ್ರಾಷ್ಟ್ರೀಯ ತೈಲ ಬೆಲೆ ತೀವ್ರ ಇಳಿಮುಖ ಕಂಡು 55%ದಷ್ಟು ಇಳಿದಿದೆ. ಆದರೆ ಮೋದಿ ಸರ್ಕಾರವು ಈ ಅವಧಿಯಲ್ಲಿ ನಾಲ್ಕು ಬಾರಿ ತೈಲ ಆಮದಿನ ಮೇಲೆ ಅಬಕಾರಿ ಸುಂಕ ಹೆಚ್ಚಿಸುವ ಮೂಲಕ ಪೆಟ್ರೋಲ್ ಡೀಸೆಲ್ ಬೆಲೆಗಳ ಇಳಿತದ ಪ್ರಯೋಜನವು ಸಾಮಾನ್ಯ ಜನರಿಗೆ ತಲುಪದಂತೆ ಮಾಡಿದೆ.

2.11 ಕಳೆದ ಮೂರು ವರ್ಷಗಳಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಉದ್ಯೋಗ ಬೆಳವಣಿಗೆಯ ದರ 1%ಗಿಂತಲೂ ಕಡಿಮೆ ಇದ್ದು ಅದು ಪಟ್ಟಣ ಹಾಗೂ ಗ್ರಾಮೀಣ ಎರಡೂ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ. 30 ಕೋಟಿಯಷ್ಟಿರುವ 15–29 ವಯಸ್ಸಿನ ಗುಂಪಿನ ನಿರುದ್ಯೋಗ ದರ 13.3% ಇದೆ. ಕೈಗಾರಿಕಾ ಹಾಗೂ ಆರ್ಥಿಕ ನಿಧಾನಗತಿಯಿಂದಾಗಿ ಇಂಜನಿಯರುಗಳಲ್ಲಿ ಮತ್ತು ತಾಂತ್ರಿಕ ಸಿಬ್ಬಂದಿಗಳಲ್ಲಿ ಉದ್ಯೋಗಹೀನತೆ ಸೃಷ್ಟಿಯಾಗಿದೆ. ಮಹಿಳಾ ಕಾರ್ಮಿಕರ ಸಂಖ್ಯೆ ತೀವ್ರ ಇಳಿಮುಖ ಕಂಡಿದೆ. ಸಿಗುತ್ತಿರುವ ಉದ್ಯೋಗಗಳು ಬಹಳ ಕಡಿಮೆ

ಸಂಬಳದವು ಮತ್ತು ಉದ್ಯೋಗ ಭದ್ರತೆ ಇಲ್ಲದವು. ಇದು ನವ ಉದಾರವಾದಿ ವ್ಯವಸ್ಥೆಯ ಒಂದು ನಿರೀಕ್ಷಿತ ವಿದ್ಯಮಾನ.

2.12 ಬೆಳವಣಿಗೆಯನ್ನು ಉತ್ತೇಜಿಸಲು ಸಾರ್ವಜನಿಕ ವೆಚ್ಚ ಮತ್ತು ಹೂಡಿಕೆಯು ಒಂದು ಧೋರಣೆ ಇಲ್ಲದಿರುವುದರಿಂದ, ಖಾಸಗಿ ಹೂಡಿಕೆಯನ್ನು ಆಕರ್ಷಿಸಲು ಮತ್ತು ಲಾಭಗಳನ್ನು ಉತ್ತೇಜಿಸಲು ಇತರೆ ಕ್ರಮಗಳನ್ನು ಮುಂದೊತ್ತಲಾಗುತ್ತಿದೆ. ಇದರ ಮುಖ್ಯ ಅಂಶಗಳಲ್ಲಿ ಕೆಲವು ಹೀಗಿವೆ: ಅ) ಕಾರ್ಮಿಕ ಕಾನೂನುಗಳ ಬದಲಾವಣೆಗಳ ಮೂಲಕ ಶ್ರಮಕ್ಕೆ ಎದುರಾಗಿ ಬಂಡವಾಳದ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸುವುದು, ಇದು 'ಹೊಂದಿಕೆ'ಯನ್ನು ಹೆಚ್ಚಿಸಬಲ್ಲದು ಎಂದು; ಆ) ದೊಡ್ಡ ಬಂಡವಳಿಗರ ರಿಯಲ್ ಎಸ್ಟೇಟ್, ಮೂಲರಚನೆ, ಗಣಿಗಾರಿಕೆ, ಕೈಗಾರಿಕಾ ಯೋಜನೆಗಳಿಗೆ ಅಗ್ಗದ ಭೂಮಿಯನ್ನು ಲಭ್ಯಗೊಳಿಸುವುದನ್ನು ಸುಲಭಗೊಳಿಸುವುದು, ರೈತರು ಹಾಗೂ ಗುಡ್ಡಗಾಡು ಜನರ ಹಿತಗಳನ್ನು ಬಲಿಗೊಟ್ಟು–ಇದಕ್ಕೆ ಸುಗ್ರೀವಾಜ್ಞೆಯ ಮೂಲಕ ಭೂಸ್ವಾಧೀನ ಕಾನೂನುಗಳಿಗೆ ತಿದ್ದುಪಡಿ; ಇ) ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಮತ್ತು ಚಟುವಟಿಕೆಗಳನ್ನು ಖಾಸಗೀಕರಣ ಮಾಡುವುದರ ಮೂಲಕ ರಾಷ್ಟ್ರೀಯ ಸಂಪನ್ಮೂಲಗಳನ್ನು ಕಾರ್ಪೊರೇಟ್ ಗುಂಪುಗಳಿಗೆ ಹೆಚ್ಚೆಚ್ಚಾಗಿ ವಹಿಸಿ ಕೊಡುವುದು–ಅಂದರೆ ಯುಪಿಎ ಆಳ್ವಿಕೆಯಲ್ಲಿ ಭ್ರಷ್ಟಾಚಾರ ಹಗರಣಗಳ ಸರಮಾಲೆ ಬರಲು ಕಾರಣವಾದ ಅದೇ ಪ್ರಕ್ರಿಯೆ; ಈ) ಪರಿಸರ ಮಾನದಂಡಗಳನ್ನು ಕೆಳಗಿಳಿಸಿ ಹೆಚ್ಚೆಚ್ಚು ಯೋಜನೆಗಳಿಗೆ ಮಂಜೂರಾತಿ ಸಿಗುವಂತೆ ಮಾಡುವುದು; ಮತ್ತು ಉ) ತೆರಿಗೆ ರಿಯಾಯಿತಿಗಳು ಮತ್ತು ಸಾಲ ಮನ್ನಾ ಮಾಡುವುದು–ಇದರಿಂದ ಜನರ ಅಗತ್ಯಗಳಿಗೆ ಬೇಕಾದ ಸಂಪನ್ಮೂಲಗಳನ್ನು ಕಂಡುಕೊಳ್ಳುವುದು ಕಷ್ಟಕರವಾಗುತ್ತದೆ; ಮತ್ತು ಊ) ಸಾಮಾಜಿಕ ವಲಯದ ವೆಚ್ಚದಲ್ಲಿ ಗಮನಾರ್ಹ ಕಡಿತಗಳು.

2.13 ಬಿಕ್ಕಟ್ಟಿಗೆ ಭಾರತೀಯ ಪ್ರಭುತ್ವದ ಸ್ಪಂದನೆ ಬಂಡವಾಳಶಾಹಿ ವರ್ಗದ ಸಂಕುಚಿತ ವರ್ಗ ಕಣ್ಣೋಟವನ್ನು ಪ್ರತಿಫಲಿಸುತ್ತದೆ; ಇದು ಬಿಕ್ಕಟ್ಟನ್ನು ಸೃಷ್ಟಿಸಿದ ಪ್ರಕ್ರಿಯೆಯನ್ನೇ ಪುನರ್ ಸೃಷ್ಟಿಸುವ ಒಂದು ಪ್ರಯತ್ನವೇ ಆಗಿ ಬಿಡುತ್ತದೆ– ಬೇರೆ ಮಾತುಗಳಲ್ಲಿ ಹೇಳುವುದಾದರೆ, ನವ–ಉದಾರವಾದದ ಚೌಕಟ್ಟಿನಲ್ಲೇ ಪರಿಹಾರವನ್ನು ಹುಡುಕುವುದು, ಇದು ಈಗಾಗಲೇ ಇರುವ ಉದ್ಯೋಗ ಮತ್ತು ಆದಾಯದ ಬಿಕ್ಕಟ್ಟನ್ನು ಉಲ್ಬಣಗೊಳಿಸುವ ಮೂಲಕವಷ್ಟೇ ಕೆಲಸ ಮಾಡಲು ಸಾಧ್ಯ. ಇದು ಆಳುವ ವರ್ಗಗಳು ಮತ್ತು ದುಡಿಯುವ ಜನಗಳ–ಕಾರ್ಮಿಕರು ಮತ್ತು ರೈತಾಪಿಗಳ– ಹಿತಾಸಕ್ತಿಗಳ ನಡುವಿನ ವೈರುಧ್ಯಗಳನ್ನು ಗಟ್ಟಿಗೊಳಿಸುವಂತದ್ದೇ. ಜನತೆಯ ಮೇಲೆ ಈ ಸರ್ವತೋಮುಖ ದಾಳಿಗೆ ಪ್ರಸಕ್ತ ಘಟ್ಟದಲ್ಲಿ ಆಳುವ ವರ್ಗಕ್ಕೆ ಹೆಚ್ಚೆಚ್ಚು ಸರ್ವಾಧಿಕಾರಶಾಹಿತ್ವ ಅಗತ್ಯವೆನಿಸುತ್ತದೆ.

## ಕರ್ಷಕ ಪರಿಸ್ಥಿತಿಗಳು

2.14 ಗ್ರಾಮೀಣ ಭಾರತದಲ್ಲಿ ಕರ್ಷಕ ಪರಿಸ್ಥಿತಿಗಳು ಬಡ ಮತ್ತು ಮಧ್ಯಮ ರೈತರು ಮತ್ತು ಗ್ರಾಮೀಣ ಕೃಷಿ ಕೂಲಿಕಾರರ ಮಟ್ಟಿಗೆ ಕಳೆದ ಮೂರು ವರ್ಷಗಳಲ್ಲಿ ಮತ್ತಷ್ಟು ಹದಗೆಟ್ಟಿದೆ. ಕೃಷಿ ಬೆಳವಣಿಗೆಯ ದೀರ್ಘಾವಧಿ ನಿಧಾನಗತಿ ಮುಂದುವರೆದಿದೆ ಮತ್ತು ತಲಾ ಆಹಾಧಾನ್ಯ ಲಭ್ಯತೆ ಸ್ಥಗಿತಾವಸ್ಥೆಯಲ್ಲಿ ಇದೆ. ಕೃಷಿಯಲ್ಲಿ ಬಂಡವಾಳ ನಿರ್ಮಾಣಕ್ಕೆ ಸಾರ್ವಜನಿಕ ಹೂಡಿಕೆಯ ಪಾಲು ಕೃಷಿ ವಲಯದ ಒಟ್ಟು ಉತ್ಪನ್ನ(ಜಿಡಿಪಿ)ದಲ್ಲಿ ಇಳಿಮುಖವಾಗುತ್ತಿದೆ. ರೈತರ ಆತ್ಮಹತ್ಯೆಗಳು ಹಲವು ರಾಜ್ಯಗಳಲ್ಲಿ–ಮಹಾರಾಷ್ಟ್ರ, ತೆಲಂಗಾಣ, ಪಶ್ಚಿಮ ಬಂಗಾಲ ಮುಂತಾದೆಡೆಗಳಲ್ಲಿ ಮುಂದುವರೆದಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ)ಯ ಪ್ರಕಾರ 2013ರಲ್ಲಿ ಬೇಸಾಯ ಮತ್ತು ಕೃಷಿಯಲ್ಲಿ 11772 ವ್ಯಕ್ತಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಕೃಷಿ ಸಂಕಟಕ್ಕೆ ನಿಕಟ ಕಾರಣ ಬೇಸಾಯ, ನಿರ್ದಿಷ್ಟವಾಗಿ ಸಣ್ಣ ಮತ್ತು ಅಂಚಿನ ರೈತರಿಗೆ ಹೆಚ್ಚೆಚ್ಚು ನಷ್ಟದಾಯಕವಾಗುತ್ತಿರುವುದು. ಸಣ್ಣ ರೈತ ಬೇಸಾಯ ಆರ್ಥಿಕದಲ್ಲಿನ ಈ ಬಿಕ್ಕಟ್ಟಿನ ಲಕ್ಷಣವೆಂದರೆ ಲಾಗುವಾಡುಗಳ ಬೆಲೆಗಳಲ್ಲಿ ತೀವ್ರ ಏರಿಕೆ ಮತ್ತು ಅದೇ ಅನುಪಾತದಲ್ಲಿ ಉತ್ಪನ್ನಗಳ ಬೆಲೆಗಳಲ್ಲಿ ಏರಿಕೆಯಾಗದಿರುವುದು– ಇದು ತೀವ್ರಗೊಳ್ಳುತ್ತಿದೆ.

2.15 ಒಂದೆಡೆಯಲ್ಲಿ, ಲಾಗುವಾಡುಗಳ, ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ವಿದ್ಯುತ್ ಮತ್ತು ಇಂಧನದ ಬೆಲೆಗಳು 2012ರಿಂದ ಸರಕಾರದ ಧೋರಣೆಗಳಿಂದಾಗಿ ಏರುತ್ತಿವೆ. ಸಾರ್ವಜನಿಕ ಕೃಷಿ ಸಂಶೋಧನೆಯನ್ನು ಕೆಳಮಟ್ಟಕ್ಕೆ ಇಳಿಸಿದ್ದರಿಂದಾಗಿ ಬೀಜಗಳ ಉತ್ಪಾದನೆ ಮತ್ತು ವಿತರಣೆಯಲ್ಲಿ ಬಹುರಾಷ್ಟ್ರೀಯ ಮತ್ತು ದೇಶೀ ಕಾರ್ಪೊರೇಟ್‌ಗಳ ಮಾರುಕಟ್ಟೆ ಶಕ್ತಿ ತೀವ್ರಗೊಳ್ಳುವಂತಾಗಿದೆ. ಬೇಸಾಯದ ಲಾಗುವಾಡುಗಳಲ್ಲಿ ಕಾರ್ಪೊರೇಟ್‌ಗಳ ಹತೋಟಿ ಹೆಚ್ಚುತ್ತಿದೆ. ಇನ್ನೊಂದೆಡೆಯಲ್ಲಿ ಈ ಹಲವಾರು ಲಾಗುವಾಡುಗಳ ಖರ್ಚುಗಳಲ್ಲಿ ತೀವ್ರ ಹೆಚ್ಚಳಕ್ಕೆ ಅದಕ್ಕನುಗುಣವಾಗಿ ಉತ್ಪನ್ನಗಳ ಬೆಲೆಗಳ ಏರಿಕೆಯ ಮೂಲಕ ಪರಿಹಾರ ಸಿಗುತ್ತಿಲ್ಲ. ನಿಜಸಂಗತಿಯೆಂದರೆ, ಚಹಾ, ರಬ್ಬರ್, ಮೆಣಸು, ತೆಂಗು, ಹತ್ತಿ, ತೊಗರಿ, ಕಡಲೆ ಮತ್ತು ಈರುಳ್ಳಿ ಬೆಲೆಗಳು ಸ್ಥಗಿತಗೊಂಡಿವೆ ಅಥವ ಇಳಿದಿವೆ. ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೃಷಿ ಸರಕುಗಳ ಬೆಲೆಗಳು ಕುಸಿದಿರುವುದು ರೈತರನ್ನು ಪ್ರತಿಕೂಲವಾಗಿ ತಟ್ಟಿದೆ. ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕ ಖರೀದಿ ವ್ಯವಸ್ಥೆಯನ್ನು ಬಲಪಡಿಸುವುದು ಒಂದು ರೀತಿಯ ಪರಿಹಾರವಾಗುತ್ತದೆ. ಆದರೆ ಹೊಸ ಸರಕಾರ ಸಾರ್ವಜನಿಕ ಖರೀದಿ ವ್ಯವಸ್ಥೆಯನ್ನು ಕಳಚಿ ಹಾಕಿ ಬೇಸಾಯದ ಸ್ಥಳಕ್ಕೇ ಬಂದು ಖರೀದಿ ಮಾಡಲು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಚಿಲ್ಲರೆ ವ್ಯಾಪಾರದ ದೈತ್ಯರನ್ನು ಆಹ್ವಾನಿಸುತ್ತಿದೆ. ಕಬ್ಬು ಬೆಳೆಗಾರರಿಗೆ ಸುಮಾರು 11000 ಕೋಟಿ ರೂ.ಗಳಷ್ಟು ಬಾಕಿ ಹಣವನ್ನು ಕೊಡಿಸುವಲ್ಲಿ ಸರಕಾರ ವಿಫಲವಾಗಿರುವುದು ಅವರನ್ನು ತಟ್ಟಿದೆ.

2.16 ಕೃಷಿ ಸಾಲದಲ್ಲಿನ ಹೆಚ್ಚಳ ಬಹುರಾಷ್ಟ್ರೀಯ ಕಂಪನಿಗಳ, ಕೃಷಿ ವ್ಯಾಪಾರಿ ಮನೆತನಗಳ ಮತ್ತು ದೊಡ್ಡ ರೈತರ ಪರವಾಗಿ ಅತ್ಯಂತ ವಕ್ರವಾಗಿದೆ. ಸಣ್ಣ ಮತ್ತು ಅಂಚಿನಲ್ಲಿರುವ ರೈತರನ್ನು ಔಪಚಾರಿಕ ಸಾಲ ವ್ಯವಸ್ಥೆಯಿಂದ ಹೊರದಬ್ಬಲಾಗುತ್ತಿದೆ, ಅವರು ಲೇವಾದೇವಿಗಾರರ ಮೇಲೆಯೇ ಅವಲಂಬಿಸಲೇಬೇಕಾಗುವಂತೆ ಮಾಡಲಾಗಿದೆ. ರೈತಾಪಿಗಳ ನಡುವೆ ಸಾಲಗ್ರಸ್ತತೆ ಹೆಚ್ಚುತ್ತಿದೆ.

2.17 ಸಹಕಾರಿ ಪತ್ತಿನ ಸಂಘಗಳನ್ನು ಕುರಿತ ಹೊಸ ಧೋರಣೆಗಳು ಭಾರತದ ಪ್ರಾಥಮಿಕ ಕೃಷಿ ಸಾಲ ಸಹಕಾರಿಗಳನ್ನು ವಾಣಿಜ್ಯ ಬ್ಯಾಂಕುಗಳ "ಬ್ಯಾಂಕಿಂಗ್ ಪತ್ರವ್ಯವಹಾರ"ದವರನ್ನಾಗಿ ಪರಿವರ್ತಿಸುತ್ತದೆ, ಅವು ಠೇವಣಿಗಳನ್ನು ಸ್ವೀಕರಿಸುವುದನ್ನು ನಿರ್ಬಂಧಿಸಿ, ಮತ್ತು ವಾಣಿಜ್ಯ ಬ್ಯಾಂಕುಗಳು ಮತ್ತು ಅವರ ಗ್ರಾಹಕರ ನಡುವೆ ಮಧ್ಯವರ್ತಿಗಳ ಮಟ್ಟಕ್ಕೆ ಇಳಿಸಿ ಆ ಸಹಕಾರಿಗಳ ಬುನಾದಿಯನ್ನೇ ಶಿಥಿಲಗೊಳಿಸುತ್ತಿವೆ.

2.18 ಭೂಮಾಲಕರು ಮತ್ತು ದೊಡ್ಡ ಬಂಡವಾಳಶಾಹಿ ರೈತರು ಉದಾರೀಕರಣದ ಅಡಿಯಲ್ಲಿ ಗ್ರಾಮೀಣ ಬದಲಾವಣೆಯ ಫಲಾನುಭವಿಗಳಾಗಿದ್ದಾರೆ. ಕೂಲಿಗೆ ಕೆಲಸಮಾಡುವವರ ಕೂಲಿ ದರಗಳು, ಅವರು ಕೃಷಿಯಲ್ಲಿರಲಿ, ಕೃಷಿಯೇತರ ಕೆಲಸಗಳಲ್ಲಿರಲಿ, ಕೆಳಮಟ್ಟದಲ್ಲೇ ಇವೆ, ವ್ಯಾಪಕ ಪ್ರಾದೇಶಿಕ ವ್ಯತ್ಯಾಸಗಳು ಮತ್ತು ತೀವ್ರ ಲಿಂಗ ಪಕ್ಷಪಾತಕ್ಕೆ ಒಳಗಾಗಿವೆ. ಇದರೊಂದಿಗೆ, ಗ್ರಾಮೀಣ ಕಾರ್ಮಿಕರಿಗೆ ಕೆಲಸ ಸಿಗುವ ಸರಾಸರಿ ದಿನಗಳು ಕೂಡ ಅತ್ಯಂತ ಕಡಿಮೆ, ಅದರಲ್ಲೂ ಮಹಿಳೆಯರಿಗೆ. ವಲಸೆ ಕಾರ್ಮಿಕರ ಸ್ಥಿತಿಯಂತೂ ಶೋಚನೀಯ, ಅದೇ ರೀತಿಯಲ್ಲಿ ಅವರ ಸ್ವಂತ ಊರುಗಳಲ್ಲಿ ಅವರ ಕುಟುಂಬಗಳ ಪರಿಸ್ಥಿತಿ ಕೂಡ.

2.19 ಹಿಂದಿನ ಸಂಸತ್ತು ಪಾಸು ಮಾಡಿದ ಭೂಸ್ವಾಧೀನ ಕಾನೂನನ್ನು ಬಿಜೆಪಿ ಸರಕಾರ ಕಾರ್ಪೊರೇಟ್‌ಗಳು ಮತ್ತು ಭೂಮಾಫಿಯಾಗಳ ಲಾಭಕೋರತನಕ್ಕೆ ಮತ್ತು ರಿಯಲ್ ಎಸ್ಟೇಟ್ ಜೂಜುಕೋರತನಕ್ಕೆ ಪ್ರೋತ್ಸಾಹ ನೀಡಲು ಒಂದು ಸುಗ್ರೀವಾಜ್ಞೆಯ ಮೂಲಕ ಪ್ರಜಾಪ್ರಭುತ್ವ–ವಿರೋಧಿಯಾಗಿ ತಿದ್ದುಪಡಿ ಮಾಡಿದೆ, ಈ ಸುಗ್ರೀವಾಜ್ಞೆ ರೈತರು ಮತ್ತು ಭೂಮಿಯನ್ನು ಅವಲಂಬಿಸಿರುವ ಕೋಟ್ಯಂತರ ಜನಗಳ ನೈಜ ಆತಂಕಗಳನ್ನು ಉಪೇಕ್ಷಿಸುತ್ತದೆ. ನಿಜಸಂಗತಿಯೆಂದರೆ, ಇದು ವಸಾಹತುಶಾಹಿಗಳ 1894ರ ಭೂಸ್ವಾಧೀನ ಕಾನೂನಿನ ಕರಾಳ ಅಂಶಗಳನ್ನು ಮರುಸ್ಥಾಪಿಸಿದೆ.

## ತೀಕ್ಷ್ಣಗೊಂಡಿರುವ ಅಸಮಾನತೆಗಳು

2.20 ಈ ಅವಧಿ ನವ–ಉದಾರವಾದಿ ಧೋರಣೆಗಳಿಂದಾಗಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಉಲ್ಬಣಗೊಂಡಿರುವುದನ್ನು ಕಂಡಿದೆ. 2014ರ ಫೋರ್ಬ್ಸ್ ಪಟ್ಟಿಯ ಪ್ರಕಾರ ಭಾರತದ 100 ಅತ್ಯಂತ ಶ್ರೀಮಂತ ಜನಗಳೆಲ್ಲ ಶತಕೋಟ್ಯಾಧಿಪತಿಗಳು (1 ಬಿಲಿಯ ಅಂದರೆ 1 ಶತಕೋಟಿ ಡಾಲರುಗಳು=6200ಕೋಟಿ ರೂ.). ಇದು

2011ರಲ್ಲಿ ಇದೇ ಪಟ್ಟಿಯಲ್ಲಿದುದಕ್ಕಿಂತ 45 ಹೆಚ್ಚು. ಆಗ ಈ ಪಟ್ಟಿಯಲ್ಲಿದ್ದವರು 55. ಈ 100 ಬಿಲಿಯಾಧಿಪತಿಗಳ ಒಟ್ಟು ಸಂಪತ್ತು 346 ಶತಕೋಟಿ ಡಾಲರುಗಳು. ಕುಟುಂಬಗಳ ಒಟ್ಟು ಸಂಪತ್ತಿನಲ್ಲಿ ಮೇಲಿನ 1 ಶೇಕಡಾದವರ ಪಾಲು 2000ದಲ್ಲಿ 36.8 ಶೇ. ಇದ್ದದ್ದು 2014ರಲ್ಲಿ 49ಶೇ.ದ ಅಗಾಧ ಪ್ರಮಾಣಕ್ಕೆ ಏರಿದೆ.
( ಕ್ರೆಡಿಟ್ ಸ್ಯುಸ್ಸೆ, ಗ್ಲೋಬಲ್ ವಾಚ್ ರಿಪೋರ್ಟ್)

2,21 ಈ ಹೊಲಸು ಸಂಪತ್ತಿಗೆ ವಿರುದ್ಧವಾಗಿ, ಭಾರತದಲ್ಲಿ 80ಶೇ.ಕ್ಕೂ ಹೆಚ್ಚು ಗ್ರಾಮೀಣ ಕುಟುಂಬಗಳ ತಲಾ ಬಳಕೆ ಖರ್ಚು 2011–12ರಲ್ಲಿ ರೂ.50ಕ್ಕಿಂತಲೂ ಕಡಿಮೆ. ನಗರಪ್ರದೇಶದಲ್ಲಿ 45ಶೇ.ದಷ್ಟು ಕುಟುಂಬಗಳ ಮಟ್ಟಿಗೂ ಇದು ನಿಜವಾಗಿತ್ತು. ತಲಾ ಆಹಾರಧಾನ್ಯ ಲಭ್ಯತೆ 2012 ರಲ್ಲಿ ವರ್ಷಕ್ಕೆ 164 ಕೆ.ಜಿ. ಇದು 1991ರ ಸಂಖ್ಯೆಗಿಂತ ಕಡಿಮೆ, ಆಗ ವರ್ಷಕ್ಕೆ ತಲಾ ಲಭ್ಯತೆ 186 ಕೆ.ಜಿ.ಇತ್ತು.

2,22 ದೊಡ್ಡ ಬಂಡವಾಳಶಾಹಿಗಳ ಸಂಪತ್ತು ಮತ್ತು ಲಾಭಗಳು ಅರಳುತ್ತಿರುವುದು ಶ್ರಮದ ತೀವ್ರಗೊಂಡ ಶೋಷಣೆಯ ಒಂದು ಫಲಿತಾಂಶ. ಕಾರ್ಖಾನೆ ವಲಯದಲ್ಲಿ 2011–12ರಲ್ಲಿ ನಿವ್ವಳ ಮೌಲ್ಯ ಸೇರಿಕೆಯಲ್ಲಿ ಸಂಬಳದ ಪಾಲು 11.9ಶೇ. ಇದು 1990–91ರಲ್ಲಿ 25.6ಶೇ. ಇತ್ತು ಎಂಬುದರೊಂದಿಗೆ ಹೋಲಿಸಿ ನೋಡಬಹುದು.

2.23 ಕಾರ್ಪೊರೇಟ್ ವಲಯ ಮತ್ತು ಶ್ರೀಮಂತರು ಪ್ರಭುತ್ವದ ಧಾರಾಳತೆಯ ಫಲಾನುಭವಿಗಳೂ ಆಗಿದ್ದಾರೆ. 2008–09 ಮತ್ತು 2012–13ರ ನಡುವೆ ನಾಲ್ಕು ವರ್ಷಗಳ ಅವಧಿಯಲ್ಲಿ ಬಿಟ್ಟುಕೊಟ್ಟ ತೆರಿಗೆ ಆದಾಯದ ಮೊತ್ತ ರೂ.23.84ಲಕ್ಷ ಕೋಟಿಗಳು.

## ಕಾರ್ಮಿಕರ ಪರಿಸ್ಥಿತಿಗಳು

2.24 ಶೋಷಣೆಯನ್ನು ತೀವ್ರಗೊಳಿಸಲು ಅನುಕೂಲವಾಗುವಂತೆ ಕಾರ್ಮಿಕರ ಕೆಲಸದ ಸ್ವರೂಪದಲ್ಲಿ ಬದಲಾವಣೆಗಳು ನವ–ಉದಾರವಾದಿ ಆಳ್ವಿಕೆಯ ಒಂದು ಲಕ್ಷಣ. ಸಂಘಟಿತ ಕಾರ್ಖಾನೆ ವಲಯದಲ್ಲಿ ಒಬ್ಬ ಕಾರ್ಮಿಕನ ಸರಾಸರಿ ನಿಜ ಕೂಲಿ ಇಳಿಮುಖಗೊಂಡಿದೆ. 1990–91ರಲ್ಲಿ ಇದು 108.41ರೂ. ಇತ್ತು, 2010–11ರಲ್ಲಿ ಅದು 103.76ರೂ.ಗೆ ಇಳಿಯಿತು. ಶ್ರಮದ ಶೋಷಣೆಯನ್ನು ತೀವ್ರಗೊಳಿಸಿರುವ ವಿಧಾನಗಳೆಂದರೆ ಕಾಂಟ್ರಾಕ್ಟೀಕರಣ, ಕ್ಯಾಶುವಲೀಕರಣ ಮತ್ತು ಕೆಲಸದ ಹೊರಗುತ್ತಿಗೆ. ಒಟ್ಟು ಸಂಘಟಿತ ಉದ್ಯೋಗದಲ್ಲಿ ಕಾಂಟ್ರಾಕ್ಟ್ ಕಾರ್ಮಿಕರ ಪಾಲು 1995–96ರಲ್ಲಿ 10.54ಶೇ. ಇದ್ದದ್ದು 2009–10ರಲ್ಲಿ 25.7ಶೇ.ಕ್ಕೆ ಹೆಚ್ಚಿತು. ಕಂಪನಿಗಳಿಂದ ಹೊರಗುತ್ತಿಗೆ ಪಡೆಯುವ ಮನೆ–ಆಧಾರಿತ ಕಾರ್ಮಿಕರು, ಪ್ರಮುಖವಾಗಿ ಮಹಿಳೆಯರು, ಪೀಸ್–ರೇಟ್ ಕೂಲಿಯಾಗಿ ಪಡೆಯುವುದು ಹಿಡಿಕೂಳಿನಷ್ಟೇ. ಸರಕಾರದ ವಿವಿಧ 'ಸ್ಕೀಮು'ಗಳಲ್ಲಿ ಕೆಲಸ ಮಾಡುವ ಸ್ಕೀಮು ಕಾರ್ಮಿಕರಿಗೆ ಒಂದು ನಾಮಮಾತ್ರದ ಗೌರವಧನ ಕೊಡಲಾಗುತ್ತದೆ ಮತ್ತು ಎಲ್ಲ ಕಾನೂನಾತ್ಮಕ

ಸೌಲಭ್ಯಗಳನ್ನು ನಿರಾಕರಿಸಲಾಗುತ್ತದೆ. ಅಸಂಘಟಿತ ವಲಯದ ಒಂದು ದೊಡ್ಡ ವಿಭಾಗ ವಲಸೆ ಕಾರ್ಮಿಕರದ್ದು, ಅವರ ಸ್ಥಿತಿ ದಿನಗೂಲಿ ಶ್ರಮವನ್ನು ಆಧರಿಸಿದ ಮತ್ತು ಸಾಮಾಜಿಕ ಭದ್ರತೆಯಿಲ್ಲದ ಶೋಚನೀಯ ದುಡಿಮೆಯ ಪರಿಸ್ಥಿತಿಗಳಿಂದಾಗಿ ಇನ್ನೂ ಕೆಟ್ಟದಾಗಿದೆ.

## ಭ್ರಷ್ಟಾಚಾರ ಮತ್ತು ಕಪ್ಪು ಹಣ

2.25 ಯುಪಿಎ–2 ಸರಕಾರದ ಅಧಿಕಾರಾವಧಿಯಲ್ಲಿ ಬಯಲಾದ ಭ್ರಷ್ಟಾಚಾರದ ಹಗರಣಗಳ ಮಹಾಪೂರ ನಿಜಕ್ಕೂ ಅಭೂತಪೂರ್ವ. ಅದು ನವ–ಉದಾರವಾದಿ ಆಳ್ವಿಕೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಲೂಟಿಗೆ ಅನುಕೂಲ ಮಾಡಿಕೊಡಲು ಹೇಗೆ ಭ್ರಷ್ಟಾಚಾರವನ್ನು ಉಪಯೋಗಿಸಲಾಯಿತು ಎಂಬುದನ್ನು ತೋರಿಸುತ್ತದೆ. ಈ ಮೊದಲು 2ಜಿ ತರಂಗಾಂತರ ಹಗರಣ ದೊಡ್ಡ ವ್ಯಾಪಾರಸ್ಥರು–ರಾಜಕಾರಣಿಗಳು–ಅಧಿಕಾರಶಾಹಿಗಳ ದುಷ್ಟಕೂಟವನ್ನು ಬಯಲಿಗೆಳೆದಿತ್ತು. ನಂತರ 2012ರಲ್ಲಿ ಸಿಎಜಿ ವರದಿ ಕಲ್ಲಿದ್ದಲು ಬ್ಲಾಕುಗಳ ಹಂಚಿಕೆ ಹೇಗೆ ಖಾಸಗಿ ಕಂಪನಿಗಳು 1.86ಲಕ್ಷ ಕೋಟಿ ರೂ.ಗಳಷ್ಟು ತಮ್ಮ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳುವತ್ತ ಒಯ್ದಿತು ಎಂಬುದನ್ನು ತೋರಿಸಿತು. ಅದನ್ನು ಹಿಂಬಾಲಿಸಿ ಆಗಸ್ಟ–ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ವ್ಯವಹಾರ ಮತ್ತು ರೈಲು ಇಲಾಖೆಯಲ್ಲಿ ಲಂಚದ ಪ್ರಕರಣ ಬಂದವು. ರಾಜ್ಯಗಳಲ್ಲಿ ಪಶ್ಚಿಮ ಬಂಗಾಲದ ಸಾರಧಾ ಚಿಟ್‌ಫಂಡ್ ಕೇಸ್, ಒಡಿಶಾದಲ್ಲಿ ಚಿಟ್ ಫಂಡ್ ಹಗರಣಗಳು ಮತ್ತು ಕೇರಳದಲ್ಲಿ ಸೋಲಾರ್ ಪ್ಯಾನಲ್‌ಗಳ ಹಗರಣ.ದಂತಹ ಹಗರಣಗಳ ಮಹಾಪೂರ ಬಂತು.

2.26 ಕಾರ್ಪೊರೇಟ್ ಮಾಧ್ಯಮಗಳು ಮತ್ತು ಜನತೆಯಲ್ಲಿನ ಗ್ರಹಿಕೆಯ ಪ್ರಕಾರ ಇಂತಹ ಭ್ರಷ್ಟಾಚಾರವನ್ನು ನಡೆಸುವವರು ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳು, ಭ್ರಷ್ಟಾಚಾರದ ಮೂಲವನ್ನು ಅಂದರೆ ನವ–ಉದಾರವಾದಿ ಆಳ್ವಿಕೆಯತ್ತ ಬೊಟ್ಟು ಮಾಡುವುದಿಲ್ಲ. ಇದರಿಂದಾಗಿಯೇ ದೊಡ್ಡ ವ್ಯಾಪಾರೀ ಮನೆತನಗಳಿಗೆ ಭ್ರಷ್ಟ ನಡವಳಿಕೆಯಲ್ಲಿ ತೊಡಗಲು ಅನುವು ದೊರೆತಿದೆ. 2013ರಲ್ಲಿ ಸಂಸತ್ತು ಪಾಸು ಮಾಡಿದ ಲೋಕಪಾಲ ಕಾನೂನು ಭ್ರಷ್ಟಾಚಾರ ತಡೆ ಕಾನೂನಿನಲ್ಲಿ ನಿರೂಪಿಸಿದ ಭ್ರಷ್ಟಾಚಾರದ ಪ್ರಕರಣಗಳನ್ನು ಪರೀಕ್ಷಿಸಲು ಒಂದು ಸಂಸ್ಥೆಯನ್ನು ರಚಿಸಿತು. ಆದರೆ ಸಿಪಿಐ(ಎಂ) ಮತ್ತು ಎಡಪಂಥೀಯರಿಗೆ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಅನಿವಾರ್ಯವಾಗಿಯೇ ನವ–ಉದಾರವಾದಿ ಆಳ್ವಿಕೆಯನ್ನು ಮತ್ತು ಭ್ರಷ್ಟಕೂಟವನ್ನು ಕಳಚಿ ಹಾಕುವುದು ಒಳಗೊಂಡಿದೆ.

2.27 ಸ್ವಾತಂತ್ರ್ಯದ ನಂತರ ಕಾನೂನುಬಾಹಿರ ಹೊರಹರಿವಿನಿಂದ ದೇಶಕ್ಕೆ 20.92ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂದು ಸರಕಾರವೇ ಒಪ್ಪಿಕೊಂಡಿದೆ. ಇದರಲ್ಲಿ 11.28 ಕೋಟಿ ರೂ.ಗಳ ನಷ್ಟವಾದದ್ದು 2008 ಮತ್ತು 2010ರ ನಡುವೆ. ಆದರೆ

ಯುಪಿಎ ಸರಕಾರ ವಿದೇಶಗಳಲ್ಲಿ ಪೇರಿಸಿಟ್ಟ ಕಾನೂನುಬಾಹಿರ ಹಣವನ್ನು ವಾಪಾಸು ತರಲು ಏನೂ ಮಾಡಲಿಲ್ಲ. ಅಧಿಕಾರ ವಹಿಸಿಕೊಂಡ ನೂರು ದಿನಗಳೊಳಗೆ ಕಪ್ಪು ಹಣವನ್ನು ವಾಪಾಸು ತರುವ ವಚನ ನೀಡಿದ ಮೋದಿ ಸರಕಾರವೂ ಅದೇ ದಾರಿಯನ್ನು ಅನುಸರಿಸುತ್ತಿದೆ. ಬಿಜೆಪಿಯಾಗಲೀ ಕಾಂಗ್ರೆಸ್ ಆಗಲೀ ದೇಶದೊಳಗೆ ಕಪ್ಪು ಹಣದ ಉತ್ಪಾದನೆಯನ್ನು ನಿಲ್ಲಿಸಲು ಮತ್ತು ಕಾನೂನುಬಾಹಿರ ಹಣವನ್ನು ಹೊರತೆಗೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾತಾಡುವುದಿಲ್ಲ.

## ಹಿಂದುತ್ವ ಯೋಜನೆ: ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ಬೆದರಿಕೆ

2.28 ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯ ವಿಜಯದ ಪೂರ್ವಭಾವಿಯಾಗಿ ಆರೆಸ್ಸೆಸ್ ಮತ್ತು ಅದರ ಮುಖಸಂಘಟನೆಗಳು ಒಂದು ಕೋಮುವಾದಿ ಅಜೆಂಡಾದ ಮೇಲೆ ಒಂದು ವ್ಯವಸ್ಥಿತ ಪ್ರಚಾರ ನಡೆಸಿದವು. ಗೋಹತ್ಯೆ, ಮುಸ್ಲಿಂ ಯುವಕರು ಹಿಂದೂ ಹೆಣ್ಣುಮಕ್ಕಳನ್ನು ಸೆಳೆಯುತ್ತಾರೆಂಬ ಆಪಾದನೆ, ಬಾಂಗ್ಲಾದೇಶಿ ನುಸುಳಿಕೆ ಮತ್ತು ಮುಸ್ಲಿಮರನ್ನು ವೋಟ್ ಬ್ಯಾಂಕಾಗಿ ಬಳಸಲು ತುಷ್ಟೀಕರಿಸಲಾಗುತ್ತಿದೆ ಎಂಬ ಸಾಮಾನ್ಯ ಅಪಪ್ರಚಾರವನ್ನು ಕೋಮು ಉದ್ವಿಗ್ನತೆಗಳನ್ನು ಸೃಷ್ಟಿಸಲು ಮತ್ತು ಕೋಮು ಧ್ರುವೀಕರಣವನ್ನು ಉದ್ರೇಕಿಸಲು ಉಪಯೋಗಿಸಲಾಯಿತು. 2013ರಲ್ಲಿ ಕೋಮು ಘಟನೆಗಳಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂತು. ಇದರಲ್ಲಿ ಬಹುಪಾಲು ನಡೆದದ್ದು ಉತ್ತರ ಪ್ರದೇಶದಲ್ಲಿ. ಸಪ್ಟಂಬರ್ 2013ರಲ್ಲಿ ಮುಝಫ್ಫರ್‌ನಗರದಲ್ಲಿ ಹಿಂಸಾಚಾರ ಪಶ್ಚಿಮ ಉತ್ತರ ಪ್ರದೇಶದಲ್ಲಿ ಕೋಮುವಾದಿ ಧ್ರುವೀಕರಣವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಯಿತು. ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲೂ ಕೋಮುವಾದಿ ಘಟನೆಗಳು ಕಾಣ ಬಂದವು. ಚುನಾವಣೆಗಳ ಫಲಿತಾಂಶಗಳ ನಂತರ ಮತ್ತು ಮೋದಿ ಸರಕಾರದ ಆಗಮನದೊಂದಿಗೆ ಇಂತಹ ಘಟನೆಗಳು ವಿವಿಧ ರಾಜ್ಯಗಳಲ್ಲಿ ನಡೆಯುತ್ತಲೇ ಇವೆ, ಇವುಗಳ ಗುರಿ ಅಲ್ಪಸಂಖ್ಯಾತರು ಬಿಜೆಪಿ ಆಳ್ವಿಕೆಯಲ್ಲಿ ಅಡಿಯಾಳು ಸ್ಥಾನದಲ್ಲಿಯೇ ಬದುಕಬೇಕು ಎಂಬ ಸಂಕೇತವನ್ನು ಕಳಿಸುವುದು.

2.29 ಬಿಜೆಪಿ ಸರಕಾರದಲ್ಲಿ ಇದ್ದು ಆರೆಸ್ಸೆಸ್ ಆಟದ ಯೋಜನೆಯನ್ನು ಜಾರಿಗೆ ತರುವುದರೊಂದಿಗೆ ಸನ್ನಿವೇಶದಲ್ಲಿ ಗುಣಾತ್ಮಕ ಬದಲಾವಣೆ ಬಂದಿದೆ. ಆರೆಸ್ಸೆಸ್ ಮತ್ತು ಪ್ರಮುಖ ಇಲಾಖೆಗಳ ಮಂತ್ರಿಗಳ ನಡುವೆ ನಿಕಟ ಸಂಯೋಜನೆ ಇದೆ. ಇದಕ್ಕೆ ಸೌಕರ್ಯ ಕಲ್ಪಿಸಲು ಆರೆಸ್ಸೆಸ್ ಆರು ಗುಂಪುಗಳನ್ನು ರಚಿಸಿದೆ. ಶೈಕ್ಷಣಿಕ ವ್ಯವಸ್ಥೆ ಅವರ ಒಂದು ಪ್ರಧಾನ ಗುರಿ. ಕೋಮುವಾದಿ ಅಂಶಗಳನ್ನು ಸೇರಿಸಲು ಪಠ್ಯಕ್ರಮದ ಮತ್ತು ಪಠ್ಯಪುಸ್ತಕಗಳ ಬದಲಾವಣೆಯೊಂದಿಗೆ ಹೊಸ ಶಿಕ್ಷಣ ನೀತಿ ಬರುತ್ತಲಿದೆ. ಚರಿತ್ರೆಯ ಪುನರ್ಲೇಖನವಾಗಬೇಕಾಗಿದೆ ಮತ್ತು ಸಂಸ್ಕೃತವನ್ನು ಉಳಿದ ಭಾರತೀಯ ಭಾಷೆಗಳನ್ನು ಬಲಿಗೊಟ್ಟು ಮುಂದೊತ್ತಬೇಕಾಗಿದೆ. ಈ ಕೆಲಸವನ್ನು ಕೈಗೊಳ್ಳಲು ಧೋರಣೆಗಳನ್ನು ರೂಪಿಸುವ ಉನ್ನತ ಶಿಕ್ಷಣ ಮತ್ತು

ಸಂಶೋಧನೆಯ ಸಂಸ್ಥೆಗಳ ಮುಖ್ಯಸ್ಥರನ್ನು ನೇಮಿಸಲಾಗುತ್ತಿದೆ. ಪ್ರಧಾನ ಮಂತ್ರಿಯಿಂದ ಆರಂಭಿಸಿ ಕೆಳಗಿನ ವರೆಗೂ ಕಂದಾಚಾರದ ಮೌಲ್ಯಗಳನ್ನು ಪ್ರತಿಪಾದಿಸಲಾಗುತ್ತಿದೆ ಮತ್ತು ವೈಜ್ಞಾನಿಕ ಮನೋಭಾವವನ್ನು ಬುಡಮೇಲು ಮಾಡಲಾಗುತ್ತಿದೆ.

2.30 ಈಗ ಅನಾವರಣಗೊಳ್ಳುತ್ತಿರುವುದು ಗಣತಂತ್ರದ ಜಾತ್ಯಾತೀತ–ಪ್ರಜಾಸತ್ತಾತ್ಮಕ ಆಧಾರಕ್ಕೆ ಬೆದರಿಕೆ ಒಡ್ಡಿರುವ ಛಿದ್ರಕಾರಿ ಹಿಂದುತ್ವ ಯೋಜನೆಯನ್ನು ಮುಂದೊತ್ತುವ ಒಂದು ಬಹುಶೂಲಗಳ ಪ್ರಯತ್ನ. ಹಿಂದುತ್ವ ವಿಚಾರವನ್ನು ಒಪ್ಪದವರನ್ನು ಬೆದರಿಸುವ ಬಿಜೆಪಿ ಮುಖಂಡರ ಮತ್ತು ಸಂಸತ್ ಸದಸ್ಯರ ಹೇಳಿಕೆಗಳು; ನಾಥುರಾಂ ಗೋಡ್ಸೆಯ ವೈಭವೀಕರಣ; ಹಿಂದುಧರ್ಮದೊಳಕ್ಕೆ ಮುಸ್ಲಿಮರು ಮತ್ತು ಕ್ರೈಸ್ತರ "ಮರುಮತಾಂತರ"; ಅಯೋಧ್ಯೆಯಲ್ಲಿ ರಾಮದೇವಸ್ಥಾನ ಕಟ್ಟಬೇಕೆಂಬ ಬೇಡಿಕೆ– ಇವೆಲ್ಲ ಆರೆಸ್ಸೆಸ್ ಪ್ರೇರಿತ ಯೋಜನೆಯ ಭಾಗ. ಹಿಂದುತ್ವ ಈಗಿರುವ ಜಾತಿ ರಚನೆಗಳನ್ನು ಹಿಂದು ಸಂಪ್ರದಾಯದ ಹೆಸರಿನಲ್ಲಿ ಬಲಪಡಿಸುತ್ತದೆ. ಅದು ಮಹಿಳೆಯರನ್ನು ಸಮುದಾಯದ ಮತ್ತು ಕುಟುಂಬದ "ಮರ್ಯಾದೆ"ಯ ಭಂಡಾರ ಎಂದು ಬಗೆದು ಅವರು ತಥಾಕಥಿತ ಸಂಪ್ರದಾಯವನ್ನು ಎತ್ತಿ ಹಿಡಿಯಲು ಅಡಿಯಾಳು ಸ್ಥಾನಮಾನಕ್ಕೆ ಹೊಂದಿಕೊಳ್ಳಬೇಕು ಎಂದು ನಿರೀಕ್ಷಿಸುವ ಪ್ರತಿಗಾಮಿ ಪಿತೃಪ್ರಾಧಾನ್ಯ ಭಾವನೆಗಳನ್ನು ಕೂಡ ಪ್ರತಿಪಾದಿಸುತ್ತದೆ; ಇದರಲ್ಲಿ ಇತ್ತೀಚಿನ ದಾಳಿ ಎಂದರೆ ಹಿಂದು ಮಹಿಳೆಯರು ಹೆಚ್ಚು ಮಕ್ಕಳನ್ನು ಹೆರಬೇಕು ಎನ್ನುವ ಆದೇಶ.

2.31 ಸರಕಾರದ ಕೃಪಾಪೋಷಣೆಯೊಂದಿಗೆ , ಕ್ಷೇತ್ರದಲ್ಲಿರುವ ಆರೆಸ್ಸೆಸ್ ಸಂಘಟನೆಗಳ ಜಾಲಕ್ಕೆ ಪ್ರಭುತ್ವದ ಬೆಂಬಲ ಮತ್ತು ಹಣವನ್ನು ಒದಗಿಸಲಾಗುವುದು. ಆರೆಸ್ಸೆಸ್ ಸಂಘಟನೆಗಳು ವಿಶೇಷವಾಗಿ ದಲಿತ ಮತ್ತು ಆದಿವಾಸಿ ಸಮುದಾಯಗಳನ್ನು ವಿರಾಟ್–ಹಿಂದುತ್ವ ಸಿದ್ಧಾಂತ ಮತ್ತು ವ್ಯವಸ್ಥೆಯೊಳಕ್ಕೆ ಆಯ್ದುಕೊಳ್ಳುವುದರ ಮೇಲೆ ಗಮನ ಕೇಂದ್ರೀಕರಿಸುತ್ತಿವೆ.

## ಕೋಮುವಾದದ ವಿರುದ್ಧ ಹೋರಾಟದ ವಿಧಾನ

2.32 ಹಿಂದುತ್ವ ಶಕ್ತಿಗಳು ಮತ್ತು ಇತರ ಕೋಮುವಾದದ ರೂಪಗಳ ವಿರುದ್ಧ ಹೋರಾಟವನ್ನು ನವ–ಉದಾರವಾದಿ ನೀತಿಗಳು ಮತ್ತು ದುಡಿಯುವ ಜನರ ಮೇಲೆ ಅದರ ಪರಿಣಾಮಗಳ ವಿರುದ್ಧ ಹೋರಾಟದ ಜತೆ ಮೇಳೈಸಬೇಕು. ಮೋದಿ ಸರಕಾರ ಮತ್ತು ಬಿಜೆಪಿ ರಾಜ್ಯ ಸರಕಾರಗಳು ಅವರ ಮೇಲೆ ಹೊರಿಸಿರುವ ಹೊರೆಗಳ ವಿರುದ್ಧ ಮತ್ತು ಅವರ ಜೀವನೋಪಾಯಗಳ ರಕ್ಷಣೆಗೆ ಅಣಿ ನೆರೆಸಿದಾಗ, ಆರೆಸ್ಸೆಸ್ ನಾಯಕತ್ವದ ಕೋಮುವಾದಿ ಶಕ್ತಿಗಳ ವಿರುದ್ಧ ಪ್ರಚಾರಾಂದೋಲನ ಸಾಮೂಹಿಕ ಒಲವು ಪಡೆಯುತ್ತದೆ.

2.33 ಹಿಂದುತ್ವ ಶಕ್ತಿಗಳ ತೀವ್ರ ಹಲ್ಲೆ ಮತ್ತು ಅಲ್ಪ ಸಂಖ್ಯಾತರ ಮೇಲೆ ಅವರ ದಾಳಿಗಳು, ಅಲ್ಪ ಸಂಖ್ಯಾತ ಸಮುದಾಯದಲ್ಲಿ ಉಗ್ರವಾದಿ ಶಕ್ತಿಗಳ ಉದಯಕ್ಕೆ ಬೇಕಾದ ಪರಿಸ್ಥಿತಿಯನ್ನು ಉಂಟು ಮಾಡುತ್ತವೆ. ಅಲ್ಪಸಂಖ್ಯಾತ ಕೋಮುವಾದ ಪುನಃ ಬಹುಸಂಖ್ಯಾತ ಕೋಮುವಾದವನ್ನು ಬಲಪಡಿಸುತ್ತದೆ. ಆದ್ದರಿಂದ ಅಲ್ಪಸಂಖ್ಯಾತ ಕೋಮುವಾದದ ವಿರುದ್ಧ ಸೆಣಸಲು ಗಮನ ಕೊಡಬೇಕಾಗುತ್ತದೆ.

2.34 ಕೋಮುವಾದ ಒಡ್ಡುವ ಅಪಾಯದ ಹಿನ್ನೆಲೆಯಲ್ಲಿ, ನಾವು ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಅತ್ಯಂತ ವ್ಯಾಪಕ ಅಣಿ ನೆರೆಸುವಿಕೆಗೆ ಶ್ರಮಿಸಬೇಕು. ಕೋಮುವಾದದ ವಿರುದ್ಧ ವ್ಯಾಪಕ ಐಕ್ಯ ಚಳುವಳಿಗಳಿಗೆ ಜಂಟಿ ವೇದಿಕೆಗಳು ಅಗತ್ಯ.

2.35 ಆರೆಸ್ಸೆಸ್–ಬಿಜೆಪಿ ಕೂಟದ ವಿರುದ್ಧ ಹೋರಾಟದ ತಂತ್ರಗಳಿಗೆ ರಾಜಕೀಯ ವಲಯದಲ್ಲಿ ಮಾತ್ರವಲ್ಲ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲೂ ನಿರ್ದಿಷ್ಟ ರೂಪ ಕೊಡಬೇಕು. ಈ ಕ್ಷೇತ್ರಗಳಲ್ಲಿ ಕೋಮುವಾದಿ ಸಿದ್ಧಾಂತ ಮತ್ತು ಮೌಲ್ಯಗಳನ್ನು ಒಯ್ಯಲಾಗುತ್ತದೆ ಮತ್ತು ಅವು ಪ್ರಭಾವ ಪಡೆಯುತ್ತವೆ. ರಾಜಕೀಯ ಹೋರಾಟದ ಜತೆ, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಕೆಳಗಿನವನ್ನು ಕೈಗೆತ್ತಿಕೊಳ್ಳಬೇಕು:

1. ಹಿಂದುತ್ವ ಮತ್ತು ಇತರ ಕೋಮುವಾದದ ರೂಪಗಳ ಪ್ರತಿಗಾಮಿ ಹಾಗೂ ಒಡಕುಂಟು ಮಾಡುವ ಸ್ವರೂಪವನ್ನು ಬಯಲು ಮಾಡುವ ಪ್ರಚಾರಾಂದೋಲನದಲ್ಲಿ ಜನಪ್ರಿಯ ಶೈಲಿಯ ಸೈದ್ಧಾಂತಿಕ ಮತ್ತು ರಾಜಕೀಯ ವಿಷಯಗಳನ್ನು ಬಳಸಬೇಕು. ಪಕ್ಷ ನಡೆಸುವ ಬೌದ್ಧಿಕ ಸಂಪನ್ಮೂಲಗಳು ಮತ್ತು ಸಂಶೋದನಾ ಕೇಂದ್ರಗಳನ್ನು ಇದಕ್ಕಾಗಿ ತೊಡಗಿಸಿ ಕೋಮುವಾದಿ ಶಕ್ತಿಗಳ ವಿರುದ್ಧ ಸೈದ್ಧಾಂತಿಕ ಸೆಣಸಾಟಕ್ಕೆ ಬುದ್ಧಿಜೀವಿಗಳು, ಇತಿಹಾಸಕಾರರು ಮತ್ತು ಸಾಂಸ್ಕೃತಿಕ ವ್ಯಕ್ತಿಗಳನ್ನು ಅಣಿ ನೆರೆಸಬೇಕು.
2. ಶಾಲಾ ಮತ್ತು ಶಾಲಾ–ಪೂರ್ವ ಹಂತಗಳಲ್ಲಿ ಶಿಕ್ಷಕರು ಮತ್ತು ಸಾಮಾಜಿಕ ಸಂಘಟನೆಗಳ ನೆರವಿನೊಂದಿಗೆ ಶೈಕ್ಷಣಿಕ ಕ್ಷೇತ್ರದ ಕೆಲಸ ಆರಂಭಿಸಬೇಕು.
3. ಕಾರ್ಮಿಕ ವರ್ಗದಲ್ಲಿ ಮತ್ತು ಕಾರ್ಮಿಕ ವರ್ಗ ವಾಸಿಸುವ ಪ್ರದೇಶಗಳಲ್ಲಿ ಜಾತ್ಯತೀತ ಮತ್ತು ವೈಜ್ಞಾನಿಕ ಮನೋಭಾವ ಹರಡಲು ಪಕ್ಷ ಮತ್ತು ಟ್ರೇಡ್ ಯೂನಿಯನುಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸಲು ವಿಶೇಷ ಗಮನ ನೀಡಬೇಕು.
4. ಕೋಮುವಾದಿ ಶಕ್ತಿಗಳು ಬಿತ್ತುವ ಹಾನಿಕಾರಕ, ಜಾತಿವಾದಿ ಮತ್ತು ಅಂಧಶ್ರದ್ಧಾಳು ಮೌಲ್ಯಗಳ ವಿರುದ್ಧ ಸೆಣಸಲು ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಬೆಳೆಸಬೇಕು. ಜನಪ್ರಿಯ ವಿಜ್ಞಾನ ಚಳುವಳಿಯನ್ನು ಈ ಉದ್ದೇಶಕ್ಕಾಗಿ ಸಜ್ಜುಗೊಳಿಸಬೇಕು

5. ಆದಿವಾಸಿ ಪ್ರದೇಶಗಳಲ್ಲಿ ಮತ್ತು ದಲಿತರಲ್ಲಿ ಸಂಘಟನಾ ಕೆಲಸ ಬೆಳೆಸಿ ಆರೆಸ್ಸೆಸ್ ಸಂಘಟನೆಗಳ ಬಹುಮುಖಿ ಚಟುವಟಿಕೆಗಳಿಗೆ ತಡೆಯೊಡ್ಡಬೇಕು

## ಅಲ್ಪಸಂಖ್ಯಾತ ಹಕ್ಕುಗಳ ರಕ್ಷಣೆ

2.36 ಹಿಂದುತ್ವದ ಆಕ್ರಾಮಕತೆ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯ ಮೇಲೆ ವಿಶೇಷವಾಗಿ ಗುರಿ ಇಡುತ್ತದೆ. ಪುನರ್ಮತಾಂತರ ಮತ್ತು ತಥಾಕಥಿತ 'ಲವ್–ಜಿಹಾದ್' ಪ್ರಚಾರ ಅಲ್ಪಸಂಖ್ಯಾತರಲ್ಲಿ ಅಭದ್ರತೆ ಮತ್ತು ಭಯ ಉಂಟು ಮಾಡುತ್ತದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ಮುಸ್ಲಿಂ ಸಮುದಾಯದ ಸಾಮಾಜಿಕ–ಆರ್ಥಿಕ ದುಸ್ಥಿತಿಯ ಮತ್ತು ಸಾಚಾರ್ ಸಮಿತಿಯ ಶಿಫಾರಸುಗಳ ನೈಜ ಪ್ರಶ್ನೆಯನ್ನು ಅಜೆಂಡಾದಿಂದ ಆಚೆಗೆ ತಳ್ಳಲಾಗಿದೆ. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ ಮತ್ತು ಆರ್ಥಿಕ ಮುನ್ನಡೆಗೆ ವಿಶೇಷ ಕ್ರಮಗಳ ಅಗತ್ಯ ಇದೆ ಎನ್ನುವ ಹಕ್ಕೊತ್ತಾಯ ನಿರ್ಣಾಯಕ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

## ಜಮ್ಮು ಮತ್ತು ಕಾಶ್ಮೀರ

2.37 ಯುಪಿಎ ಸರಕಾರ ತನ್ನ ಎರಡನೇ ಅವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಪ್ರಶ್ನೆಗೆ ಯಾವುದೇ ಅರ್ಥಪೂರ್ಣ ವಿಧಾನದಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಯಾವುದೇ ಅತ್ಯಗತ್ಯ ವಿಷಯಗಳ ಬಗ್ಗೆ ಯಾವುದೇ ರಾಜಕೀಯ ಸಂವಾದ ನಡೆಯಲಿಲ್ಲ. ಬದಲಾಗಿ ಕೋಮುವಾದಿ ಕಂದರ ಇನ್ನೂ ಗಂಭೀರವಾಗುತ್ತಿದೆ. ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದ ನಂತರ ಮತ್ತು ರಾಜ್ಯದಲ್ಲಿ ಅದು ಅಧಿಕಾರಕ್ಕೆ ಬರುವ ಸಾಧ್ಯತೆ ಅದು ಇನ್ನಷ್ಟು ಗಂಭಿರವಾಗುತ್ತಿದೆ. ಸಿಪಿಐ(ಎಂ) ರಾಜ್ಯಕ್ಕೆ ಗರಿಷ್ಟ ಸ್ವಾಯತ್ತತೆ ಮತ್ತು ಮೂರು ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ಕೊಡುವುದರ ಮೇಲೆ ಆಧಾರಿತ ರಾಜಕೀಯ ಪರಿಹಾರ ಆಗಬೇಕು ಎನ್ನುವ ಸಿಪಿಐ(ಎಂ) ಮೂಲ ನಿಲುವನ್ನು ಪುನರುಚ್ಚರಿಸ ಬಯಸುತ್ತದೆ.

## ವಿದೇಶ ನೀತಿ

2.38 1990ರ ದಶಕದ ಉದಾರೀಕರಣದ ಆಗಮನದ ನಂತರ ಅಮೆರಿಕ–ಪರ ವಿದೇಶ ನೀತಿಯತ್ತ ಒಲವು ಆರಂಭವಾಯಿತು. ವಾಜಪೇಯಿ ಸರಕಾರ ಅಮೆರಿಕದ ಜತೆ ಆರಂಭಿಸಿದ ವ್ಯೂಹಾತ್ಮಕ ಕೂಟವನ್ನು ಯುಪಿಎ ಸರಕಾರ ಮುಂದಕ್ಕೆ ಒಯ್ದಿತು. ಇದೇ ಹಾದಿಯಲ್ಲಿ ಮುನ್ನಡೆಯುವ ಮೋದಿ ಸರಕಾರದ ಬಯಕೆಯಂತೂ ಸ್ಪಷ್ಟವಿದೆ. ಸೆಪ್ಟೆಂಬರ್ 2014ರಲ್ಲಿ ಪ್ರಧಾನಿ ಮೋದಿ ವಾಶಿಂಗ್ಟನ್ ಭೇಟಿಯಲ್ಲಿ, ಇಂಡೋ–ಅಮೆರಿಕನ್ ರಕ್ಷಣಾ ಚೌಕಟ್ಟು ಒಪ್ಪಂದವನ್ನು ಇನ್ನೂ 10 ವರ್ಷಕ್ಕೆ (ಜನವರಿ 2015ರಿಂದ) ನವೀಕರಿಸಲಾಗಿದೆ. ಮೋದಿ ಸರಕಾರ ಜಪಾನ್ ಮತ್ತು

ಆಸ್ಟ್ರೇಲಿಯಾ ಜತೆ ವ್ಯೂಹಾತ್ಮಕ ಮತ್ತು ಮಿಲಿಟರಿ ಸಂಬಂಧಗಳನ್ನು ಬಲಪಡಿಸುತ್ತಿದೆ. ಆಸ್ಟ್ರೇಲಿಯಾ ಜತೆ ಭದ್ರತಾ ಸಹಕಾರ ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕಿದೆ. ಒಬಾಮ 2015ರ ಭೇಟಿಯ ಸಮಯದಲ್ಲಿ ಹೊರಡಿಸಿದ ಏಶ್ಯಾ–ಪೆಸಿಫಿಕ್ ಮತ್ತು ಭಾರತ ಮಹಾಸಾಗರ ಪ್ರದೇಶದ ಬಗ್ಗೆ 'ಜಂಟಿ ಕಣ್ಣೋಟ ಹೇಳಿಕೆ' ಮೊದಲ ಬಾರಿಗೆ ಭಾರತದ 'ಪೂರ್ವದತ್ತ ನೋಡೋಣ' ನೀತಿಯನ್ನು, ಚೀನಾವನ್ನು ಹತೋಟಿಯಲ್ಲಿಡುವ ಉದ್ದೇಶದ ಅಮೆರಿಕದ 'ಏಶ್ಯಾಕ್ಕೆ ಆಧಾರಗೂಟ' (ಪೈವೊಟ್ ಟು ಏಶ್ಯಾ) ನೀತಿ ಜತೆ ಸೇರಿಕೊಂಡಿದೆ. ಈ ನೀತಿಯ ಪರಿಣಾಮವೆಂದರೆ ಅಮೆರಿಕ, ಬಾರತ, ಜಪಾನ್, ಆಸ್ಟ್ರೆಲಿಯಾಗಳನ್ನು ಒಳಗೊಂಡ ಚತುಷ್ಕೋಣ ಭದ್ರತಾ ಕೂಟದ ಉಗಮ.

2.39 ಬಿಜೆಪಿ ಸರಕಾರ ಇಸ್ರೆಲ್ ಜತೆ ಭದ್ರತಾ ಮತ್ತು ವ್ಯೂಹಾತ್ಮಕ ಸಹಭಾಗಿತ್ವವನ್ನು ಬಲಪಡಿಸುತ್ತಿದೆ. ಅದು ಪಾಕಿಸ್ತಾನದ ಜತೆ ಕಳೆದ ವರ್ಷ ವಿದೇಶ ಕಾರ್ಯದರ್ಶಿ ಹಂತದ ಮಾತುಕತೆಗಳನ್ನು ರದ್ದು ಮಾಡಿ, ಘರ್ಷಣೆಯ ನಿಲುವು ಅಂಗೀಕರಿಸಿದೆ. ರಶ್ಯದ ಜತೆ ಸಂಬಂಧಗಳನ್ನು ಪೋಷಿಸಲಾಗುತ್ತಿದ್ದು, ಚೀನಾದ ಜತೆ ಸಂಬಂಧಗಳನ್ನು ಉತ್ತಮಪಡಿಸುವುದರಲ್ಲಿ ಮತ್ತು ಬಲಪಡಿಸುವುದರಲ್ಲಿ ಮೋದಿ ಸರಕಾರದ ಸೈದ್ಧಾಂತಿಕ ಒಲವು ಅಡ್ಡಿಯಾಗಬಾರದು.

2.40 ಅಮೆರಿಕದ ಜತೆಗೆ ವ್ಯೂಹಾತ್ಮಕ ಸಂಬಂಧಗಳ ವಿರುದ್ಧ ಮತ್ತು ದೇಶದ ಹಿತಾಸಕ್ತಿಗಳನ್ನು ಕಾಪಾಡಬಲ್ಲ ಸ್ವತಂತ್ರ ವಿದೇಶ ನೀತಿಯ ಪರ ವಾದಿಸುವ ಪ್ರಚಾರಾಂದೋಲನವನ್ನು ಪಕ್ಷ ಸತತವಾಗಿ ಮಾಡಬೇಕು.

## ಪ್ರಭುತ್ವ ಮತ್ತು ನವ–ಉದಾರವಾದಿ ಆಡಳಿತ

2.41 ಪ್ರಭುತ್ವ ಮತ್ತು ಅದರ ಸಂಸ್ಥೆಗಳು ನವ–ಉದಾರವಾದಿ ದೃಷ್ಟಿಕೋಣದ ಪ್ರಭಾವಕ್ಕೊಳಗಾಗುತ್ತಿವೆ ಮತ್ತು ಅದರಿಂದಾಗಿ ಅವಕ್ಕೆ ತುಕ್ಕು ಹಿಡಿಯುತ್ತಿವೆ. ಪ್ರಭುತ್ವ ಹೆಚ್ಚು ಹೆಚ್ಚಾಗಿ ಹಿರಿಯ ಬಂಡವಾಳಕ್ಕೆ ಪ್ರಾಕೃತಿಕ ಸಂಪನ್ಮೂಲ ಪೇರಿಸುವ ಮತ್ತು ಇನ್ನಷ್ಟು ಹೆಚ್ಚು ಬಂಡವಾಳ ಶೇಖರಿಸುವ ಸಾಧನವಾಗುತ್ತಿದೆ. ಪ್ರಭುತ್ವ ಮಾರುಕಟ್ಟೆ ಶಕ್ತಿಗಳನ್ನು ವಿರೋಧಿಸುತ್ತಿರುವ ಅಡೆತಡೆಗಳನ್ನು ತೆಗೆದುಹಾಕಿ ಅದರ ದಾರಿ ಸುಗಮಗೊಳಿಸುವ ಉಪಕರಣವಾಗಿ ಬಿಟ್ಟಿದೆ. ಅದೇ ಸಮಯದಲ್ಲಿ, ಜನತೆಯ ಕಲ್ಯಾಣ ಕ್ರಮಗಳನ್ನು ತೆಗೆದುಕೊಳ್ಳುವ ಪ್ರಭುತ್ವದ ಪಾತ್ರದ ಮೇಲೆ ದಾಳಿ ಮಾಡಲಾಗುತ್ತಿದೆ. ನವ–ಉದಾರವಾದದ ಪರಿಣಾಮವಾಗಿ ಉದ್ಯಮ ಮತ್ತು ರಾಜಕೀಯದ ನಡುವೆ ಸಂಬಂಧ ಇನ್ನಷ್ಟು ಘನಿಷ್ಟವಾಗುತ್ತಿದೆ. ದುಡ್ಡಿನ ದೊಡ್ಡಪ್ಪಗಳು ಚುನಾವಣಾ ವ್ಯವಸ್ಥೆಯನ್ನು ಆವರಿಸಿಬಿಟ್ಟಿದ್ದಾರೆ. ರಾಜಕಾರಣ ಮತ್ತು ಉದ್ಯಮ ಒಂದುಕ್ಕೊಂದು ಹೆಣೆದುಕೊಂಡಿದ್ದರ ಫಲವಾಗಿ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸವೆಯುತ್ತಿವೆ. ಇದರ ಫಲವಾಗಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಸೊರಗುತ್ತಿದೆ.

ಪಾರ್ಲಿಮೆಂಟು ಮತ್ತು ವಿಧಾನಸಭೆಗಳನ್ನು ನಿರ್ಲಕ್ಷಿಸಿ ಮೂಲ ಆರ್ಥಿಕ ನೀತಿಗಳನ್ನು ನಿರ್ಧರಿಸಲಾಗುತ್ತಿದೆ. ಮೋದಿ ಸರಕಾರ ಪ್ರಮುಖ ನೀತಿಯ ಕ್ರಮಗಳಿಗೆ ಹೆಚ್ಚು ಹೆಚ್ಚಾಗಿ ಸುಗ್ರೀವಾಜ್ಞೆಗಳನ್ನು ಅವಲಂಬಿಸುತ್ತಿದ್ದು, ಆ ಮೂಲಕ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಶಕ್ತಿಗುಂದಿಸುತ್ತಿದೆ.

2.42 ಕೇಂದ್ರದಿಂದ ಹಣಕಾಸು ವರ್ಗಾವಣೆ ಮೇಲೆ ಹಾಕಿರುವ ಮತ್ತು ವಿಶ್ವ ಬ್ಯಾಂಕಿನಿಂದ ಪಡೆದ ಸಾಲಗಳ ಶರತ್ತುಗಳಿಂದಾಗಿ ರಾಜ್ಯಗಳು ಖಾಸಗೀಕರಣ, ಬಳಕೆಯ ಬೆಲೆ ಹೇರುವುದು ಮತ್ತು ಕೃಷಿ ಮಾರುಕಟ್ಟೆಯ ಖಾಸಗೀಕರಣ ಮುಂತಾದ ನೀತಿಗಳನ್ನು ಪಾಲಿಸಬೇಕಾದ ಬಲವಂತಕ್ಕೆ ಒಳಗಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಬಿಜೆಪಿ ಆಡಳಿತದ ಅಡಿಯಲ್ಲಿ ಪ್ರಭುತ್ವದ ಸಂಸ್ಥೆಗಳನ್ನು ಕೋಮುವಾದೀಕರಿಸುವ ಪ್ರಯತ್ನಗಳು ನಡೆಯುತ್ತಿವೆ. ರಾಷ್ಟ್ರೀಯ ಭದ್ರತಾ ಪ್ರಭುತ್ವದ ಪರಿಕಲ್ಪನೆಯನ್ನು ಉತ್ತೇಜಿಸಲಾಗುತ್ತಿದೆ. ಇವೆಲ್ಲಾ ಸರ್ವಾಧಿಕಾರಿ ಆಡಳಿತದ ಸ್ಥಾಪನೆಯ ಮುನ್ನುಡಿಯಾಗಿದೆ.

## ಚುನಾವಣಾ ಸುಧಾರಣೆಗಳಿಗಾಗಿ ಹೋರಾಟ

2.43 ದುಡ್ಡಿನ ದೊಡ್ಡಪ್ಪಗಳಿಂದಾಗಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಸವೆತ ಮತ್ತು '(ಅಲ್ಪಮತದಿಂವಾದರೂ) ಅತಿ ಹೆಚ್ಚು ಮತ ಪಡೆದವ ಗೆದ್ದ' ಎಂಬ ಚುನಾವಣಾ ವ್ಯವಸ್ಥೆಯ ವಿಕೃತಿಗಳು ಮೂಲ ಚುನಾವಣಾ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಸಾರಿ ಹೇಳುತ್ತಿವೆ. ಆಂಶಿಕ ಪಟ್ಟಿಯ ಜತೆಗಿನ ಪ್ರಮಾಣಾತ್ಮಕ ಪ್ರಾತಿನಿಧ್ಯದ ಚುನಾವಣಾ ವ್ಯವಸ್ಥೆಯನ್ನು ಜಾರಿಗೆ ತರುವುದರ ಪರವಾಗಿ ಪಕ್ಷ ಪ್ರಚಾರಾಂದೋಲನ ನಡೆಸಬೇಕು. ಚುನಾವಣಾ ಪರಿಕರಗಳ ವೆಚ್ಚ ಸರಕಾರ ವಹಿಸುವ ಮತ್ತು ಕಾನೂನುಬಾಹಿರ ದುಡ್ಡನ್ನು ಚುನಾವಣೆಗೆ ಬಳಸುವುದನ್ನು ಹತ್ತಿಕ್ಕಲು ಕಠಿಣ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆ ಜಾರಿಗೆ ಬರಬೇಕು. ಪಕ್ಷ ಚುನಾವಣೆಗಳಿಗೆ ಮಾಡುವ ಖರ್ಚನ್ನು ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಸೇರಿಸುವುದು ಅತಿ ಆವಶ್ಯಕ.

## ಪ್ರಭುತ್ವ ದಮನ, ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ನಿರ್ಬಂಧಗಳು

2.44 ಬೆಳೆಯುತ್ತಿರುವ ಸರ್ವಾಧಿಕಾರಶಾಹಿ ಪ್ರವೃತ್ತಿಗಳು ಪ್ರಜಾಸತ್ತಾತ್ಮಕ ಹಕ್ಕುಗಳ ಗಂಭೀರವಾದ ಅತಿಕ್ರಮಣಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ಆಕ್ರಮಣಗಳಲ್ಲಿ ಬಿಂಬಿತವಾಗಿವೆ. ವಿವಿಧ ರಾಜ್ಯ ಸರಕಾರಗಳು ಮತಪ್ರದರ್ಶನಗಳನ್ನು ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸುವ, ಪ್ರತಿಭಟನೆಯ ಹಕ್ಕುಗಳ ಮೇಲೆ ಹೆಚ್ಚೆಚ್ಚು ಪ್ರತಿಬಂಧಕಗಳನ್ನು ಹೇರುತ್ತಿವೆ. ಇಂತಹ ನಿರ್ಬಂಧಗಳನ್ನು ಹೇರಲು ನ್ಯಾಯಾಂಗವನ್ನೂ ಬಳಸಲಾಗುತ್ತಿದೆ.

2.45 ಕರಾಳ ಕಾನೂನುಗಳ ಮೂಲಕ ಪ್ರಭುತ್ವ ದಮನವನ್ನು ನಡೆಸಲಾಗುತ್ತಿದೆ. ಜಮ್ಮು–ಕಾಶ್ಮೀರ ಹಾಗೂ ಮಣಿಪುರಗಳಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ

ಕಾಯಿದೆ (ಎ.ಎಫ್.ಎಸ್.ಪಿ.ಎ.)ಯನ್ನು ನಾಗರಿಕರ ಕೊಲೆಗಳನ್ನು ಬೇಕಾಬಿಟ್ಟಿಯಾಗಿ ಮಾಡಲು ದುರ್ಬಳಕೆ ಮಾಡಲಾಗಿದೆ. ಪ್ರಭುತ್ವ ಯಂತ್ರ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವ ಕಾಯಿದೆ (ಯು.ಎ.ಪಿ.ಎ.)ಯನ್ನು ಭಯೋತ್ಪಾದನೆಯ ವಿರುದ್ಧ ಹೋರಾಟದ ಹೆಸರಲ್ಲಿ ಮುಸ್ಲಿಂ ಯುವಕರನ್ನು ಗುರಿಯಾಗಿಸಲು ಬಳಸಿಕೊಂಡಿದೆ. ಕಳೆದ ಮೂರು ವರ್ಷಗಳಲ್ಲಿ, ದೀರ್ಘ ಅವಧಿಯಲ್ಲಿ ಜೈಲಿನಲ್ಲಿ ಕಳೆದ ನಂತರ ಕೋರ್ಟುಗಳು ಮುಸ್ಲಿಂ ಯುವಕರನ್ನು ಎಲ್ಲಾ ಆಪಾದನೆಗಳಿಂದ ದೋಷಮುಕ್ತ ಎಂದು ತೀರ್ಪು ಕೊಟ್ಟ ಹಲವಾರು ಉದಾಹರಣೆಗಳು ಇವೆ. ಸರಕಾರದ ನೀತಿಗಳನ್ನು ವಿರೋಧಿಸುತ್ತಿರುವವರ ಮತ್ತು ಜನಪ್ರಿಯ ಚಳುವಳಿಗಳ ಮೇಲೆ ಇಂಡಿಯನ್ ಪೆನಲ್ ಕೋಡಿನ ಕಠಿಣ ಕಲಮುಗಳನ್ನು ಬೇಕಾಬಿಟ್ಟಿಯಾಗಿ ಬಳಸಲಾಗುತ್ತಿದೆ. ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಕ್ತವಾಗುವ ಭಿನ್ನಾಭಿಪ್ರಾಯಗಳ ಮೇಲೆ ಐಟಿ ಕಾನೂನಿನ 66ಎ ಸೆಕ್ಶನ್ ಬಳಸಲಾಗುತ್ತಿದೆ. ಆಳುವ ಪಕ್ಷದ ಹಿತಾಸಕ್ತಿಗಳನ್ನು ಕಾಪಾಡಲು ಹೆಚ್ಚು ಹೆಚ್ಚಾಗಿ ಪೊಳಿಸ್ ಪಡೆಯನ್ನು ಬಳಸಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಆಳುವ ರಾಜಕಾರಣಿಗಳು, ಪೊಲಿಸ್ ಮತ್ತು ಮಾಫಿಯಾ ಗ್ಯಾಂಗುಗಳ ನಡುವೆ ಅಪವಿತ್ರ ಸಂಬಂಧ ಕಂಡು ಬಂದಿದೆ. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಅಲ್ಪಸಂಖ್ಯಾತರ ಮೇಲೆ ಹಿಂದುತ್ವ ಶಕ್ತಿಗಳ ಕಾನೂನು ಬಾಹಿರ ಫರ್ಮಾನುಗಳನ್ನು ಜಾರಿ ಮಾಡಲು ಪೊಲಿಸ್ ಬಳಕೆಯ ಅಪಾಯಕಾರಿ ಪ್ರವೃತ್ತಿಗಳು ಬೆಳಕಿಗೆ ಬರುತ್ತಿವೆ.

2.46 ಇವೆಲ್ಲಾ, ಪ್ರಜಾಪ್ರಭುತ್ವ ಹಕ್ಕುಗಳ ಮತ್ತು ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಗೆ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ನಾಗರಿಕ ಗುಂಪುಗಳನ್ನು ಅಣಿ ನೆರೆಸುವುದರ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ.

# II

# ಪ್ರಸ್ತುತ ರಾಜಕೀಯ ಪರಿಸ್ಥಿತಿ

## ಬಿಜೆಪಿ ಮತ್ತು ಕಾಂಗ್ರೆಸ್

2.47 ಆಳುವ ವರ್ಗಗಳ ಎರಡು ಪ್ರಮುಖ ಪಕ್ಷಗಳ ಸಾಪೇಕ್ಷ ಬಲಾಬಲದಲ್ಲಿ ಈಗಿನ ಪರಿಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆಗಳು ಆಗಿವೆ. ಕಾಂಗ್ರೆಸಿಗಿಂತ ಬಿಜೆಪಿಗೆ ಹೆಚ್ಚಿನ ಬಲ ಬಂದಿದೆ. ಕೇವಲ ಶೆ, 31 ಮತಗಳಿಕೆಯ ಆಧಾರದಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ 282 ಸೀಟುಗಳನ್ನು ಗಳಿಸಿತು. ಆದರೆ ಮಧ್ಯಮ ವರ್ಗಗಳಿಂದ, ಯುವಜನತೆಯಿಂದ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹಿಂದುಳಿದ ಜಾತಿಗಳಿಂದ ಅದು ಹೊಸ ಬೆಂಬಲ ಪಡೆದಿದೆ. ಬಿಜೆಪಿ ಹೊಸ ಪ್ರದೇಶಗಳಿಗೆ ಮುನ್ನಡೆ ಸಾಧಿಸಿದೆ ಎಂಬುದು ಹರಿಯಾಣ, ಮಹಾರಾಷ್ಟ್ರ ಮತ್ತು ಜಾರ್ಖಂಡ ವಿಧಾನಸಭೆ ಚುನಾವಣೆಗಳಲ್ಲಿ ಅದು ವಿಜಯ ಪಡೆದ ರೀತಿಯಿಂದ ತಿಳಿಯುತ್ತದೆ. ಎರಡು ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಸೋಲಿನಿಂದ ಬಿಜೆಪಿ ದಿಕ್ಕಿಲ್ಲದಂತಾಗಿತ್ತು. ಆಖೈರಾಗಿ ಆರೆಸ್ಸೆಸ್ ಮಧ್ಯಪ್ರವೇಶದ ನಂತರವೇ ಪಕ್ಷಕ್ಕೆ ಹೊಸ ನಾಯಕತ್ವ ಆರಿಸಲು ಸಾಧ್ಯವಾಯಿತು. ಪಕ್ಷದ ಮೇಲೆ ಆರೆಸ್ಸೆಸ್ ನಿಯಂತ್ರಣ ಮತ್ತು ಹಿಡಿತ ಇನ್ನಷ್ಟು ಬಲಗೊಂಡಿದೆ ಎಂಬುದು ಇದರ ಗಣನೀಯ ಪರಿಣಾಮ.

2.48 2004 ಮತ್ತು 2009ರ ಚುನಾವಣೆಗಳಲ್ಲಿ ಯುಪಿಎ ವಿಜಯದಿಂದ ಮುಚ್ಚಿಹೋಗಿದ್ದ ಕಾಂಗ್ರೆಸಿನ ದೀರ್ಘಕಾಲೀನ ಅವಸಾನ ಈಗ ಮುನ್ನೆಲೆಗೆ ಬಂದಿದೆ. ಯುಪಿಎ–2 ಸರಕಾರದ ದುರಂತಕಾರಿ ರೆಕಾರ್ಡು ಸಾಮೂಹಿಕ ಅತೃಪ್ತಿ ಮತ್ತು ಅದರ ಜನಬೆಂಬಲದ ನೆಲೆಯ ಸವೆತಕ್ಕೆ ಕಾರಣವಾಗಿದೆ. ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್ ಮತ್ತು ಜಮ್ಮು–ಕಾಶ್ಮೀರ ರಾಜ್ಯ ಚುನಾವಣೆಗಳಲ್ಲಿ ಅದರ ಸೋಲಿನಿಂದ ಅದಕ್ಕೆ ಇನ್ನೂ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ತೋರಿಸುತ್ತದೆ. ಅದು ಹೊಸ ನಾಯಕತ್ವದ ಆಯ್ಕೆಯಲ್ಲಿ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ.

## ಪ್ರಾದೇಶಿಕ ಪಕ್ಷಗಳು

2.49 ಕಳೆದ ಒಂದುವರೆ ದಶಕದಲ್ಲಿ ಪ್ರಾದೇಶಿಕ ಪಕ್ಷಗಳ ಪಾತ್ರದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಪಕ್ಷ ಗಮನಿಸುತ್ತಾ ಬಂದಿದೆ. ವರ್ಗದೃಷ್ಟಿಯಿಂದ ನೋಡಿದರೆ, ಪ್ರಾದೇಶಿಕ ಪಕ್ಷಗಳು ಆಯಾ ಪ್ರದೇಶಗಳ ಬಂಡವಾಳಶಾಹಿಗಳ ಆಶೋತ್ತರಗಳನ್ನು ಬಿಂಬಿಸುತ್ತವೆ. ಇದರಿಂದಾಗಿ ಅವರು ಹೆಚ್ಚು ಕಡಿಮೆ ನವ–ಉದಾರವಾದದ ನೀತಿಗಳಿಗೆ ಬದ್ಧರಾಗಿದ್ದಾರೆ. ರಾಜ್ಯದಲ್ಲಿ ಅವರ ರಾಜಕೀಯ ಹಿತಾಸಕ್ತಿಗೆ ತಕ್ಕಂತೆ ಬಿಜೆಪಿ ಮತ್ತು ಕಾಂಗ್ರೆಸಿಗೆ ಸಂಬಂಧಿಸಿದಂತೆ ಅವರು ಅವಕಾಶವಾದ ಪ್ರದರ್ಶಿಸುತ್ತಾರೆ. ತೆಲುಗು ದೇಸಂ ಮತ್ತು ಲೋಕ ಜನಶಕ್ತಿ ಪಕ್ಷಗಳು ಬಿಜೆಪಿ ಜತೆ ಮೈತ್ರಿ ಬೆಳೆಸಿದವು.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಜತೆ ಮೈತ್ರಿಕೂಟದಲ್ಲಿ ಇದ್ದ ಎನ್.ಸಿ.ಪಿ. ವಿಧಾನಸಭೆ ಚುನಾವಣೆಗಳ ನಂತರ ಬಿಜೆಪಿಯತ್ತ ಒಲವು ತೋರಿತು.

2.50 ಲೋಕಸಭಾ ಚುನಾವಣೆಯಲ್ಲಿ ಎ.ಐ.ಡಿ.ಎಂ.ಕೆ. ಮತ್ತು ಬಿ.ಜೆ.ಡಿ. ಸ್ವತಂತ್ರವಾಗಿ ಸ್ಪರ್ಧಿಸಿ ಉತ್ತಮ ಫಲಿತಾಂಶ ಪಡೆದರು. ಆದರೆ ನಂತರ ಬಿಜೆಪಿ–ಪರ ನಿಲುವು ತೆಗೆದುಕೊಳ್ಳುತ್ತಿದ್ದಾರೆ. ಎ.ಐ.ಡಿ.ಎಂ.ಕೆ. ಮತ್ತು ಬಿ.ಜೆ.ಡಿ. ತಮಿಳುನಾಡು ಮತ್ತು ಒಡಿಶಾಗಳಲ್ಲಿ ನವ–ಉದಾರವಾದಿ ನೀತಿ ಪಾಲಿಸುತ್ತಿದ್ದಾರೆ. ಎ.ಐ.ಡಿ.ಎಂ.ಕೆ. ಮತ್ತು ಬಿ.ಜೆ.ಡಿ. ಎರಡೂ ಪಕ್ಷಗಳ ಉನ್ನತ ನಾಯಕರು ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿದ್ದಾರೆ.

2.51 ಜನ–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ನಿಲುವು ಇರುವ ಪ್ರಾದೇಶಿಕ ಪಕ್ಷಗಳ ಸರಕಾರಗಳ ನೀತಿ ವಿರುದ್ಧ ಹೋರಾಡುವುದು ಅಗತ್ಯವಿದೆ. ಪ್ರಬಲ ಪ್ರಾದೇಶಿಕ ಪಕ್ಷಗಳ ಬೂರ್ಜ್ವಾ ಸಿದ್ಧಾಂತ ಮತ್ತು ರಾಜಕಾರಣದ ವಿರುದ್ಧ ರಾಜಕೀಯ ಪ್ರಚಾರವೂ ಅಗತ್ಯವಿದ್ದು, ಆಗ ಮಾತ್ರ ಜನಸಮೂಹಗಳನ್ನು ಅವರ ಪ್ರಭಾವದಿಂದ ಬಿಡುಗಡೆ ಮಾಡುವುದು ಸಾಧ್ಯವಾಗುತ್ತದೆ.

2.52 ಜನತಾ ದಳದಿಂದ ಹುಟ್ಟಿದ ಪಕ್ಷಗಳು ಒಂದಾಗಲು ಪ್ರಯತ್ನಿಸುತ್ತಿವೆ. ಎಸ್.ಪಿ., ಆರ್.ಜೆ.ಡಿ., ಜೆಡಿ(ಯು), ಜೆಡಿ(ಎಸ್), ಐ.ಎನ್.ಎಲ್.ಡಿ. ಮತ್ತು ಎಸ್.ಜೆ.ಪಿ. ಒಂದೇ ಪಕ್ಷವಾಗಿ ಐಕ್ಯವಾಗಲು ಯೋಜಿಸುತ್ತಿವೆ. ಇದನ್ನು ಅವರು ಸಾಧಿಸಿದರೆ ಅವರು ಉತ್ತರ ಪ್ರದೇಶ, ಬಿಹಾರ ಮತ್ತು ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಪರಿಣಾಮಕಾರಿ ಶಕ್ತಿಯಾಗಬಹುದು. ಆದರೆ, ಅವರು ಪ್ರಜಾಸತ್ತಾತ್ಮಕವಾದ ಸಾಮಾಜಿಕ ಮತ್ತು ಆರ್ಥಿಕ ಸಾರವುಳ್ಳ ಒಂದು ಸುಸಂಬದ್ಧ ಕಾರ್ಯಕ್ರಮವನ್ನು ರೂಪಿಸಬಲ್ಲರೇ ಎಂದು ಕಾದು ನೋಡಬೇಕಾಗಿದೆ.

2.53 ಕಳೆದ ಮಹಾಧಿವೇಶನದ ನಂತದ ಅವಧಿಯಲ್ಲಿ ಉದಯಿಸಿದ ಒಂದು ಹೊಸ ಪಕ್ಷವೆಂದರೆ ಆಮ್ ಆದ್ಮಿ ಪಕ್ಷ (ಆಪ್). ಅದು ಅಣ್ಣಾ ಹಜಾರೆ ನಾಯಕತ್ವದ ಭ್ರಷ್ಟಾಚಾರ–ವಿರೋಧಿ ಚಳುವಳಿಯಿಂದ ಹುಟ್ಟಿ ಬಂತು. ಆಪ್ ದೆಹಲಿ ವಿಧಾನಸಭೆ ಚುನಾವಣೆಗಳಲ್ಲಿ ಮತ್ತು ಆ ಮೇಲೆ ಲೋಕಸಭಾ ಚುನಾವಣೆಯಲ್ಲಿ ಪಂಜಾಬಿನಲ್ಲಿ ಪ್ರಮುಖ ಪಕ್ಷವಾಗಿ ಹೊಮ್ಮಿದೆ. ಆಪ್ ಮಧ್ಯಮ ವರ್ಗದವರನ್ನು ಮತ್ತು ಯುವಜನತೆಯನ್ನು ಹಲವು ಕಡೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಕೆಲವು ಜನತಾ ಸಮಸ್ಯೆಗಳ ಬಗ್ಗೆ ಚಳುವಳಿ ನಡೆಸುವುದು ಬಿಟ್ಟರೆ ಅದಕ್ಕೆ ಈ ವರೆಗೆ ಒಂದು ಸ್ಪಷ್ಟ ಕಾರ್ಯಕ್ರಮ ಮತ್ತು ನೀತಿ ರೂಪಿಸಲು ಸಾಧ್ಯವಾಗಿಲ್ಲ.

## ಸಾಮೂಹಿಕ ಹೋರಾಟಗಳು ಮತ್ತು ಚಳುವಳಿಗಳು

2.54 ಸಿ.ಪಿ.ಐ(ಎಂ) ಮತ್ತು ಎಡ ಪಕ್ಷಗಳು ಆಹಾರ ಭದ್ರತೆಯ ಬಗ್ಗೆ ಸತತ ಪ್ರಚಾರಾಂದೋಲನ ನಡೆಸಿದೆ. ಬ್ಲಾಕ್ ಹಂತದಿಂದ ಆರಂಭಿಸಿ, ರಾಜಧಾನಿ

ದೆಹಲಿಯಲ್ಲಿ ಜುಲೈ–ಅಗಸ್ಟ್ 2012ರಲ್ಲಿ ಐದು–ದಿನಗಳ ಸಾಮೂಹಿಕ ಧರಣಿ ನಡೆಸಲಾಯಿತು. ಇದರ ಬೆನ್ನಿಗೆ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪರವಾಗಿ ಸಾಮೂಹಿಕ ಸಹಿ ಸಂಗ್ರಹದ ಪ್ರಚಾರಾಂದೋಲನ ನಡೆಸಲಾಯಿತು. ಇದರಲ್ಲಿ 3.5 ಕೋಟಿ ಸಹಿ ಸಂಗ್ರಹಿಸಲಾಯಿತು. ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳ ಮತ್ತು ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಶೇರು ಮಾರಾಟ ವಿರುದ್ಧ ಕಾಂಗ್ರೆಸ್ಸೇತರ ಜಾತ್ಯತೀತ ಪಕ್ಷಗಳನ್ನು ಅಣಿ ನೆರೆಸುವಲ್ಲಿ ಮುತುವರ್ಜಿ ವಹಿಸಿದವು. ಈ ಬಗ್ಗೆ ಸೆಪ್ಟೆಂಬರ್ 20, 2012ರಂದು ದೇಶದಾದ್ಯಂತ ಮುಷ್ಕರ ಮತ್ತು ಪ್ರತಿಭಟನೆ ನಡೆದು, ಅದೊಂದು ಪ್ರಬಲ ಪ್ರತಿಭಟನಾ ಕಾರ್ಯಾಚರಣೆ ಆಯಿತು. ಮಹಿಳೆಯರ ಮೇಲೆ ದೌರ್ಜನ್ಯಗಳ ವಿರುದ್ಧ ಮತ್ತು ಇಂತಹ ಹಿಂಸಾಚಾರ ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಅಕ್ಟೋಬರ್ 30, 2012ರಂದು ಪ್ರತಿಭಟನಾ ದಿನವಾಗಿ ಆಚರಿಸಲಾಯಿತು.

2.55 ಇತ್ತೀಚಿನ ವರ್ಷಗಳಲ್ಲಿ ಪಕ್ಷದ ಅತ್ಯಂತ ದೊಡ್ಡ ಸಾಮೂಹಿಕ ಪ್ರಚಾರಾಂದೋಲನವಾದ '*ಸಂಘರ್ಷ ಸಂದೇಶ ಜಾಥಾ*'ಗಳನ್ನು ಸಂಘಟಿಸಲಾಯಿತು. ಈ ನಾಲ್ಕು ಜಾಥಾಗಳು ಮಾರ್ಚ್ 2013ರಲ್ಲಿ 11 ಸಾವಿರ ಕಿ.ಮಿ.ನಷ್ಟು ದೂರ ಕ್ರಮಿಸಿದವು. ಜಾಥಾಗಳ ಕೊನೆಯಲ್ಲಿ ಮಾರ್ಚ್ 19ರಂದು ಬೃಹತ್ ರ್‍ಯಾಲಿ ನಡೆಯಿತು. ರ್‍ಯಾಲಿ ಆರು ಹಕ್ಕೊತ್ತಾಯಗಳ ಬಗ್ಗೆ ಮೇ 15 ಮತ್ತು 31ರ ನಡುವೆ ಸಾಮೂಹಿಕ ಧರಣಿಗೆ ಕರೆ ಕೊಟ್ಟಿತು. ಜುಲೈ 2013ರಲ್ಲಿ ಪರ್ಯಾಯ ನೀತಿಗಳನ್ನು ರೂಪಿಸಲು ಒಂದು ಸಮಾವೇಶ ನಡೆಸಿತು. ಈ ವೇದಿಕೆಯನ್ನು ಜನಪ್ರಿಯಗೊಳಿಸಲು ಹಲವು ಪ್ರಾದೇಶಿಕ ರ್‍ಯಾಲಿಗಳನ್ನು ಸಂಘಟಿಸಲಾಯಿತು.

2.56 ಮುಂಬರುವ ಅವಧಿಯಲ್ಲಿ, ಪಕ್ಷದ ಸಾಮೂಹಿಕ ಹೋರಾಟಗಳು ಮತ್ತು ಚಳುವಳಿಗಳನ್ನು ಬೆಳೆಸುವುದರತ್ತ ಒತ್ತು ಇರಬೇಕು. ವಿವಿಧ ಜನವಿಭಾಗಗಳನ್ನು ಬಾಧಿಸುವ ಸಮಸ್ಯೆಗಳು ಮತ್ತು ವಿಷಯಗಳನ್ನು ಎತ್ತಿಕೊಂಡು ಸಾಮಾಜಿಕ ರಂಗಗಳೂ ಹೋರಾಟಗಳು ಮತ್ತು ಚಳುವಳಿಗಳನ್ನು ಸಂಘಟಿಸಿ ನಾಯಕತ್ವ ನೀಡಬೇಕು. ಪ್ರಬಲ ಸಾಮೂಹಿಕ ಸಂಘಟನೆಗಳನ್ನು ಕಟ್ಟುವ ಮೂಲಕ ಮಾತ್ರವೇ ಪಕ್ಷ ಮುನ್ನಡೆ ಸಾಧಿಸಬಲ್ಲುದು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಗಟ್ಟಿಯಾಗಬಲ್ಲವು.

2.57 ನವ–ಉದಾರವಾದಿ ನೀತಿಗಳು, ಕೋಮುವಾದ ಮತ್ತು ಸಾಮಾಜಿಕ ದಮನದ ವಿರುದ್ಧ ಹೋರಾಟಗಳನ್ನು ಮುನ್ನಡೆಸಲು ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿ ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನ, ಆದಿವಾಸಿಗಳು ಮತ್ತು ದಲಿತರ ಸಾಮೂಹಿಕ ಚಳುವಳಿಗಳು ಹಾಗೂ ಅವರ ವರ್ಗ ಮತ್ತು ಸಾಮೂಹಿಕ ಸಂಘಟನೆಗಳನ್ನು ಬೆಳೆಸುವುದು ಅತ್ಯಗತ್ಯ ಇದೆ. ಸಾಮೂಹಿಕ ಸಂಘಟನೆಗಳ ಮತ್ತು ಅವುಗಳ ಸಾಮೂಹಿಕ ಪ್ರಭಾವದ ವಿಸ್ತರಣೆ, ಪಕ್ಷದ ಸ್ವತಂತ್ರ

ಬಲ ಹೆಚ್ಚಿಸಲು ಹಾಗೂ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿ ನೆರೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

## ಕಾರ್ಮಿಕ ವರ್ಗ

2.58 ಎಲ್ಲಾ ಕೇಂದ್ರೀಯ ಟ್ರೇಡ್ ಯೂನಿಯನುಗಳು ಮತ್ತು ರಾಷ್ಟ್ರೀಯ ಫೆಡರೇಶನುಗಳ ಜಂಟಿ ವೇದಿಕೆಯಲ್ಲಿ ಬೆಳೆದು ಬಂದ ಐಕ್ಯ ಹೋರಾಟಗಳ ಫಲವಾಗಿ ಫೆಬ್ರುವರಿ 2013ರಲ್ಲಿ ನಡೆದ 2–ದಿನಗಳ ಮುಷ್ಕರವನ್ನು ಮುಂದಕ್ಕೆ ಒಯ್ಯಬೇಕು. ಈ ಐಕ್ಯ ವೇದಿಕೆ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವ ಹುನ್ನಾರದ ವಿರುದ್ಧ ಹೋರಾಟವನ್ನು ಸಂಘಟಿಸಬೇಕು. ಕಲ್ಲಿದ್ದಲು ಕಾರ್ಮಿಕರ ಎರಡು ದಿನಗಳ ಮುಷ್ಕರ ಈ ಐಕ್ಯತೆಯ ಫಲ.

2.59 ಕಾರ್ಮಿಕ ವರ್ಗದ ರಂಗ ಪ್ರಮುಖ ಕೈಗಾರಿಕೆಗಳ ಹೊಸ ಘಟಕಗಳಲ್ಲಿ ಕಾರ್ಮಿಕರನ್ನು ಸಂಘಟಿಸುವುದರತ್ತ ಗಮನ ಕೇಂದ್ರೀಕರಿಸಬೇಕು. ಅಲ್ಲದೆ ಅಸಂಘಟಿತ ಕ್ಷೇತ್ರದಲ್ಲಿರುವ ಅಗಾಧ ಜನಸಮೂಹಗಳನ್ನು ಸಂಘಟಿಸಿ ಚಳುವಳಿ ಬೆಳೆಸಬೇಕು. ಟ್ರೇಡ್ ಯೂನಿಯನುಗಳು ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಸಂಘಟಿಸಬೇಕು, ಸಾಮಾಜಿಕ ಪ್ರಶ್ನೆಗಳನ್ನೂ ಎತ್ತಿಕೊಳ್ಳಬೇಕು. ಕಾರ್ಮಿಕ ವರ್ಗದ ವಸತಿ ಪ್ರದೇಶಗಳಲ್ಲಿ ಗಮನ ಕೇಂದ್ರೀಕರಿಸಿ ಅಲ್ಲಿ ಕೋಮುವಾದಿ ಸಂಘಟನೆಗಳ ಚಟುವಟಿಕೆಗಳಿಗೆ ಪ್ರತಿಯಾಗಿ ಚಟುವಟಿಕೆಗಳನ್ನು ಸಂಘಟಿಸಬೇಕು.

## ರೈತರು

2.60 ಕೃಷಿ ರಂಗದಲ್ಲಿನ ಹೋರಾಟಗಳು ಮತ್ತು ಚಳುವಳಿಗಳು ಬಡ ರೈತರು, ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಬಡವರ ಪರವಾಗಿ ನಿಲ್ಲಬೇಕು. ರೈತ–ವಿರೋಧಿ ನೀತಿಗಳ ವಿರುದ್ಧ ಚಳುವಳಿಗಳನ್ನು ಮತ್ತು ಹೋರಾಟಗಳನ್ನು ಸಂಘಟಿಸುವಾಗ – ಕಾರ್ಷಿಕ ಬಿಕ್ಕಟ್ಟು ವಿವಿಧ ರೈತ ವಿಭಾಗಗಳು, ಪ್ರದೇಶಗಳು, ಬೆಳೆಗಳು, ಅವಧಿಗಳಲ್ಲಿ ಬೀರಿದ ವಿಭಿನ್ನ ಪರಿಣಾಮಗಳನ್ನು; ಮತ್ತು ಭೂಮಾಲಕರ ಹಾಗೂ ಶ್ರೀಮಂತ ರೈತರ ಪ್ರಬಲ ಸೈದ್ಧಾಂತಿಕ ಪ್ರಭಾವವನ್ನು – ಗಮನದಲ್ಲಿಡಬೇಕು. ಯೋಜಿತ ಮತ್ತು ದೃಢವಾದ ಸಂಘಟನಾ ಕೆಲಸಗಳಿಂದ; ಭೂಮಿ(ಭೂಹಕ್ಕುಗಳ ಪರವಾಗಿ ಮತ್ತು ಬೇಕಾಬಿಟ್ಟಿ ಭೂಸ್ವಾಧೀನದ ವಿರುದ್ಧ), ಅರಣ್ಯ ಹಕ್ಕುಗಳು, ಗೇಣಿದಾರರ ಹಕ್ಕುಗಳಿಗಾಗಿ ಸರಿಯಾದ ಘೋಷಣೆಗಳನ್ನು ಮತ್ತು ಚಳುವಳಿಗಳನ್ನು ಸಂಘಟಿಸುವ ಮೂಲಕ; ನವ–ಉದಾರವಾದಿ ಮತ್ತು ಮುಕ್ತ ವ್ಯಾಪಾರದ ನೀತಿಗಳನ್ನು ಪ್ರತಿರೋಧಿಸುವುದರಿಂದ; ಕೃಷಿ, ನೀರು, ಬೀಜ ಮತ್ತು ಅರಣ್ಯಗಳನ್ನು ಕಾರ್ಪೋರೆಟುಗಳು ಕಬಳಿಸುವುದರ ವಿರುದ್ಧ; ಸಾಲ ಸೌಲಭ್ಯ ವಿಸ್ತರಿಸಲು ಮತ್ತು ಪ್ರೋತ್ಸಾಹದಾಯಕ ಬೆಲೆಗಳಿಗಾಗಿ– ಈ ಸಮಸ್ಯೆಗಳನ್ನು ಪರಿಹರಿಸಬೇಕು.

## ಕೃಷಿ ಕಾರ್ಮಿಕರು

2.61 ಕೃಷಿ ಕೂಲಿಕಾರರ ಚಳುವಳಿ – ಉದ್ಯೋಗ ಮತ್ತು ಕೂಲಿ, ರೇಗಾ, ವಲಸೆ ಕಾರ್ಮಿಕರು, ಭೂಮಿ, ಅರಣ್ಯ ಭೂಮಿ, ಬೆಲೆ ಏರಿಕೆ ಮತ್ತು ಆಹಾರ ಭದ್ರತೆ, ಮನೆ ನಿವೇಶನಗಳು, ಸಾಮಾಜಿಕ ಭದ್ರತೆ, ಜಾತಿ ತಾರತಮ್ಯ, ಮಹಿಳಾ ಕೃಷಿ ಕಾರ್ಮಿಕರ ಸಮಸ್ಯೆಗಳು, ಕೃಷಿ ಕೂಲಿಕಾರರ ಕೂಲಿ ಮತ್ತು ಸಾಮಾಜಿಕ ಭದ್ರತೆಗೆ ಸಮಗ್ರ ಕೇಂದ್ರೀಯ ಕಾನೂನು ರಚನೆ – ಇವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಕೈಗೆತ್ತಿಕೊಂಡು ಹೋರಾಟಗಳು ಮತ್ತು ಚಳುವಳಿಗಳನ್ನು ಹಲವು ರಾಜ್ಯಗಳಲ್ಲಿ ಸಂಘಟಿಸಬೇಕು. ಮುಂಬರುವ ಅವಧಿಯಲ್ಲಿ ಈ ಸಮಸ್ಯೆಗಳನ್ನು ಎತ್ತಿಕೊಂಡು ಹಲವು ರಾಜ್ಯಗಳಲ್ಲಿ ಪ್ರಬಲ ಕೃಷಿ ಕಾರ್ಮಿಕರ ಚಳುವಳಿಯನ್ನು ಕಟ್ಟಬೇಕು. ಗ್ರಾಮೀಣ ಕೃಷಿ ಕೂಲಿಕಾರರ ಕೆಲಸದ ಸ್ವರೂಪದಲ್ಲಿ ಕಣ್ಣಿಗೆ ಹೊಡೆಯುವ ಬದಲಾವಣೆಗಳೂ ಆಗಿವೆ ಅವುಗಳ ನಿರ್ದಿಷ್ಟ ಅಧ್ಯಯನ ನಡೆಸಿ ಗ್ರಾಮೀಣ ಕಾರ್ಮಿಕರನ್ನು ಸಂಘಟಿಸುವ ಕಾರ್ಯವ್ಯೂಹ ರೂಪಿಸಬೇಕು.

## ಮಹಿಳೆಯರು

2.62 ಮಹಿಳೆಯರು ಮತ್ತು ಮಕ್ಕಳ ಮೇಲೆ ವೇಗವಾಗಿ ಹೆಚ್ಚುತ್ತಿರುವ ಲೈಂಗಿಕ ಹಿಂಸೆಯ ಅಪರಾಧಗಳನ್ನು ತಡೆಗಟ್ಟಲು ಮಹಿಳಾ ಸಂಘಟನೆಗಳು ಮತ್ತು ಗುಂಪುಗಳ ಐಕ್ಯ ಕಾರ್ಯಾಚರಣೆಗಳ ಮೂಲಕ ವ್ಯಾಪಕ ನೆಲೆಯ ಪ್ರತಿರೋಧ ಕಟ್ಟಲು ಮುತುವರ್ಜಿ ವಹಿಸಬೇಕಾಗಿದೆ. ಕೋಮುವಾದಿಗಳ ದಾಳಿಯ ಹಿನ್ನೆಲೆಯಲ್ಲಿ ಮಹಿಳೆಯರ ಮಧ್ಯೆ ಹಿಂದುತ್ವ ಶಕ್ತಿಗಳ ಕೋಮುವಾದಿ ಮತ್ತು ಮಹಿಳಾ–ವಿರೋಧಿ ಸಿದ್ಧಾಂತಗಳು ಮತ್ತು ಆಚರಣೆಗಳಿಗೆ ಹೇಗೆ ತಡೆಯೊಡ್ಡಬೇಕೆಂಬುದು ಪ್ರಮುಖ ಪ್ರಶ್ನೆಯಾಗಿದೆ. ಇವನ್ನು ಮಹಿಳೆಯರ ಮೇಲೆ ಅದರಲ್ಲೂ ಬಡ ಮಹಿಳೆಯರ ಜೀವನೋಪಾಯ ಮತ್ತು ಜೀವನದ ಮೇಲೆ ನವ–ಉದಾರವಾದಿ ನೀತಿಗಳ ನಿರ್ದಿಷ್ಟ ಪರಿಣಾಮಗಳ ವಿರುದ್ಧ ಇನ್ನಷ್ಟು ಹೋರಾಟಗಳ ಜತೆ ಜೋಡಿಸಬೇಕು. ಮುಂಬರುವ ದಿನಗಳಲ್ಲಿ ಈಗ ಅತ್ಯಂತ ಹೀನ ರೂಪಗಳನ್ನು ಪಡೆಯುತ್ತಿರುವ ಮಹಿಳೆಯರ ಮೇಲೆ ಹಿಂಸಾಚಾರದ ವಿರುದ್ಧ ಕಾರ್ಯಾಚರಣೆಯನ್ನು ತೀವ್ರಗೊಳಿಸಬೇಕಾಗಿದೆ. ಮಹಿಳಾ ಸಂಘಟನೆ ಲೈಂಗಿಕ ದಾಳಿ ಮತ್ತು ಕಿರುಕುಳಕ್ಕೆ ಗುರಿಯಾಗುತ್ತಿರುವ ನಗರ ಪ್ರದೇಶಗಳ ಯುವತಿಯರ ವ್ಯಾಪಕ ವಿಭಾಗಗಳನ್ನು ತಲುಪಲು ಹಾದಿಗಳನ್ನು ಕಂಡುಕೊಳ್ಳಬೇಕಾಗಿದೆ.

## ಯುವಜನತೆ

2.63 ನಿರುದ್ಯೋಗ, ಬೆಳವಣಿಗೆಗೆ ಅವಕಾಶಗಳ ಕೊರತೆ, ಕ್ರೀಡಾ ಹಾಗೂ ಸಾಂಸ್ಕೃತಿಕ ಸವಲತ್ತುಗಳ ಕೊರತೆ ಮತ್ತು ಯುವಜನರನ್ನು ರಾಜಕೀಯ–ವಿಮುಖಗೊಳಿಸಲು ಸಂಯೋಜಿತ ಪ್ರಯತ್ನಗಳು – ಇವೇ ಮುಂತಾದ ಯುವಜನರ ಸಮಸ್ಯೆಗಳನ್ನು

ಎತ್ತಿಕೊಂಡು ಯುವಜನರ ಚಳುವಳಿಯನ್ನು ಬೆಳೆಸಬೇಕಾಗಿದೆ. ಯುವಜನರಿಗೆ ಸ್ಫೂರ್ತಿ ನೀಡಬಲ್ಲ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಆದರ್ಶಗಳನ್ನು ಎತ್ತಿ ಹಿಡಿಯುವ ಸಾಮಾಜಿಕ ಸಮಸ್ಯೆಗಳ ಬಗೆಗಿನ ಹೋರಾಟದಲ್ಲಿ ಯುವರಂಗ ಮುಂಚೂಣಿಯಲ್ಲಿರಬೇಕು. ಇದು ಕೋಮುವಾದಿ ಶಕ್ತಿಗಳ ವಿರುದ್ಧ ವಿಸ್ತೃತ ಪ್ರಚಾರಾಂದೋಲನದ ಭಾಗವಾಗಬೇಕು.

## ವಿದ್ಯಾರ್ಥಿಗಳು

2.64 ಯುಪಿಎ–2 ಆಡಳಿತದ ಅವಧಿಯಲ್ಲಿ ಶಿಕ್ಷಣ ರಂಗದ ವ್ಯಾಪಾರೀಕರಣ ಮತ್ತು ಕೇಂದ್ರೀಕರಣದ ವಿರುದ್ಧ ವಿದ್ಯಾರ್ಥಿ ರಂಗ ಹೋರಾಡುತ್ತಿತ್ತು. ಮೋದಿ ಸರಕಾರ ಅಧಿಕಾರಕ್ಕೆ ಬಂದಾಗಿಂದ, ಶಿಕ್ಷಣವನ್ನು ಕೋಮುವಾದೀಕರಿಸುವ ಕ್ರಮಗಳು ಆರಂಭವಾಗಿವೆ. ಶಿಕ್ಷಣಕ್ಕಾಗಿ ಬಜೆಟಿನಲ್ಲಿ ತೆಗೆದಿಟ್ಟ ಸಂಪನ್ಮೂಲಗಳ ಹೆಚ್ಚಳವಾಗದೆ, ವ್ಯಾಪಾರೀಕರಣ ಹೆಚ್ಚುತ್ತಿದೆ. ವಿದ್ಯಾರ್ಥಿ ಚಳುವಳಿಯ ಮುಖ್ಯ ಒತ್ತು ಕೋಮುವಾದೀಕರಣ ಮತ್ತು ವ್ಯಾಪಾರೀಕರಣದ ವಿರುದ್ಧ ಇರಬೇಕು. ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಪ್ರಾಶಸ್ತ್ಯ ಇರಬೇಕು. ವ್ಯಾಪಕ ನೆಲೆಯ ಐಕ್ಯ ಚಳುವಳಿಗಳನ್ನು ಈ ವಿಷಯಗಳ ಮೇಲೆ ಸಂಘಟಿಸಬೇಕು. ಹುಲುಸಾಗಿ ಬೆಳೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಚಳುವಳಿಗೆ ಸೆಳೆಯುವ ಮತ್ತು ಸಂಘಟಿಸುವತ್ತ ವಿಶೇಷ ಗಮನ ವಹಿಸಬೇಕು.

## ಆದಿವಾಸಿಗಳು

2.65 ಆದಿವಾಸಿಗಳ ಪ್ರತ್ಯೇಕ ವೇದಿಕೆಯ ರಚನೆ, ವಿವಿಧ ರಾಜ್ಯಗಳಲ್ಲಿ ಆದಿವಾಸಿಗಳಲ್ಲಿ ಕೆಲಸಕ್ಕೆ ಕುಮ್ಮಕ್ಕು ಕೊಟ್ಟಿದೆ. ಅರಣ್ಯ ಹಕ್ಕುಗಳ ಕಾನೂನು, ನಿರ್ವಸತೀಕರಣ, ಶಿಕ್ಷಣದ ಹಕ್ಕುಗಳು, ಸಣ್ಣ ಅರಣ್ಯ ಉತ್ಪನ್ನಗಳ ಮತ್ತು ಭದ್ರತೆಯ ಬಗ್ಗೆ ಆದಿವಾಸಿ ಮಹಿಳೆಯರ ಹಕ್ಕುಗಳು – ಇವೇ ಮುಂತಾದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಆದಿವಾಸಿ ಸಮಸ್ಯೆಗಳ ಬಗ್ಗೆ ವರ್ಗ ಧೋರಣೆಯ ಜತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನು ಜೋಡಿಸಬೇಕು. ಆದಿವಾಸಿ ಪ್ರದೇಶಗಳಲ್ಲಿ ಆರೆಸ್ಸೆಸ್‌ನ ಕೋಮುವಾದಿ ದಾಳಿಯ ವಿರುದ್ಧ ಇದು ಪರಿಣಾಮಕಾರಿಯಾಗಬಲ್ಲುದು.

## ದಲಿತರು

2.66 ದಲಿತರ ಮೇಲೆ ಜಾತಿ ತಾರತಮ್ಯ ಮತ್ತು ದಮನದ ವಿರುದ್ಧ ಹೋರಾಟ ಪ್ರಜಾಸತ್ತಾತ್ಮಕ ಹೋರಾಟದ ಪ್ರಮುಖ ಭಾಗ. ಅಸ್ಪೃಶ್ಯತೆ ಮತ್ತು ಇತರ ಜಾತಿ ತಾರತಮ್ಯಗಳ ವಿರುದ್ಧ ಹೋರಾಟ; ದಲಿತರಾಗಿ ಇರುವ ಮೀಸಲಾತಿ ಮತ್ತು ಇತರ ಕಲ್ಯಾಣ ಯೋಜನೆಗಳನ್ನು ಪೂರ್ತಿಯಾಗಿ ಜಾರಿ ಮಾಡಲು ಹೋರಾಟಗಳು; ದಲಿತ–ಆದಿವಾಸಿಗಳ ಉಪ–ಯೋಜನೆ/ವಿಶೇಷ ಅಂಗ ಯೋಜನೆಗಳ ಕಾನೂನು

ನೆಲೆಯ ಜಾರಿ; ಜಾತಿ ವ್ಯವಸ್ಥೆಯ ವಿರುದ್ಧ ಒಟ್ಟಂದದ ಹೋರಾಟ – ಇವೆಲ್ಲ ವಿಷಯಗಳನ್ನು ಮುಂದಕ್ಕೆ ಒಯ್ಯಬೇಕು. ದಲಿತ ವೇದಿಕೆಯ ರಚನೆ ದಲಿತ ವಿಮೋಚನಾ ಚಳುವಳಿಗೆ ಉತ್ತೇಜಕವಾಗಬೇಕು.

## ರಾಜಕೀಯ ಧೋರಣೆ

2.67 ಪಕ್ಷ ಬಿಜೆಪಿ ಮತ್ತು ಮೋದಿ ಸರಕಾರದ ನೀತಿಗಳ ವಿರುದ್ಧ ಹೋರಾಡಬೇಕು. ಇದು ನಮ್ಮ ಮುಂದಿರುವ ಪ್ರಮುಖ ಕರ್ತವ್ಯ. ಇದಕ್ಕೆ ಮೋದಿ ಸರಕಾರದ ಆರ್ಥಿಕ ನೀತಿಗಳ ಮತ್ತು ಅದರ ಹಿಂದುತ್ವ ಧೋರಣೆಯ ಸಾಮಾಜಿಕ–ಶೈಕ್ಷಣಿಕ ನೀತಿಗಳ ವಿರುದ್ಧ ಸಂಯೋಜಿತ ವಿರೋಧದ ಅಗತ್ಯವಿದೆ. ಬಿಜೆಪಿ–ಆರೆಸೆಸ್ ಕೂಟದ ವಿರುದ್ಧ ರಾಜಕೀಯ–ಸೈದ್ಧಾಂತಿಕ ಹೋರಾಟ ನಡೆಸಬೇಕಾಗಿದೆ. ಕೋಮುವಾದದ ವಿರುದ್ಧ ಹೋರಾಟವನ್ನು ಪ್ರತ್ಯೇಕವಾಗಿ ನಡೆಸಲು ಸಾಧ್ಯವಿಲ್ಲ. ಅದನ್ನು ನವ–ಉದಾರವಾದದ ನೀತಿಗಳ ವಿರುದ್ಧ ಮತ್ತು ಜನತೆಯ ಜೀವನೋಪಾಯಗಳ ರಕ್ಷಣೆಯ ಹೋರಾಟಗಳ ಜತೆಗೆ ಒಂದುಗೂಡಿಸಬೇಕಾಗಿದೆ.

2.68 ಹೋರಾಟದ ಮುಖ್ಯ ಲಕ್ಷ್ಯ ಬಿಜೆಪಿಯ ವಿರುದ್ಧವಾದರೂ, ಕಾಂಗ್ರೆಸಿಗೆ ಪಕ್ಷದ ವಿರೋಧ ಮುಂದುವರೆಯುತ್ತದೆ. ಅದು ನವ–ಉದಾರವಾದಿ ನೀತಿಗಳನ್ನು ಅನುಸರಿಸಿದೆ. ಯುಪಿಎ–2ರ ಜನ–ವಿರೋಧಿ ನೀತಿಗಳು ಮತ್ತು ಭ್ರಷ್ಟಾಚಾರಗಳೇ ಬಿಜೆಪಿಗೆ ಜನಬೆಂಬಲ ಗಳಿಸಲು ಅನುವು ಮಾಡಿಕೊಟ್ಟದ್ದು. ಪಕ್ಷ ಕಾಂಗ್ರೆಸ್ ಜತೆ ಯಾವುದೇ ಹೊಂದಾಣಿಕೆ ಅಥವಾ ಚುನಾವಣಾ ಮೈತ್ರಿಯನ್ನು ಮಾಡಿಕೊಳ್ಳುವುದಿಲ್ಲ.

2.69 ನವ–ಉದಾರವಾದಿ ನೀತಿಗಳ ವಿರುದ್ಧ ಹೋರಾಟಕ್ಕೆ ಪ್ರಾದೇಶಿಕ ಪಕ್ಷಗಳು ಸೇರಿದಂತೆ ರಾಜ್ಯ ಸರಕಾರಗಳ ಇಂತಹ ನೀತಿಗಳ ವಿರುದ್ಧ ಹೋರಾಟಗಳ ಅಗತ್ಯ ಇದೆ. ಪ್ರಾದೇಶಿಕ ಪಕ್ಷಗಳ ಬೂರ್ಜ್ವಾ–ಭೂಮಾಲಕ ರಾಜಕೀಯ ಮತ್ತು ನೀತಿಗಳನ್ನು ರಾಜಕೀಯವಾಗಿ ವಿರೋಧಿಸುವುದು, ದುಡಿಯುವ ಜನರನ್ನು ಸಂಘಟಿಸಿ ಎಡ–ಪ್ರಜಾಸತ್ತಾತ್ಮಕ ವೇದಿಕೆಯ ಸುತ್ತ ಅಣಿ ನೆರೆಸಲು ಸಹ ಅಗತ್ಯವಿದೆ.

2.70 ಪಕ್ಷ ತನ್ನ ಸ್ವತಂತ್ರ ಶಕ್ತಿಯನ್ನು ಕಟ್ಟಿ ಬೆಳೆಸಲು ಪ್ರಾಥಮಿಕ ಗಮನ ಕೊಡುತ್ತದೆ. ಅದೇ ಸಮಯದಲ್ಲಿ, ಪಕ್ಷ –ಜನತೆಯ ಸಮಸ್ಯೆಗಳು, ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಗೆ, ರಾಜ್ಯಗಳ ಹಕ್ಕುಗಳ ರಕ್ಷಣೆಗೆ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ – ಪ್ರಜಾಸತ್ತಾತ್ಮಕ ಶಕ್ತಿಗಳು ಹಾಗೂ ಕಾಂಗ್ರೆಸೇತರ ಜಾತ್ಯತೀತ ಪಕ್ಷಗಳ ಜತೆ ಐಕ್ಯ ಕಾರ್ಯಾಚರಣೆಯನ್ನು ಬೆಳೆಸಲು ಶ್ರಮಿಸುವುದು. ಸಾಮೂಹಿಕ ಚಳುವಳಿಗಳು ಮತ್ತು ಐಕ್ಯ ಹೋರಾಟಗಳಿಗಾಗಿ ಜಂಟಿ ವೇದಿಕೆಗಳು ಪಕ್ಷದ ಸ್ವತಂತ್ರ ಬಲವನ್ನು ಹೆಚ್ಚಿಸಲು ಅಗತ್ಯ. ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಐಕ್ಯ ಕಾರ್ಯಾಚರಣೆಗಳು ಕಾಂಗ್ರೆಸ್, ಬಿಜೆಪಿ ಮತ್ತು ಇತರ ಬೂರ್ಜ್ವಾ ಪಕ್ಷಗಳ ಹಿಂಬಾಲಿಸುವ ಜನಸಮೂಹಗಳನ್ನು ಸೆಳೆಯಲು ಉದ್ದೇಶಿಸುತ್ತವೆ.

2.71 ಪಕ್ಷ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿ ನೆರೆಸಲು ಸಕ್ರಿಯವಾಗಿ ಕೆಲಸ ಮಾಡುತ್ತಾ, ಎಡ–ಪ್ರಜಾಸತ್ತಾತ್ಮಕ ರಂಗವನ್ನು ಹಂತ ಹಂತವಾಗಿ ರೂಪಿಸುತ್ತದೆ. ಇದು ಐಕ್ಯ ಹೋರಾಟಗಳು ಮತ್ತು ಜಂಟಿ ಚಳುವಳಿಗಳನ್ನು ಬೆಳೆಸುವುದರಿಂದ ಮಾತ್ರ ಇದು ಸಾಧ್ಯ. ಪಕ್ಷದ ಚುನಾವಣಾ ತಂತ್ರಗಳು – ಪಕ್ಷದ ಹಿತಾಸಕ್ತಿ ಎತ್ತಿಹಿಡಿಯುವ, ಪಕ್ಷವನ್ನು ಬಲಪಡಿಸುವ, ಎಡ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿ ನೆರೆಸಲು ಅನುವು ಮಾಡಿಕೊಡುವ – ಅಗತ್ಯಗಳಿಂದ ನಿರ್ದೇಶಿತವಾಗಿರಬೇಕು.

## ಎಡ ಐಕ್ಯತೆ ಮತ್ತು ಚಳುವಳಿಗಳು

2.72 ಎಡ ಐಕ್ಯತೆಯ ಪ್ರಕ್ರಿಯೆ ಈವರೆಗೆ ರಾಷ್ಟ್ರೀಯ ಮಟ್ಟದಲ್ಲಿರುವ – ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ – ಈ ನಾಲ್ಕು ಪಕ್ಷಗಳಿಗೆ ಸೀಮಿತವಾಗಿತ್ತು. ಲೋಕಸಭಾ ಚುನಾವಣೆಯಿಂದೀಚೆಗೆ, ಎಡ ಐಕ್ಯತೆಯನ್ನು ಇನ್ನೂ ವ್ಯಾಪಕಗೊಳಿಸುವ ಮತ್ತು ಬಲಪಡಿಸುವುದರ ಮೇಲೆ ಒತ್ತು ಬಂದಿದೆ. ಈ ಉದ್ದೇಶದಿಂದ ಸಿಪಿಐ(ಎಂ.ಎಲ್)–ಲಿಬರೇಶನ್ ಮತ್ತು ಎಸ್.ಯು.ಸಿ.ಐ.(ಸಿ)ಗಳನ್ನು ಒಳಗೊಂಡ ಆರು ಎಡ ಪಕ್ಷಗಳು ಸೇರಿ, 9 ಅಂಶಗಳ ಹಕ್ಕೊತ್ತಾಯಗಳ ಪಟ್ಟಿಯ ಆಧಾರದ ಮೇಲೆ ಡಿಸೆಂಬರ್ 2014ರಲ್ಲಿ ಜಂಟಿ ಪ್ರಚಾರಾಂದೋಲನ ನಡೆಸಿದವು. ರಾಜ್ಯಗಳಲ್ಲೂ ಐಕ್ಯ ಎಡ ವೇದಿಕೆಗಳು ಬೆಳೆದು ಬಂದಿವೆ. ಪಂಜಾಬಿನಲ್ಲಿ ನಾಲ್ಕು ಎಡ ಪಕ್ಷಗಳು – ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ.ಎಲ್.)–ಲಿಬರೇಶನ್, ಸಿಪಿಎಂ(ಪಂಜಾಬ್) ಸೇರಿ ನಿರ್ದಿಷ್ಟ ಹಕ್ಕೊತ್ತಾಯಗಳ ಪಟ್ಟಿಯ ಆಧಾರದಲ್ಲಿ ಸೆಪ್ಟೆಂಬರ್ 2014ರಿಂದ ಜಂಟಿ ಚಳುವಳಿ ನಡೆಸುತ್ತಿವೆ.

2.73 ಪಶ್ಚಿಮ ಬಂಗಾಳದಲ್ಲಿ ಸಾಮ್ರಾಜ್ಯಶಾಹಿ ಮತ್ತು ಕೋಮುವಾದ ವಿರುದ್ಧ ಜಂಟಿ ಕಾರ್ಯಾಚರಣೆಗಾಗಿ 17 ಎಡ ಪಕ್ಷಗಳು ಮತ್ತು ಗುಂಪುಗಳು ಒಟ್ಟು ಸೇರಿದ್ದವು. ತೆಲಂಗಾಣ ಮತ್ತು ಆಂಧ್ರ ಪ್ರದೇಶಗಳಲ್ಲಿ 11 ಎಡ ಪಕ್ಷಗಳು ಒಟ್ಟಿಗೆ ಕೆಲಸ ಮಾಡುತ್ತಿವೆ. ಮಹಾರಾಷ್ಟ್ರದಲ್ಲಿ, ಪೆಸಂಟ್ಸ್ ಅಂಡ್ ವರ್ಕರ್ಸ್ ಪಾರ್ಟಿ ಇತ್ತೀಚಿನ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜತೆ ಮತ್ತೆ ಸೇರಿಕೊಂಡವು. ಎಡ ಐಕ್ಯತೆಯನ್ನು ವ್ಯಾಪಕಗೊಳಿಸುವ ಪ್ರಯತ್ನಗಳನ್ನು ಮತ್ತು ಪಕ್ಷಗಳು, ಗುಂಪುಗಳು ಮತ್ತು ವ್ಯಕ್ತಿಗಳನ್ನು ಒಳಗೊಂಡ ವಿಶಾಲ ಎಡ ವೇದಿಕೆ ರೂಪಿಸುವ ಕಾಯಕವನ್ನು ಮುಂದಕ್ಕೆ ಒಯ್ಯಬೇಕಾಗಿದೆ.

## ಎಡ ನೆಲೆಗಳು

2.74 ಪಶ್ಚಿಮ ಬಂಗಾಳ ಹಾಗೂ ಕೇರಳದಲ್ಲಿ ಚುನಾವಣಾ ಹಿನ್ನಡೆಗಳು ಮತ್ತು ಇನ್ನೂ ಯಾವುದೇ ರಾಜ್ಯದಲ್ಲಿ ಪಕ್ಷ ಗಮನಾರ್ಹ ಮುನ್ನಡೆ ಸಾಧಿಸದೆ ಇರುವುದರಿಂದ, ರಾಷ್ಟ್ರೀಯ ಮಟ್ಟದಲ್ಲಿ ಪಕ್ಷ ಮತ್ತು ಎಡಪಂಥದ ದುರ್ಬಲ ಸ್ಥಿತಿಯನ್ನು 20ನೇ ಮಹಾಧಿವೇಶನದ ರಾಜಕೀಯ ನಿರ್ಣಯ ಗುರುತಿಸಿತ್ತು. ಆನಂತರದ ಅವಧಿಯಲ್ಲಿ,

ಪಕ್ಷ ಈ ಪರಿಸ್ಥಿತಿಯಿಂದ ಹೊರಬರಲು, ವಿಶೇಷವಾಗಿ ಪಕ್ಷದ ಮೂರು ಪ್ರಬಲ ರಾಜ್ಯಗಳಲ್ಲಿ, ಪ್ರಯತ್ನಿಸಿದೆ.

2.75 ಸಿಪಿಐ(ಎಂ) ಮತ್ತು ಎಡಪಂಥೀಯರ ಮೇಲೆ 2009ರಲ್ಲಿ ಆರಂಭವಾದ ಸಂಯೋಜಿತ ಹಿಂಸಾಚಾರ ಮತ್ತು ದಾಳಿ ಮುಂದುವರೆಯುತ್ತಿದೆ. ಅದು 1970ರ ದಶಕದ ಹಿಂಸಾಚಾರ ಮತ್ತು ಭಯೋತ್ಪಾದನೆಯನ್ನು ಪ್ರಮಾಣ ಮತ್ತು ವ್ಯಾಪಕತೆಯಲ್ಲಿ ಮೀರಿಸಿದೆ. ಕಳೆದ ಮೂರು ವರ್ಷಗಳಲ್ಲಿ, 2013ರ ಪಂಚಾಯತ್ ಚುನಾವಣೆಗಳು ಮತ್ತು ಲೋಕಸಭಾ ಚುನಾವಣೆ ನಂತರದಲ್ಲಿ ಕಂಡಂತೆ, ಪಕ್ಷದ ಚಟುವಟಿಕೆಗಳನ್ನು ದಮನಿಸುವ ಮತ್ತು ಕಾರ್ಯಕರ್ತರನ್ನು ಬೆದರಿಸುವ ಉದ್ದೇಶದಿಂದ ಹಲವು ಸುತ್ತಿನ ದಾಳಿಗಳು ನಡೆದಿವೆ. ಈ ಹಲವು ಸುತ್ತಿನ ದಾಳಿಗಳಲ್ಲಿ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಮತ್ತು ಮತದಾರರನ್ನು ಗುರಿ ಮಾಡಿದ್ದಾರೆ. ಈ ಹಿಂಸಾಚಾರದ ತೀವ್ರ ಆಘಾತ ಮಹಿಳೆಯರ ಮೇಲೆ ಆಗಿದೆ ಮತ್ತು ಅವರು ದಾಳಿಕೋರರನ್ನು ಧೈರ್ಯವಾಗಿ ಪ್ರತಿರೋಧಿಸಿದ್ದಾರೆ. ಪಕ್ಷದ ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸಲು ಸರಕಾರುಇ ಯಂತ್ರವನ್ನು ದುರ್ಬಳಕೆ ಮಾಡಲಾಗಿದೆ. ತೃಣಮೂಲ ಕಾಂಗ್ರೆಸ್ ನಾಯಕರು ಮತ್ತು ಪಾರ್ಲಿಮೆಂಟು ಸದಸ್ಯರು ಹಿಂಸೆ, ಅತ್ಯಚಾರ, ಕೊಲೆಗಳನ್ನು ಮಾಡಲು ಪ್ರಚೋದಿಸಿ ಭಾಷಣಗಳನ್ನು ಮಾಡಿದ್ದಾರೆ. ಮೇ 2011ರ ವಿಧಾನಸಭೆ ಚುನಾವಣೆಗಳ ನಂತರ 163 ಪಕ್ಷದ ಸದಸ್ಯರು ಮತ್ತು ಬೆಂಬಲಿಗರು ಕೊಲೆಯಾಗಿದ್ದಾರೆ.

2.76 ತೃಣಮೂಲ ಸರಕಾರದ ದುರಾಡಳಿತ, ಶಾರದಾ ಹಗರಣ ಮತ್ತು ಅದರಲ್ಲಿ ಉನ್ನತ ತೃಣಮೂಲ ನಾಯಕರ ಪಾತ್ರ, ಕಾರ್ಮಿಕ ವರ್ಗ ಮತ್ತು ರೈತರ ಪರಿಸ್ಥಿತಿ ಹದಗೆಡುತ್ತಿರುವುದು, ಮಹಿಳೆಯರ ಮೇಲೆ ವ್ಯಾಪಕ ಅಪರಾಧಗಳು, ಲೂಟಿ ಮತ್ತು ಸುಲಿಗೆ – ಇವೆಲ್ಲವೂ ಪ್ರಸ್ತುತ ಪರಿಸ್ಥಿತಿಯ ಲಕ್ಷಣಗಳಾಗಿವೆ. ತೃಣಮೂಲದ ಅವಕಾಶವಾದಿ ರಾಜಕೀಯ ಮತ್ತು ಫ್ಯಾಸಿಸ್ಟ್ ಕಾರ್ಯಾಚರಣೆಗಳು ಬಿಜೆಪಿ ಜನಬೆಂಬಲ ಗಳಿಸಲು ನೆಲೆ ಒದಗಿಸಿವೆ. ಈ ಪ್ರತಿಕೂಲ ಪರಿಸ್ಥಿತಿಯಿಂದ ಹೊರಬರಲು ಪಕ್ಷ ಪ್ರಯತ್ನಗಳನ್ನು ನಡೆಸಿದೆ. ಪ್ರಜಾಪ್ರಭುತ್ವದ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ, ಜನರ ಜೀವನೋಪಾಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಅಣಿ ನೆರೆಸಿ ಹೋರಾಟಗಳನ್ನು ನಡೆಸಲು ಪ್ರಚಾರಾಂದೋಲನಗಳನ್ನು ನಡೆಸಲಾಗುತ್ತಿದೆ. ಕೋಮುವಾದಿ ಶಕ್ತಿಗಳ ಹೆಚ್ಚುತ್ತಿರುವ ಅಪಾಯಕ್ಕೆ ವಿರುದ್ಧವಾಗಿಯೂ ಮತ್ತು ಅದಕ್ಕೆ ತಡೆಯೊಡ್ಡಲು ಪಕ್ಷ ಪ್ರಚಾರಾಂದೋಲನಗಳನ್ನು ನಡೆಸುತ್ತಿದೆ. ಇಂತಹ ಹೋರಾಟಗಳು ಮತ್ತು ಪ್ರಚಾರಾಂದೋಲನಗಳು ಜನತೆಯ ಹೆಚ್ಚೆಚ್ಚು ಬೆಂಬಲ ಗಳಿಸುತ್ತಿವೆ,

2.77 ಕೇರಳದಲ್ಲಿ, ಪಕ್ಷ ಮತ್ತು ಎಡ–ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್.) ಯುಡಿ.ಎಫ್. ಸರಕಾರದ ಜನ–ವಿರೋಧಿ ನೀತಿಗಳ ವಿರುದ್ಧ ಹೋರಾಟಗಳನ್ನು ನಡೆಸುತ್ತಿದೆ.

ಈ ಅವಧಿಯಲ್ಲಿ ಹಲವು ಸಾಮೂಹಿಕ ಚಳುವಳಿಗಳು ನಡೆದಿವೆ. ಇವುಗಳಲ್ಲಿ ಸೌರ ಫಲಕಗಳ ಹಗರಣದಲ್ಲಿ ಮುಖ್ಯಮಂತ್ರಿಯ ರಾಜಿನಾಮೆಗೆ ಆಗ್ರಹಿಸಿ ಎರಡು ದಿನಗಳ ಕಾಲ ಸೆಕ್ರೆಟಾರಿಯಟ್ ಕಟ್ಟಡಕ್ಕೆ ಲಕ್ಷಾಂತರ ಜನ ಮುತ್ತಿಗೆ ಹಾಕಿದ್ದು ಗಮನಾರ್ಹವಾದ್ದು. ಪಕ್ಷ ಮತ್ತು ಎಲ್.ಡಿ.ಎಫ್. ಏರುತ್ತಿರುವ ಬೆಲೆಗಳ ಮತ್ತು ಮಂತ್ರಿಮಂಡಲದ ಭ್ರಷ್ಟಾಚಾರದ ವಿರುದ್ಧ, ಹಾಗೂ ಆಹಾರ ಭದ್ರತೆಗಾಗಿ ಹೋರಾಟಗಳನ್ನು ನಡೆಸಿದೆ. ಲೋಕಸಭಾ ಚುನಾವಣೆಯಲ್ಲಿ ಎಲ್.ಡಿ.ಎಫ್.ಗೆ ತನ್ನ ಸ್ಥಿತಿ ಉತ್ತಮ ಪಡಿಸಲು ಸಾಧ್ಯವಾಯಿತು. ಆದರೆ ಆರ್.ಎಸ್.ಪಿ.ಯ 'ಪಕ್ಷಾಂತರ' ಒಂದು ಹಿನ್ನಡೆ ಆಯಿತು. ಎಲ್.ಡಿ.ಎಫ್. ಗಟ್ಟಿಗೊಳಿಸಲು ಕ್ರಮ ವಹಿಸಬೇಕು.

2.78 ಕಳೆದ ಪಕ್ಷದ ಮಹಾಧಿವೇಶನದ ನಂತರ ತ್ರಿಪುರಾ ರಾಜ್ಯದಲ್ಲಿ ಪಕ್ಷ ಮತ್ತು ಎಡ ನೆಲೆ ವಿಸ್ತಾರವಾಗಿದೆ. ಫೆಬ್ರುವರಿ 2013ರಲ್ಲಿ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಸತತವಾಗಿ 5ನೇ ಬಾರಿಗೆ ಎಡರಂಗ ನಿರ್ಣಾಯಕ ಜಯ ಗಳಿಸಿದೆ. ಎಡರಂಗ ಶೇ. 52.3 ಮತ ಗಳಿಸಿ 60ರಲ್ಲಿ 50 ಸೀಟುಗಳನ್ನು ಗೆದ್ದುಕೊಂಡಿತು. ಜುಲೈ 2014ರಲ್ಲಿ ನಡೆದ ಮೂರು–ಹಂತಗಳ ಪಂಚಾಯತ್ ಚುನಾವಣೆಗಳಲ್ಲೂ ವ್ಯಾಪಕ ಜಯಗಳಿಸಿದೆ. ಎಡ ರಂಗ ಶೇ. 95 ಗ್ರಾಮ ಪಂಚಾಯತುಗಳಲ್ಲಿ, ಶೇ. 98.3 ಪಂಚಾಯತು ಸಮಿತಿಗಳಲ್ಲಿ ಮತ್ತು ಶೇ, 99 ಜಿಲ್ಲಾ ಪರಿಷತ್ ಸೀಟುಗಳಲ್ಲಿ ಜಯಗೊಳಿಸಿದೆ. 2014ರ ಲೋಕಸಭಾ ಚುನಾವಣೆಗಳಲ್ಲಿ ಎರಡೂ ಸೀಟುಗಳನ್ನು ಶೇ. 64.4 ಮತ ಗಳಿಸಿ ಭಾರಿ ಅಂತರದಿಂದ ಗೆದ್ದುಕೊಂಡಿದೆ. ಎಡರಂಗದ ಉತ್ತಮ ಕೆಲಸಗಳು, ಎಲ್ಲಾ ರಾಜಕೀಯ ಮತ್ತು ಸಾಮೂಹಿಕ ವಿಷಯಗಳಲ್ಲಿ ಪಕ್ಷದ ಮಧ್ಯಪ್ರವೇಶಗಳು ಪಕ್ಷದ ಪ್ರಭಾವವನ್ನು ವಿಸ್ತರಿಸಲು ಸಹಾಯಕವಾಗಿವೆ. ಇದನ್ನು ಕ್ರೋಢಿಕರಿಸಲು ಕ್ರಮ ವಹಿಸಬೇಕಾಗಿದೆ. ಕೇಂದ್ರದ ಬಿಜೆಪಿ ಸರಕಾರದಿಂದ ಎಡರಂಗ ಸರಕಾರದ ಮೇಲೆ ಬರುವ ದಾಳಿಗಳಿಂದ ರಕ್ಷಣೆಗೆ ಆ ಬಗ್ಗೆ ಎಚ್ಚರದಿಂದ ಇರಬೇಕಾಗಿದೆ.

## ಪಕ್ಷವನ್ನು ಬಲಪಡಿಸಿ ಮತ್ತು ವಿಸ್ತರಿಸಿ

2.79 20ನೇ ಮಹಾಧಿವೇಶನ ಈ ರೀತಿ ಹೇಳಿತ್ತು :

"ಎಡ ಪಕ್ಷಗಳು ಗಂಭೀರ ಚುನಾವಣಾ ಹಿನ್ನಡೆಗಳನ್ನು ಅನುಭವಿಸಿರುವ, ಪಕ್ಷದ ಅತ್ಯಂತ ಪ್ರಬಲ ನೆಲೆಯಾದ ಪಶ್ಚಿಮ ಬಂಗಾಳದಲ್ಲಿ ಪಕ್ಷ ತೀವ್ರ ದಾಳಿಗೆ ಒಳಗಾಗಿರುವ, ಇಂದಿನ ಸನ್ನಿವೇಶದಲ್ಲಿ, ಪಕ್ಷದ ನೆಲೆ ಮತ್ತು ಪ್ರಭಾವವನ್ನು ಇತರ ರಾಜ್ಯಗಳಲ್ಲಿ ವಿಸ್ತರಿಸುವುದು ಅತ್ಯಂತ ಪ್ರಮುಖ ವಿಚಾರವಾಗಿದೆ. ಇದನ್ನು ಸಾಧಿಸಲು, ಪಕ್ಷದ ಸ್ವತಂತ್ರ ಪಾತ್ರವನ್ನು ಬಲಪಡಿಸುವುದು ಮತ್ತು ವಿಸ್ತರಿಸುವುದರ ಅಗತ್ಯವಿದೆ. ಪಕ್ಷವನ್ನು ಮುನ್ನಡೆಸಲು ಇದು ಅತ್ಯಗತ್ಯ. ಜನತೆಯನ್ನು ಸಕ್ರಿಯಗೊಳಿಸಲು ಹಾಗೂ ಅವರ ಪ್ರಜ್ಞೆಯನ್ನು ಚಳುವಳಿಗಳು ಮತ್ತು ಹೋರಾಟಗಳಿಗೆ ಸೇರುವಂತೆ ಎತ್ತರಿಸಲು, ರಾಜಕೀಯ, ಆರ್ಥಿಕ ಮತ್ತು

ಸಾಮಾಜಿಕ ವಿಷಯಗಳಲ್ಲಿ ಪಕ್ಷದ ಸ್ವತಂತ್ರ ಕಾರ್ಯಾಚರಣೆಗಳು ಬೇಕು. ಸಾಮೂಹಿಕ ಸಂಘಟನೆಗಳು ಜನತೆಯನ್ನು ಅಣಿ ನೆರೆಸುವ ಮತ್ತು ಸಂಘಟಿಸುವ ಸ್ವತಂತ್ರ ವೇದಿಕೆಗಳಾಗಬೇಕು. ಅವು ಸಂಘಟನೆಯ ಹೊರಗಿರುವ ಜನಸಮೂಹಗಳನ್ನು ತೆಕ್ಕೆಗೆ ತೆಗೆದುಕೊಳ್ಳುವ ವ್ಯಾಪಕ ನೆಲೆಯ ಚಳುವಳಿಗಳಿಗೂ ವೇದಿಕೆಗಳಾಗಬೇಕು." (ಪ್ಯಾರಾ 2.140)

2.80 ಇದು ಇಂದಿಗೂ ಪ್ರಸ್ತುತ ಮತ್ತು ಅದರ ಪ್ರಸ್ತುತತೆ ಇಂದಿನ ಪರಿಸ್ಥಿತಿಯಲ್ಲಿ, ಅದರಲ್ಲೂ ವಿಶೇಷವಾಗಿ 2014ರ ಲೋಕಸಭಾ ಚುನಾವಣೆಗಳ ನಂತರ, ಇನ್ನಷ್ಟು ಹೆಚ್ಚಾಗಿದೆ. ಸಂಸತ್ತಿನಲ್ಲಿ ನಮ್ಮ ಬಲ ಕುಗ್ಗಿರುವ ಮತ್ತು ಸಾಮೂಹಿಕ ನೆಲೆ ದುರ್ಬಲಗೊಳ್ಳುತ್ತಿರುವ ಸಂದರ್ಭದಲ್ಲಿ, ಪಕ್ಷದ ಸ್ವತಂತ್ರ ಪಾತ್ರವನ್ನು ವಿಸ್ತರಿಸಿ, ಅದರ ಬಲ ಹಾಗೂ ಸಾಮೂಹಿಕ ನೆಲೆಯನ್ನು ಹೆಚ್ಚಿಸುವುದು ಅತ್ಯವಶ್ಯಕ. ವರ್ಗ ಮತ್ತು ಸಾಮೂಹಿಕ ಚಳುವಳಿಗಳನ್ನು ಬೆಳೆಸಲು ಪಕ್ಷ ಒತ್ತು ನೀಡಬೇಕು.ನವ–ಉದಾರವಾದಿ ನೀತಿಗಳ ವಿರುದ್ಧ ಹೋರಾಟಗಳ ಜತೆಗೆ ಕೊಂಡಿಯೆಂದರೆ ಸ್ಥಳೀಯ ವಿಷಯಗಳ ಮೇಲೆ ಸತತ ಹೋರಾಟಗಳನ್ನು ಬೆಳೆಸುವುದು

2.81 ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ವ್ಯಾಪಕ ನೆಲೆಯ ಚಳುವಳಿಗಳು ಮತ್ತು ಹೋರಾಟಗಳನ್ನು ಹರಿಯ ಬಿಡಲಿಕ್ಕಾಗಿ ಅವುಗಳ ಸ್ವತಂತ್ರ ಕಾರ್ಯನಿರ್ವಹಣೆಯನ್ನು ಬೆಳೆಸಲು ಪಕ್ಷ ನಾಯಕತ್ವ ನೀಡಬೇಕು

2.82 ಬೂರ್ಜ್ವಾ–ಭೂಮಾಲಕ ಪಕ್ಷಗಳ ರಾಜಕೀಯ ಮತ್ತು ಸಿದ್ಧಾಂತಗಳಿಗೆ ಎದುರಾಗಿ ಸಿಪಿಐ(ಎಂ)ನ ರಾಜಕೀಯ ಧೋರಣೆ ಮತ್ತು ಎಡ–ಪ್ರಜಾಸತ್ತಾತ್ಮಕ ಕಾರ್ಯಕ್ರಮದೊಂದಿಗೆ ಪ್ರತಿ–ಪ್ರಹಾರ ಮಾಡಲು ಒಂದು ದಿಟ್ಟ ಮುತುವರ್ಜಿ ವಹಿಸಬೇಕಾಗುತ್ತದೆ. ಪಕ್ಷ ಸಾಮಾಜಿಕ ಪ್ರಶ್ನೆಗಳಲ್ಲಿ ಮಧ್ಯಪ್ರವೇಶ ಮಾಡಿ ಹೋರಾಟಗಳನ್ನು ಕೈಗೆತ್ತಿಕೊಳ್ಳಬೇಕು.

2.83 ಆಳುವ ವರ್ಗಗಳ ರಾಜಕಾರಣ ಮತ್ತು ಸಿದ್ಧಾಂತವನ್ನು ಎದುರಿಸಿ ಹಿಮ್ಮೆಟ್ಟಿಸಲು ಪಕ್ಷ ತನ್ನ ಕಾರ್ಯಕರ್ತರನ್ನು ರಾಜಕೀಯವಾಗಿ ಸೈದ್ಧಾಂತಿಕವಾಗಿ ಸಜ್ಜುಗೊಳಿಸಬೇಕು.

2.84 ರಾಜಕೀಯ ಮತ್ತು ಸೈದ್ಧಾಂತಿಕ ಕರ್ತವ್ಯಗಳನ್ನು ಕೈಗೆತ್ತಿಕೊಳ್ಳಲು ಮತ್ತು ಸಮರಶೀಲ ಹೋರಾಟಗಳನ್ನು ನಡೆಸುವ ಸಾಮರ್ಥ್ಯವನ್ನು ಹೊಂದಲು ಪಕ್ಷ ಸಂಘಟನೆಯನ್ನು ನವೀಕರಿಸಬೇಕು ಮತ್ತು ಅದಕ್ಕೆ ಹೊಸ ದಿಗ್ದರ್ಶನ ನೀಡಬೇಕು

## ಎಡ ಮತ್ತು ಪ್ರಜಾಸತ್ತಾತ್ಮಕ ರಂಗ

2.85 ಎಡ–ಪ್ರಜಾಸತ್ತಾತ್ಮಕ ರಂಗ ಬಿಜೆಪಿ, ಕಾಂಗ್ರೆಸ್ ಮತ್ತು ಇತರ ಬೂರ್ಜ್ವಾ–ಭೂಮಾಲಕ ಶಕ್ತಿಗಳಿಗೆ ನಿಜವಾದ ಬದಲಿ. ಇದು ಜನತಾ ಪ್ರಜಾಪ್ರಭುತ್ವ ರಂಗಕ್ಕೆ ಅಣಿ ನೆರೆಸಬೇಕಾದ ವರ್ಗಗಳು ಇರುವ ರಂಗ. ಆದ್ದರಿಂದ ಈ ರಂಗ ಬರಿಯ

ಚುನಾವಣಾ ಮೈತ್ರಿಗಾಗಿ ಅಥವಾ ಸರಕಾರ ರಚಿಸಲು ಇರುವ ರಂಗವಲ್ಲ. ಬದಲಾಗಿ ಅದು ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿ ಕೂಲಿಕಾರರು, ಮಧ್ಯಮ ವರ್ಗಗಳು, ಕುಶಲಕರ್ಮಿಗಳು, ಸಣ್ಣ ಅಂಗಡಿದಾರರು, ವ್ಯಾಪಾರಿಗಳು ಇತ್ಯಾದಿಗಳನ್ನು ಪ್ರತಿನಿಧಿಸುವ ಹೋರಾಟದ ಶಕ್ತಿಗಳ ರಂಗವಾಗಿ ಹೊಮ್ಮಬೇಕು.

2.86 ಈಗಿನ ಸ್ಥಿತಿಯಲ್ಲಿ, ಎಡ–ಪ್ರಜಾಸತ್ತಾತ್ಮಕ ರಂಗಕ್ಕೆ ಸೆಳೆಯಬಹುದಾದ ಮತ್ತು ಅದರ ಜೀವಕಣ ಆಗಬಹುದಾದದ್ದು ಅಂದರೆ, – ಎಡ ಪಕ್ಷಗಳು ಮತ್ತು ಅವುಗಳ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳು; ಎಡ ಗುಂಪುಗಳು ಮತ್ತು ಬುದ್ಧಿಜೀವಿಗಳು; ವಿವಿಧ ಪಕ್ಷಗಳು ಮತ್ತು ಕಾಂಗ್ರೆಸೇತರ ಜಾತ್ಯತೀತ ಪಕ್ಷಗಳ ಪ್ರಜಾಸತ್ತಾತ್ಮಕ ವಿಭಾಗಗಳು ಮುಂತಾದವುಗಳಲ್ಲಿ ಹರಡಿಹೋಗಿರುವ ಸಮಾಜವಾದಿಗಳು; ಆದಿವಾಸಿ, ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಪ್ರಜಾಸತ್ತಾತ್ಮಕ ಸಂಘಟನೆಗಳು; ಮತ್ತು ದಮನಿತ ಜನವಿಭಾಗಗಳ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುತ್ತಿರುವ ಸಾಮಾಜಿಕ ಚಳುವಳಿಗಳು. ಈ ಎಲ್ಲಾ ಶಕ್ತಿಗಳನ್ನು ಬೂರ್ಜ್ವಾ–ಭೂಮಾಲಕ ಪಕ್ಷಗಳಿಂದ ವಿಭಿನ್ನವಾದ ಮತ್ತು ವಿರುದ್ಧವಾದ ಕಾರ್ಯಕ್ರಮದ ಆಧಾರದ ಮೇಲೆ ಇರುವ ಜಂಟಿ ವೇದಿಕೆಗೆ ಸೆಳೆಯುವ ಮೂಲಕ ಮಾತ್ರವೇ, ಎಡ–ಪ್ರಜಾಸತ್ತಾತ್ಮಕ ರಂಗದತ್ತ ನಡೆ ನಿರ್ದಿಷ್ಟ ಆಕಾರ ಪಡೆಯಬಲ್ಲುದು. ಸಾಮಾನ್ಯ ಹಕ್ಕೊತ್ತಾಯಗಳ ಪಟ್ಟಿ ಇರುವ ಎಲ್ಲಾ ವಿವಿಧ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಸಾಮಾನ್ಯ ವೇದಿಕೆ ಈ ನಿಟ್ಟಿನಲ್ಲಿ ಒಂದು ಹೆಜ್ಜೆ.

2.87 ಎಡ–ಪ್ರಜಾಸತ್ತಾತ್ಮಕ ರಂಗ ಕಟ್ಟುವ ಹೋರಾಟ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಡೆಯುವುದು. ಬೇರೆ ಬೇರೆ ರೀತಿಯ ಎಡ ಮತ್ತು ಪ್ರಜಾಸತ್ತಾತ್ಮಕ ಕೂಡಿಕೆಗಳು ರಾಜ್ಯಗಳಲ್ಲಿ ಹೊಮ್ಮಬಹುದು, ಆದರೆ ಅವು ಅಖಿಲ–ಭಾರತ ಮಟ್ಟದಲ್ಲಿ ಎಡ–ಪ್ರಜಾಸತ್ತಾತ್ಮಕ ರಂಗ ಕಟ್ಟುವಲ್ಲಿ ತಮ್ಮ ಕೊಡುಗೆ ನೀಡುತ್ತವೆ. ಪಕ್ಷ ಅಂಗೀಕರಿಸುವ ಎಲ್ಲಾ ಕಾರ್ಯತಂತ್ರಗಳ ಕೇಂದ್ರ ಬಿಂದು ಒಂದು ಪ್ರಬಲ ಎಡ–ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟುವುದಕ್ಕಾಗಿಯೇ ಇರಬೇಕು.

## ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮ

2.88 ಎಡ–ಪ್ರಜಾಸತ್ತಾತ್ಮಕ ಕಾರ್ಯಕ್ರಮ ಬೂರ್ಜ್ವಾ–ಭೂಮಾಲಕ–ನವ–ಉದಾರವಾದಿ ಚೌಕಟ್ಟಿಗೆ ಪರ್ಯಾಯವಾದ ನೀತಿಗಳನ್ನು ಒಳಗೊಂಡದ್ದು. ಅದು ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿ ಕೂಲಿಕಾರರು, ಗ್ರಾಮೀಣ ಕಾರ್ಮಿಕರು, ಕುಶಲಕರ್ಮಿಗಳು, ಅಂಗಡಿದಾರರು, ಮಧ್ಯಮ ವರ್ಗ, ಬುದ್ಧಿಜೀವಿಗಳು – ಇವರೆಲ್ಲರ ತಕ್ಷಣದ ಹಕ್ಕೊತ್ತಾಯಗಳನ್ನು ಒಳಗೊಂಡಿರುತ್ತದೆ. ಈ ಕಾರ್ಯಕ್ರಮದಲ್ಲಿ ಅಡಕವಾಗಿರುವ ಹಕ್ಕೊತ್ತಾಯಗಳು ಮತ್ತು ವಿಷಯಗಳ ಮೇಲೆ, ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ರಾಜಕೀಯ ಹೋರಾಟಗಳು, ಪ್ರಚಾರಾಂದೋಲನಗಳು ಹಾಗೂ ಸಾಮೂಹಿಕ ಚಳುವಳಿಗಳು ಆಧಾರಿತವಾಗಿರುತ್ತವೆ.

2.89 ಕಾರ್ಯಕ್ರಮ ಇವೆಲ್ಲವನ್ನು ಒಳಗೊಂಡಿರಬೇಕು:

1. ಜಾಗತಿಕ ಆರ್ಥಿಕತೆ ಜತೆ ಸಂಬಂಧವಿಟ್ಟುಕೊಂಡೂ ಸ್ವಾವಲಂಬನೆಯನ್ನು ಉತ್ತೇಜಿಸುವ, ಉತ್ಪಾದನಾ ಶಕ್ತಿಗಳನ್ನು ಬೆಳೆಸುವ, ಅತ್ಯಂತ ಹೆಚ್ಚು ಉದ್ಯೋಗ ಸೃಷ್ಟಿಸುವ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡುವ ಅಭಿವೃದ್ಧಿಯ ಹಾದಿಗಾಗಿ. ಯೋಜಿತ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ ಇರಬೇಕು.

2. ಸಮಗ್ರ ಭೂಸುಧಾರಣೆಗಾಗಿ ಮತ್ತು ಕೃಷಿ ಸಂಬಂಧಗಳ ಪ್ರಜಾಸತ್ತಾತ್ಮಕ ಪರಿವರ್ತನೆಗಾಗಿ; ಸಹಕಾರಿ ಕೃಷಿ ಮತ್ತು ಮಾರುಕಟ್ಟೆಗಾಗಿ

3. ಏಕಸ್ವಾಮ್ಯಗಳ ಮೇಲೆ ನಿಯಂತ್ರಣ, ಅತಿಮುಖ್ಯ ಕೈಗಾರಿಕೆ ಮತ್ತು ಮೂಲಸೇವೆಗಳಲ್ಲಿ ಸಾರ್ವಜನಿಕ ಕ್ಷೇತ್ರಗಳಿಗೆ ಉತ್ತೇಜನ, ಸಂಪತ್ತಿನ ಪುನರ್ಹಂಚಿಕೆಗಾಗಿ ಹಣಕಾಸು ಮತ್ತು ತೆರಿಗೆ ಕ್ರಮಗಳು

4. ಪ್ರಭುತ್ವ ಮತ್ತು ಧರ್ಮವನ್ನು ಪ್ರತ್ಯೇಕಿಸುವ ಜಾತ್ಯತೀತೆಯ ಮೂಲ ನೀತಿ ಸಂವಿಧಾನದಲ್ಲಿ ಡಕಗೊಳ್ಳಬೇಕು. ಕೇಂದ್ರ–ರಾಜ್ಯಗಳ ಸಂಬಂಧಗಳ ಪುನರ್ಸಂಘಟನೆ ಮಾಡಿದ ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ಗಣರಾಜ್ಯ

5. **ಕಾರ್ಮಿಕ ವರ್ಗ:** ರೂ. 15 ಸಾವಿರಕ್ಕೆ ಕಡಿಮೆ ಇರದ ಮತ್ತು ಕೂಲಿಯನ್ನು ಬಳಕೆದಾರ ಬೆಲೆ ಸೂಚ್ಯಂಕಕ್ಕೆ ತಳುಕು ಹಾಕುವುದು; ಗುಪ್ತ ಮತದಾನದ ಮೇಲೆ ಆಧಾರಿತ ಟ್ರೇಡ್ ಯೂನಿಯನ್ ಮಾನ್ಯತೆ; ಸಾಮಾಜಿಕ ಭದ್ರತೆಯ ಗ್ಯಾರಂಟಿ ಮತ್ತು ಮ್ಯಾನೆಜ್‌ಮೆಂಟಿನಲ್ಲಿ ಕಾರ್ಮಿಕರ ಪಾಲ್ಗೊಳ್ಳುವಿಕೆ; ಕಾಂಟ್ರಾಕ್ಟ್ ಉದ್ಯೋಗ ಪದ್ಧತಿಯ ಕೊನೆ.

6. **ರೈತಾಪಿ:** ರೈತ ಕೃಷಿಯನ್ನು ಕಾರ್ಯಸಾಧ್ಯಗೊಳಿಸಲು ಮತ್ತು ಒಕ್ಕಲುತನ ಲಾಭದಾಯಕವಾಗುವಂತೆ ಕ್ರಮಗಳು. ಕೃಷಿಯೇತರ ವಾಣಿಜ್ಯ ಉದ್ದೇಶಗಳಿಗೆ ಭೂಸ್ವಾಧೀನದಿಂದ ಕೃಷಿ ಜಮೀನಿಗೆ ರಕ್ಷಣೆ; ಕಾರ್ಪೊರೆಟ್ ಕೃಷಿ ಮತ್ತು ಖಾಸಗೀಕರಣಕ್ಕೆ ಪ್ರತಿಬಂಧ

7. **ಕೃಷಿ ಕೂಲಿಕಾರರು:** ಕೃಷಿ ಕೂಲಿಕಾರರ ಕೂಲಿ ಮತ್ತು ಸಾಮಾಜಿಕ ಭದ್ರತೆಗೆ ಕೇಂದ್ರೀಯ ಕಾನೂನು; ಗ್ರಾಮೀಣ ಕಾರ್ಮಿಕರಿಗೆ ಮನೆ–ನಿವೇಶನ ಮತ್ತು ಮನೆಗಳು

8. **ಶಿಕ್ಷಣ ಮತ್ತು ವಿದ್ಯಾರ್ಥಿಗಳು:** ಶಿಕ್ಷಣದ ಮೇಲೆ ಸಾರ್ವಜನಿಕ ವೆಚ್ಚ ಜಿಡಿಪಿಯ ಶೇ. 6 ರಷ್ಟು; ಸೆಕೆಂಡರಿ ಹಂತದ ವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ವ್ಯವಸ್ಥೆ; ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಪ್ರಮಾಣ ಮತ್ತು ಗುಣಮಟ್ಟ

ಎರಡರಲ್ಲೂ ಬಲಪಡಿಸುವುದು; ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕ ಮತ್ತು ಪಠ್ಯಕ್ರಮದ ಮೇಲೆ ನಿಬಂಧನೆಗಳು

9. **ಯುವಜನ :** ಸಂವಿಧಾನದಲ್ಲಿ ಉದ್ಯೋಗದ ಹಕ್ಕು ಮೂಲಭೂತ ಹಕ್ಕು. ಯುವಜನರಿಗೆ – ಕ್ರೀಡೆ, ಸಾಂಸ್ಕೃತಿಕ ಮತ್ತು ಕೌಶಲ್ಯ – ತರಬೇತಿ ಸೇವೆಗಳನ್ನು ಒದಗಿಸುವುದು

10. **ಆರೋಗ್ಯ :** ಆರೋಗ್ಯದ ಮೇಲಿನ ಸಾರ್ವಜನಿಕ ವೆಚ್ಚ ಜಿಡಿಪಿಯ ಶೇ.5ಕ್ಕೆ ಏರಿಸುವುದು. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ವಿಸ್ತರಿಸುವುದು; ಖಾಸಗಿ ಆರೋಗ್ಯ ಸೇವಾ ಕೇಂದ್ರಗಳ ನಿಬಂಧನೆ; ವೆಚ್ಚ ಆಧಾರಿತ ಬೆಲೆ ನಿರ್ಧಾರದ ಸೂತ್ರದ ಅನುಸಾರ ಅಗತ್ಯ ಔಷಧಿಗಳ ಬೆಲೆ ನಿಯಂತ್ರಣ

11. **ಪರಿಸರ:** ಪರಿಣಾಮಕಾರಿ ನಿಬಂಧನೆಗಳ ಮೂಲಕ ಗ್ರೀನ್ ಹೌಸ್ ಅನಿಲಗಳ ಕಡಿತಕ್ಕೆ, ಎಲ್ಲಾ ಉತ್ಪಾದನೆ ಮತ್ತು ಬಳಕೆಯ ಕ್ಷೇತ್ರಗಳಲ್ಲಿ ಶಕ್ತಿಯ ದಕ್ಷತೆಗೆ – ಕ್ರಮಗಳನ್ನು ವಹಿಸುವುದು. ನವೀಕರಿಸಬಹುದಾದ ಶಕ್ತಿ ಮೂಲಗಳಿಗೆ ಉತ್ತೇಜನ; ವಿದ್ಯುತ್ ಅಸಮಾನತೆಯನ್ನು ಕಡಿಮೆ ಮಾಡುವುದು; ನದಿಗಳು ಮತ್ತು ಇತರ ಜಲಮೂಲಗಳ ಮಾಲಿನ್ಯ ತಡೆಗಟ್ಟುವುದು. ನೀರಿನ ಖಾಸಗೀಕರಣಕ್ಕೆ ತಡೆ

12. **ಜನತೆಯ ಕಲ್ಯಾಣ :** ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಆಹಾರ ಧಾನ್ಯ ಸೇರಿದಂತೆ ಅಗತ್ಯ ಸರಕುಗಳ ಸರಬರಾಜು. ಸಾರ್ವತ್ರಿಕ ಪೆನ್ಶನ್ ವ್ಯವಸ್ಥೆ. ಸುರಕ್ಷಿತ ಕುಡಿಯುವ ನೀರು ಮತ್ತು ಶೌಚ ವ್ಯವಸ್ಥೆ. ನಗರದ ಬಡವರ ವಸತಿ

13. **ಮಹಿಳೆಯರು :** ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗ ಮೀಸಲಾತಿ; ಮಹಿಳೆಯರು ಮತ್ತು ಮಕ್ಕಳ ಮೇಲೆ ಆಗುತ್ತಿರುವ ಎಲ್ಲಾ ಸ್ವರೂಪದ ಹಿಂಸಾಚಾರಗಳನ್ನು ತಡೆಯಲು, ಮಟ್ಟ ಹಾಕಲು ಮತ್ತು ಅಪರಾಧಿಗಳನ್ನು ಶಿಕ್ಷಿಸಲು ಕ್ರಮಗಳನ್ನು ಕೈಗೊಳ್ಳುವುದು

14. **ದಲಿತರು :** ಜಾತಿ ವ್ಯವಸ್ಥೆ ಮತ್ತು ಜಾತಿ ತಾರತಮ್ಯಗಳ ಎಲ್ಲಾ ರೂಪಗಳನ್ನು ಕೊನೆಗೊಳಿಸುವುದು; ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯಗಳು ಮತ್ತು ಅಸ್ಪೃಶ್ಯತೆ ಆಚರಣೆ ಮಾಡಿದವರಿಗೆ ಕಠಿಣ ಶಿಕ್ಷೆ; ಹಿಂದಿನಿಂದ ಬಾಕಿ ಇರುವ ಮೀಸಲು ಸೀಟುಗಳು, ಉದ್ಯೋಗಗಳು ಮತ್ತು ಬಡ್ತಿಗಳ ಭರ್ತಿ ಮಾಡುವುದು; ದಲಿತ ಕ್ರಿಶ್ಚಿಯನ್ನರಿಗೆ ಪರಿಶಿಷ್ಟ ಜಾತಿ ಸ್ಥಾನಮಾನ; ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ

15. **ಆದಿವಾಸಿಗಳು :** ಆದಿವಾಸಿಗಳ ಭೂಹಕ್ಕುಗಳ ರಕ್ಷಣೆ ಮತ್ತು ಕಾನೂನುಬಾಹಿರವಾಗಿ ಅವರಿಂದ ಕಿತ್ತುಕೊಂಡ ಭೂಮಿಯನ್ನು ಅವರಿಗೆ ವಾಪಸು ಆಡುವುದು; ಅರಣ್ಯ ರಕ್ಷಣೆ ಕಾನೂನನ್ನು ಪೂರ್ಣವಾಗಿ ಜಾರಿ ಮಾಡುವುದು; ಸಣ್ಣ ಅರಣ್ಯ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ.

16. **ಅಲ್ಪಸಂಖ್ಯಾತರು :** ಅಲ್ಪಂಖ್ಯಾತರ ಹಕ್ಕುಗಳ ರಕ್ಷಣೆ. ಮುಸ್ಲಿಂ ಸಮುದಾಯದ ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಕಲ್ಯಾಣಕ್ಕೆ ವಿಶೇಷ ವ್ಯವಸ್ಥೆ

17. **ಮಕ್ಕಳ ಹಕ್ಕುಗಳು :** ಬಾಲ ದುಡಿಮೆಯ ಎಲ್ಲಾ ರೂಪಗಳನ್ನು ನಿಷೇಧಿಸುವುದು. 1–6 ವರ್ಷ ವಯಸ್ಸಿನ ಮಕ್ಕಳಿಗೆ ಐಸಿಡಿಎಸ್/ಶಿಶುಪಾಲನೆಯ ಸಾರ್ವತ್ರೀಕರಣ

18. **ಅಂಗವಿಕಲರು :** ಹಕ್ಕು ಆಧಾರಿತ ಚೌಕಟ್ಟು, ಅಂಗವಿಕಲತೆಯ ಆಧಾರದ ಮೇಲೆ ತಾರತಮ್ಯ ಮಾಡುವುದರ ನಿಷೇಧಕ್ಕೆ ಸಂವಿಧಾನ ತಿದ್ದಪಡಿ; ಸಮಾನ ಅವಕಾಶಗಳು ಮತ್ತು ಸಮತಟ್ಟು ಮೈದಾನ; ಎಲ್ಲಾ ಸಾರ್ವಜನಿಕ ಸ್ಥಳಗಳಿಗೆ ನಿರ್ಬಂದವಿಲ್ಲದ ಪ್ರವೇಶ ಅವಕಾಶ

19. **ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಚುನಾವಣಾ ಸುಧಾರಣೆಗಳು :** ಆಂಶಿಕ ಪಟ್ಟಿ ಜತೆ ಪ್ರಮಾಣಾತ್ಮಕ ಪ್ರಾತಿನಿಧ್ಯ ಚುನಾವಣಾ ಪದ್ಧತಿಯ ಆರಂಭ; ಚುನಾವಣಾ ಪರಿಕರಗಳ ವೆಚ್ಚ ಸರಕಾರವೇ ಭರಿಸುವುದು; ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆ ರದ್ದತಿ; ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆಯ ಪರಿಷ್ಕಾರ; ಐ.ಪಿ.ಸಿ.ಯಿಂದ ದೇಶದ್ರೋಹದ ಕಲಮುಗಳನ್ನು ತೆಗೆದು ಹಾಕುವುದು; ಗಲ್ಲು ಶಿಕ್ಷೆಯ ರದ್ದತಿ

20. **ಸಂಸ್ಕೃತಿ ಮತ್ತು ಮಾಧ್ಯಮ :** ಮಾರುಕಟ್ಟೆ ಪ್ರೇರಿತ ಮೌಲ್ಯಗಳ ಭ್ರಷ್ಟ ಪ್ರಭಾವದಿಂದ ಮುಕ್ತವಾದ ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಬೆಳೆಸುವುದು. ಪ್ರತಿಗಾಮಿ ಕೋಮುವಾದಿ ಮತ್ತು ಮೂಢನಂಬಿಕೆಗಳನ್ನು ತಡೆಗಟ್ಟಿ ಜಾತ್ಯತೀತ ಮತ್ತು ಸಮ್ಮಿಶ್ರ ಸಂಸ್ಕೃತಿಯನ್ನು ಬೆಳೆಸುವುದು. ಜಾನಪದ ಕಲೆ ಮತ್ತು ಪರಂಪರೆಗಳ ಪೋಷಣೆ; ಸಾರ್ವಜನಿಕ ಮಾಧ್ಯಮ ಸೇವೆಗಳನ್ನು ಬಲಪಡಿಸುವುದು; ಮಾಧ್ಯಮದ ಹಲವು ರೂಪಗಳ ಒಡೆತನಕ್ಕೆ ನಿಷೇಧ; ಮಾಧ್ಯಮಗಳ ನಿಬಂಧನೆಗೆ ಸ್ವತಂತ್ರ ಪ್ರಾಧಿಕಾರ

## 2.90 ಕರ್ತವ್ಯಗಳು

1. ಬಲಪಂಥೀಯ ಆಕ್ರಮಣದ ವಿರುದ್ಧ ಹೋರಾಟವನ್ನು ಧೈರ್ಯದಿಂದ ಕೈಗೆತ್ತಿಕೊಳ್ಳಬೇಕು. ನವ–ಉದಾರವಾದಿ ಸವಾರಿಯ ಭಾಗವಾಗಿರುವ ಮೋದಿ ಸರಕಾರದ ಆರ್ಥಿಕ ನೀತಿಗಳನ್ನು ದೃಢವಾಗಿ ವಿರೋಧಿಸಬೇಕು. ದುಡಿಯುವ ಜನರ ಮೇಲೆ ನವ–ಉದಾರವಾದಿ ದಾಳಿಯ ಎಲ್ಲಾ ಅವತಾರಗಳಿಗೆ ದುಡಿಯುವ

ಜನರ ವಿವಿಧ ವಿಭಾಗಗಳನ್ನು ಸಂಘಟಿಸುವ ಹಾಗೂ ಅಣಿ ನೆರೆಸುವ ಮೂಲಕ ಪ್ರತಿರೋದ ಒಡ್ಡಬೇಕು.

2. ಬಿಜೆಪಿ–ಆರೆಸ್ಸೆಸ್ ಕೂಟದ ಹಿಂದುತ್ವ ಅಜೆಂಡಾವನ್ನು ರಾಜಕೀಯವಾಗಿ ಎದುರಿಸಿ ಹೋರಾಡಬೇಕು. ತಳ ಮಟ್ಟದಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಸಾಮಾಜಿಕ, ಸೈದ್ಧಾಂತಿಕ ಮತ್ತು ಶೈಕ್ಷಣಿಕ ವಲಯಗಳಲ್ಲಿ ಅದನ್ನು ಎದುರಿಸಿ ಹೋರಾಡಬೇಕು. ಜಾತ್ಯತೀತ ಮೌಲ್ಯಗಳ ರಕ್ಷಣೆ ಮತ್ತು ಕೋಮುವಾದಿ ಅಪಾಯದ ವಿರುದ್ಧ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಅತ್ಯಂತ ವ್ಯಾಪಕ ಅಣಿ ನೆರೆಸುವಿಕೆಗೆ ಮುಂದಾಗಬೇಕು.

3. ಪಕ್ಷ ಸಾಮ್ರಾಜ್ಯಶಾಹಿ–ವಿರೋಧಿ ಅಜೆಂಡಾವನ್ನು ಸ್ಥಿರವಾಗಿ ಮುನ್ನಡೆಸಬೇಕು. ಅಮೆರಿಕದ ಜತೆ ಹೆಚ್ಚುತ್ತಿರುವ ವ್ಯೂಹಾತ್ಮಕ ಸಂಬಂಧಗಳು ಮತ್ತು ಆಳುವ ವರ್ಗಗಳು ಅಮೆರಿಕದ ಒತ್ತಡಕ್ಕೆ ಬಲಿ ಬೀಳುವುದರ ವಿರುದ್ಧ ಜನರನ್ನು ಅಣಿ ನೆರೆಸುವುದು ಸೇರಬೇಕು. ಜಗತ್ತಿನಾದ್ಯಂತ ಎಲ್ಲಾ ಸಾಮ್ರಾಜ್ಯಶಾಹಿ–ವಿರೋಧಿ ಹೊರಾಟಗಳಿಗೆ ಬೆಂಬಲ ಕೊಡಬೇಕು.

4. ಸಾಮಾಜಿಕವಾಗಿ ದಮನಕ್ಕೊಳಗಾದ ಜನವಿಭಾಗಗಳು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ರಕ್ಷಿಸುವ ಪ್ರಯತ್ನವನ್ನು ಪಕ್ಷ ಇನ್ನಷ್ಟು ಬಿರುಸುಗೊಳಿಸಬೇಕು. ಮಹಿಳೆಯರ ಹಕ್ಕುಗಳ ರಕ್ಷಣೆಗೆ ಮತ್ತು ಅವರ ಮೇಲೆ ಹೆಚ್ಚುತ್ತಿರುವ ದಾಳಿಗಳ ವಿರುದ್ಧ ಪಕ್ಷ ನೇರವಾಗಿ ಮಧ್ಯಪ್ರವೇಶ ಮಾಡಬೇಕು.

5. ರಾಜಕಾರಣ ಬಲಪಂಥಿಯತೆಯತ್ತ ಜಾರುತ್ತಿರುವುದರಿಂದ ಬರುತ್ತಿರುವ ಸರ್ವಾಧಿಕಾರದ ಅಪಾಯದ ವಿರುದ್ಧ ಹೋರಾಟಕ್ಕಾಗಿ, ಪ್ರಜಾಸ್ತಾತ್ಮಕ ಹಕ್ಕುಗಳು, ಕಲಾವಿದರ ಸ್ವಾತಂತ್ರ್ಯ ಕಾಪಾಡಲು ಮತ್ತು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೇಲೆ ನಿರ್ಬಂಧಗಳನ್ನು ವಿರೋಧಿಸಲು ವ್ಯಾಪಕ ಜನವಿಭಾಗಗಳನ್ನು ಅಣಿ ನೆರೆಸಬೇಕು.

6. ಪಶ್ಚಿಮ ಬಂಗಾಳದಲ್ಲಿ ಪಕ್ಷ ಮತ್ತು ಎಡಪಂಥೀಯರ ಮೇಲೆ ನಡೆಯುತ್ತಿರುವ ಹಿಂಸಾಚಾರ ಮತ್ತು ದಾಳಿಗಳಿಂದ ರಕ್ಷಣೆಯ ಹೋರಾಟಕ್ಕೆ, ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವ ಅಖಿಲ ಭಾರತ ಪ್ರಚಾರಾಂದೋಲನದ ಬೆಂಬಲ ದೊರಕಬೇಕು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಗಾಮಿ ಶಕ್ತಿಗಳು ಮತ್ತು ಕೇಂದ್ರ ಸರಕಾರದ ಹಗೆತನದಿಂದ ತ್ರಿಪುರಾ ಎಡರಂಗ ಸರಕಾರವನ್ನು ಸುರಕ್ಷಿತವಾಗಿಡಲು ಮುಂದೆ ಬರಬೇಕು.

7. ಪಕ್ಷ ತನ್ನ ಸ್ವತಂತ್ರ ಪಾತ್ರ ಮತ್ತು ಸಾಮೂಹಿಕ ನೆಲೆಯನ್ನು ವಿಸ್ತರಿಸಲು ಮತ್ತು ಬಲಪಡಿಸಲು ಅತ್ಯಂತ ಹೆಚ್ಚಿನ ಗಮನ ನೀಡಬೇಕು. ವರ್ಗ ಮತ್ತು ಸಾಮೂಹಿಕ ಪ್ರಶ್ನೆಗಳ ಮೇಲೆ ಐಕ್ಯ ಕಾರ್ಯಾಚರಣೆಗೆ ಒತ್ತು ನೀಡಬೇಕು. ಬೂರ್ಜ್ವಾ

ಪಕ್ಷಗಳನ್ನು ಹಿಂಬಾಲಿಸುತ್ತಿರುವ ಜನಸಮೂಹಗಳನ್ನು ಸೆಳೆಯುವ ಐಕ್ಯ ಕಾರ್ಯಾಚರಣೆಗಳು ಮತ್ತು ಹೋರಾಟಗಳಿಗೆ ವರ್ಗ ಮತ್ತು ಸಾಮೂಹಿಕ ಸಂಘಟನೆಗಳು ಒತ್ತು ನೀಡಬೇಕು.

8. ಎಡ ಐಕ್ಯತೆ ಕಟ್ಟುವ ಮತ್ತು ವಿಸ್ತರಿಸುವ, ಎಡ–ಪ್ರಜಾಸತ್ತಾತ್ಮಕ ಕಾರ್ಯಕ್ರಮದ ಸುತ್ತ ದುಡಿಯುವ ಜನರನ್ನು ಅಣಿ ನೆರೆಸುವ ಮೂಲಕ ಎಡ–ಪ್ರಜಾಸತ್ತಾತ್ಮಕ ರಂಗ ರೂಪಿಸುವತ್ತ ಪ್ರಗತಿ ಸಾಧಿಸಬಹುದು.

## ಪ್ರಬಲ ಪಕ್ಷ ಕಟ್ಟಲು ಕರೆ

2.91 ದೇಶ ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿ, ಸಿಪಿಐ(ಎಂ)ನ್ನು ಕಟ್ಟಿ ಬಲಪಡಿಸುವುದು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಉಳ್ಳದ್ದು. ಇಂತಹ ಪ್ರಬಲ ಪಕ್ಷ ಕಟ್ಟುವತ್ತ ಮುಂದೆ ಸಾಗೋಣ:

- ಪಕ್ಷವನ್ನು ದುಡಿಯುವ ಜನರ ವಿವಿಧ ವಿಭಾಗಗಳ ಹೋರಾಟಗಳನ್ನು ಮುನ್ನಡೆಸುವ ಹುರುಪಿನ ಮತ್ತು ಸಮರಶೀಲ ಸಂಘಟನೆ ಮಾಡುವ ಮೂಲಕ
- ಪಕ್ಷದ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಸೈದ್ಧಾಂತಿಕ ಬುನಾದಿಯನ್ನು ಬಲಪಡಿಸುವ ಮೂಲಕ
- ನಮ್ಮ ಮುಂದಿರುವ ಕರ್ತವ್ಯಗಳನ್ನು ನಿರ್ವಹಿಸಲು ಸಂಘಟನೆಯನ್ನು ಬಲಪಡಿಸುವ ಮತ್ತು ಹೊಸ ರೂಪ ಕೊಡುವ ಮೂಲಕ

ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯ ಮತ್ತು ಸಮಾಜವಾದದತ್ತ ಮುನ್ನಡೆಯೋಣ!

ನವ–ಉದಾರವಾದ ಮತ್ತು ಬಹುಸಂಖ್ಯಾತವಾದಿ ಕೋಮುವಾದಗಳಿಂದ ಸರ್ವನಾಶದತ್ತ ಜಾರುತ್ತಿರುವ ದೇಶವನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ ಮಾತ್ರ ಕಾಪಾಡಬಲ್ಲುದು.

ಪ್ರಬಲ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವತ್ತ ಮುನ್ನಡೆಯೋಣ

21ನೇ ಮಹಾಧಿವೇಶನ ಈ ಸಂದೇಶವನ್ನು ಹೊತ್ತು ಜನತೆಯತ್ತ ಹೋಗಲು ಇಡೀ ಪಕ್ಷಕ್ಕೆ ಕರೆ ಕೊಡುತ್ತದೆ.

□□□□□□□

## ಕರಡು ರಾಜಕೀಯ ನಿರ್ಣಯಕ್ಕೆ ತಿದ್ದುಪಡಿಗಳನ್ನು ಕಳಿಸುವ ಕಾರ್ಯವಿಧಾನ ಈ ಕೆಳಗಿನಂತಿದೆ:

1. ಎಲ್ಲಾ ತಿದ್ದುಪಡಿಗಳಲ್ಲೂ ಪ್ಯಾರಾ ನಂಬರ್ ಹಾಗೂ ಸಾಲುಗಳ ನಂಬರ್ ನಮೂದಿಸಬೇಕು;
2. ತಿದ್ದುಪಡಿಗಳನ್ನು ಕಳಿಸುವ ಸಂಬಂಧಪಟ್ಟ ಸಂಗಾತಿ/ಘಟಕವು ಹೆಸರು/ಘಟಕದ ಹೆಸರನ್ನು ನಮೂದಿಸಬೇಕು;
3. ಮಾರ್ಚ್ 25, 2015 ರೊಳಗೆ ಈ ಕೆಳಗಿನ ವಿಳಾಸಕ್ಕೆ ತಲುಪಬೇಕು;
4. ಅಂಚೆ/ಕುರಿಯರ್ ಮೂಲಕ ಕಳಿಸುವವರು ಈ ಕೆಳಗಿನ ವಿಳಾಸಕ್ಕೆ ಕಳಿಸಬೇಕು:

   **Communist Party of India (Marxist)**
   **Central Committee, A.K. Gopalan Bhavan**
   **27–29 Bhai Vir Singh Marg, New Delhi – 110 001**

5. ಕವರಿನ ಮೇಲೆ **"Draft Political Resolution"** ಎಂದು ಬರೆದಿರಬೇಕು.
6. ಫ್ಯಾಕ್ಸ್ ಮೂಲಕ ಕಳಿಸಿದರೆ ಅಸ್ಪಷ್ಟವಾಗಿರುತ್ತದೆಯಾದ್ದರಿಂದ ಫ್ಯಾಕ್ಸ್ ಮೂಲಕ ಕಳಿಸಬೇಡಿ;
7. ಇ–ಮೆಲ್ ಮೂಲಕ ತಿದ್ದುಪಡಿಗಳನ್ನು ಕಳಿಸುವವರು ವರ್ಡ್ ಫೈಲ್‌ನಲ್ಲಿ ಮಾತ್ರ ಕಳಿಸಿ. ಇಂಗ್ಲಿಷ್ ಅಲ್ಲದ ಭಾಷೆಯಲ್ಲಿ ಕಳಿಸುವವರು ಪಿಡಿಎಫ್ ಫೈಲ್ ಕಳಿಸಿ.
8. ಇ–ಮೆಲನ್ನು pol@cpim.org ವಿಳಾಸಕ್ಕೆ ಕಳಿಸಿ ಮತ್ತು ವಿಷಯ **"Amendments to the Draft Political Resolution"** ಎಂದು ನಮೂದಿಸಿ.
9. ಕನ್ನಡದಲ್ಲಿ ತಿದ್ದುಪಡಿಗಳನ್ನು ಕಳಿಸಲಿಚ್ಚಿಸುವವರು ಈ ಕೆಳಗಿನ ವಿಳಾಸಕ್ಕೆ ಪೋಸ್ಟ್ ಮೂಲಕ ಕಳಿಸಬಹುದು:

   **ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ**
   **ಇ.ಎಂ.ಎಸ್.ಭವನ, ನಂ. 37/ಎ, 8ನೇ ಕ್ರಾಸ್,**
   **ಮಹಾಲಕ್ಷ್ಮಿ ಲೇ ಔಟ್, ಬೆಂಗಳೂರು 560086**

   ಅಥವಾ cpimkarnataka@gmail.com ಗೆ ಇ–ಮೆಲ್ ಮಾಡಬಹುದು. ತಿದ್ದುಪಡಿ ನುಡಿ, ಬರಹ ಅಥವಾ ಯುನಿಕೋಡ್ ಫಾಂಟಿನಲಿದ್ದು ವರ್ಡ್ ಫೈಲಿನಲ್ಲಿರಬೇಕು. ಕವರಿನ ಮೇಲೆ ಅಥವಾ ಇ–ಮೈಲಿನ ವಿಷಯದಲ್ಲಿ **"ಕರಡು ರಾಜಕೀಯ ನಿರ್ಣಯಕ್ಕೆ ತಿದ್ದುಪಡಿ"** ಎಂದು ಸ್ಪಷ್ಟವಾಗಿ ನಮೂದಿಸಿರಬೇಕು
10. ತಿದ್ದುಪಡಿಗಳನ್ನು ಈ ಕೆಳಗಿನ ರೂಪದಲ್ಲಿ ಕಳಿಸಿದರೆ ಸಹಾಯವಾಗುತ್ತದೆ:

| ಕ್ರಮ ಸಂ. | ಪ್ಯಾರಾ ಸಂ. | ಸಾಲಿನ ಸಂ. | ತಿದ್ದುಪಡಿ | ಕಳಿಸುವವರ ಹೆಸರು |
|---|---|---|---|---|
| | | | | |

# 21ನೇ ಮಹಾಧಿವೇಶನದ
# ಕರಡು ರಾಜಕೀಯ ನಿರ್ಣಯ

**ಜನವರಿ 2015** **ರೂ.20**

ಪ್ರಕಟಣೆ: **ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ),** ಕರ್ನಾಟಕ ರಾಜ್ಯ ಸಮಿತಿ
ಇ.ಎಂ.ಎಸ್. ಭವನ, ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್,
ಬೆಂಗಳೂರು–560 086